ಪುಸ್ತಕ ಪ್ರಪಂಚ

ಸಂಪುಟ ೫೦ ಏಪ್ರಿಲ್ ೨೦೦೮ ಸಂಚಿಕೆ ೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟನೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಸಂವಿಧಾನ ಪರಾಮರ್ಶೆ : ಸಾಧಕ-ಬಾಧಕ

ಜೀವನದ ಅಥವಾ ಪ್ರತಿಭೆಯ ಪ್ರಮುಖ ಲಕ್ಷಣಗಳೆಂದರೆ ವಿಕಸನ ಸಾಮರ್ಥ್ಯ, ಚಲನಶೀಲತೆ ಮತ್ತು ನಿರಂತರ ಸೃಜನಾತ್ಮಕತೆ. ಚಲನಶೀಲತೆಯೇ ಜಗತ್ತಿನ ಮೂಲ ಸ್ವರೂಪ. ಸೃಷ್ಟಿನಿಯಮವೇ ಅದು. ಚಲನೆ ನಿಂತಂದೇ ಲಯ ಅಥವಾ ಸಾವು. ಚಲನಶಕ್ತಿ ಮತ್ತು ಸೃಜನ ಸಾಮರ್ಥ್ಯವಿರದಿದ್ದರೆ, ಜಗತ್ತು ಹೋಮರ್ ವ್ಯಾಸ ವಾಲ್ಮೀಕಿಯರನ್ನಾಗಲಿ, ಬುದ್ಧ ಕ್ರಿಸ್ತ ಗಾಂಧಿಯರನ್ನಾಗಲಿ, ಗೆಲಿಲಿಯೊ ನ್ಯೂಟನ್ ಐನ್‌ಸ್ಟಿನ್‌ರನ್ನಾಗಲಿ ಕಾಣುವಂತಿರಲಿಲ್ಲ. ಯಾವುದೇ ಸಂಸ್ಥೆಯಾಗಲಿ, ತತ್ತ್ವವಾಗಲಿ ಕಾಲಕಾಲಕ್ಕೆ ಬದಲಾಗುತ್ತಿದ್ದರೆ, ಹೊಸ ಹೊಸ ಚೈತನ್ಯವನ್ನು ಪಡೆಯುತ್ತಿದ್ದರೆ ಮಾತ್ರ ಅದರ ಉಳಿವು ಸಾಧ್ಯ. ದ್ವಾಪರ ಕಲಿಯುಗಕ್ಕೆ ಅವಕಾಶ ಮಾಡಿಕೊಡದಿದ್ದರೆ ಸಮಾಜಕ್ಕೆ ಉಸಿರುಕಟ್ಟುತ್ತದೆ. ಯಾವುದೇ ಒಳ್ಳೆಯ ವ್ಯವಸ್ಥೆ ಮಡುಗಟ್ಟಿದಾಗ ಜಗತ್ತು ನಾರುವುದರಿಂದ, ಹೊಸ ವ್ಯವಸ್ಥೆಗೆ ಹಳೆಯ ಪರಂಪರೆ ದಾರಿ ಮಾಡಿಕೊಡಬೇಕೆಂದು ಟೆನಿಸನ್ ಹೇಳಿದ್ದುಂಟು. ವೇದ ಕಾಲದ ಸಂಪ್ರದಾಯ ಇಂದಿನ ಜಗತ್ತಿಗೊಗ್ಗುವುದುಂಟೆ? ಮಹಾಭಾರತ ಕಾಲದ ನಿಯೋಗ ಪದ್ಧತಿಯನ್ನಾಗಲಿ, ಬಹುವಲ್ಲಭಾ ಪರಂಪರೆಯನ್ನಾಗಲೀ ಇಂದಿನ ಭಾರತೀಯರು ಒಪ್ಪಿಕೊಳ್ಳುವುದುಂಟೇ ? ನಿತ್ಯಪರಿವರ್ತನೆ ಮತ್ತು ಪುನರುಜ್ಜೀವನಗಳ ಮೂಲಕ ದೇಶ ಸಮಾಜಗಳು ತುಕ್ಕು ಹಿಡಿಯದೆ, ನುಸಿ ತಗುಲದೆ ತೇಜೋಮಯವಾಗಿ ಉಳಿಯಲು ಸಾಧ್ಯವಾಗಿದೆ. ನಿರಂತರ ಸಂಶೋಧನೆ ಪರಾಮರ್ಶೆಗಳ ಮೂಲಕ ಸತ್ಯ ಶೋಧನೆ ನಡೆಯಬೇಕಾಗಿದೆ. ಈ ತತ್ತ್ವ ಜೀವನದ ಸಕಲ ವ್ಯವಹಾರಗಳಿಗೂ ಸಮುಚಿತವಾಗಿ ಅನ್ವಯವಾಗುತ್ತದೆ. ಇದು ಸಮನ್ವಯ ಸಿದ್ಧಾಂತದ ತಿರುಳೂ ಹೌದು.

ಸದ್ಯದ ಸಂವಿಧಾನ ಪರಾಮರ್ಶನ ಪ್ರಯತ್ನವನ್ನು ಇದೇ ಸಿದ್ಧಾಂತದ ಒರೆಗಲ್ಲಿನಲ್ಲಿ ಪರೀಕ್ಷಿಸಿ ನೋಡಬಹುದು. ಈ ಸಂದರ್ಭದಲ್ಲಿ ಅಮೆರಿಕಾ ಸಂವಿಧಾನ ನಡೆದು ಬಂದ ದಾರಿಯನ್ನು ಗಣನೆಗೆ ತೆಗೆದುಕೊಂಡರೆ ಹೆಚ್ಚು ಅನುಕೂಲವಾದೀತೆಂದು ತೋರುತ್ತದೆ. ೧೭೭೬ರಲ್ಲಿ ಪ್ರಕಟಣೆಗೊಂಡ ಆ ಸಂವಿಧಾನದ ರಚನೆಯಲ್ಲಿ ಥಾಮಸ್ ಜಫರ್ಸನ್‌ನದು ಪ್ರಧಾನ ಪಾತ್ರ. ಆ ಸಮಯದಲ್ಲಿ ಅವನು ಹೇಳಿದ ಮಾತು ಗಮನಾರ್ಹವಾಗಿವೆ: 'ನಾವೀಗ ಘೋಷಿಸಿರುವ ಸಂವಿಧಾನ ಕಾಲಕ್ಕೂ ಸರಿಯೆಂದು ಹೇಳಲಾರೆ. ಇದರಿಂದ ಎಲ್ಲ ಕಾಲದ ಜನರನ್ನು ಬಂಧಿಸುವುದೂ ತಪ್ಪು. ಆಯಾಯ ಕಾಲದ ಜಾಯಮಾನಕ್ಕನಗುಣವಾಗಿ, ಪ್ರತಿಯೊಂದು ಪೀಳಿಗೆಯ ಆಶೋತ್ತರಗಳ ಪೂರೈಕೆಗಾಗಿ ಸಂವಿಧಾನವನ್ನು ಬದಲಾಯಿಸಿಕೊಳ್ಳಬೇಕಾಗಬಹುದು.[1] ಈ ಇನ್ನೂರಿಪ್ಪತ್ತೈದು ವರ್ಷಗಳ ದೀರ್ಘಾವಧಿಯಲ್ಲಿ ಕೇವಲ ಮೂವತ್ತು ತಿದ್ದುಪಡಿಗಳಾಗಿವೆ. ಕೇವಲ ಐವತ್ತು ವರ್ಷಗಳ ಹಿಂದೆ, ನಾಡಿನ ಅಂದಿನ ಅದ್ವಿತೀಯ ಪ್ರತಿಭಾವಂತರು, ವಿದ್ವಾಂಸರು, ಚಿಂತಕರು, ರಾಷ್ಟ್ರಪ್ರೇಮಿಗಳು ರೂಪಿಸಿದ ಭಾರತದ ಸಂವಿಧಾನ ಬಹುಜನರ ಪ್ರಶಂಸೆಗೊಳಗಾಗಿತ್ತು, ಅದು ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾಗಿದೆಯೆಂಬ ಕೀರ್ತಿಗೂ ಪಾತ್ರವಾಗಿದೆ. ಸಂವಿಧಾನದ ಯಶಸ್ಸು ಆಡಳಿತ ನಡೆಸುವವರ ಕೈಲಿದೆ; ಅವರು ಸಜ್ಜನರಾದರೆ ಅದು ರಾಷ್ಟ್ರಾಭ್ಯುದಯದ ಸಾಧನವಾಗಬಹುದು ; ದುರ್ಜನರಾದರೆ ಅದರ ಪ್ರಗತಿಗೆ ತೊಡರುಗಾಲಾಗಬಹುದು ಎಂದು ಅದನ್ನು ರಚಿಸಿದ ಪ್ರತಿಷ್ಠಿತರು ಆಗಲೇ ಘೋಷಿಸಿದ್ದುಂಟು.

ಭಾರತದ ಜಾತಿಮತಾದಿ ಬಾಹುಳ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಸಂವಿಧಾನದ ರಚನೆ

[1] ಇದಕ್ಕೆ ನನಪೇ ಆಧಾರ.

ನಡೆದಿದೆ.ಇಂಡಿಯಾಕ್ಕೆ ಸಮಾಜವಾದೀ ಪ್ರಜಾಸತ್ತಾತ್ಮಕ ಸೆಕ್ಯುಲರ್ ಸಾರ್ವಭೌಮ ಗಣರಾಜ್ಯ ವ್ಯವಸ್ಥೆ ಬೇಕೆಂಬುದು ಸಂವಿಧಾನ ನಿರ್ಮಾಪಕರ ಉದ್ದೇಶವಾಗಿತ್ತು. ಐದು ಸಾವಿರ ವರ್ಷ ಸಾಮಾಜಿಕ ಅಸಮಾನತೆ ಅನ್ಯಾಯಗಳನ್ನು ಸರಿಪಡಿಸಬೇಕಾದ ಅನಿವಾರ್ಯತೆ ಅವರ ಮುಂದಿತ್ತು. ಏಕಮಾತ್ರ ರಾಷ್ಟ್ರ ಭಾಷೆ ಸರ್ವಮಾಧ್ಯಮವಾದರೆ ದೇಶವನ್ನು ಒಂದುಗೂಡಿಸಿ, ಭಾವೈಕ್ಯವನ್ನು ಕುದುರಿಸುತ್ತದೆಂಬ ಕಾತರತೆ ಅವರಲ್ಲಿತ್ತು. ಭಾಷಾ ಜನಾಂಗಾದಿ ವಿಚ್ಛೇದನಕಾರಕ ಶಕ್ತಿಗಳಿಂದಾಗಿ ದೇಶ ವಿಚ್ಛಿದ್ರವಾಗಬಹುದೆಂಬ ಭಯವೂ ಅವರನ್ನು ಕಾಡುತ್ತಿದ್ದಿರಬೇಕು. ಅದರಿಂದಾಗಿ ಕೇಂದ್ರ ಸರ್ಕಾರದಲ್ಲಿ ಅಧಿಕಾರವನ್ನು ಕೇಂದ್ರೀಕರಿಸುತ್ತ, ಪ್ರಜಾಸತ್ತಾತ್ಮಕ ತತ್ತ್ವವಾದ ವಿಕೇಂದ್ರೀಕರಣಕ್ಕೆ ಎಳ್ಳುನೀರೆರೆಯಲಾಯಿತು.೩೫೬ನೆಯ ನಿಬಂಧನೆಯೇ ಇದಕ್ಕೆ ಸಾಕ್ಷಿ. ಕೇಂದ್ರಸರ್ಕಾರದ ಯಜಮಾನಿಕೆಯಿಂದಾಗಿ, ಏಕಮಾತ್ರ ಭಾಷೆಯ ಗೌಡಿಕೆಯಿಂದಾಗಿ, ಕೇಂದ್ರೀಕರಣದ ವೈಪರೀತ್ಯದಿಂದಾಗಿ, ಉತ್ತರ-ದಕ್ಷಿಣಗಳ ತಾರತಮ್ಯದಿಂದಾಗಿ ಪ್ರಾದೇಶಿಕ ಪಕ್ಷಗಳು ಪ್ರಬಲಗೊಂಡು, ರಾಷ್ಟ್ರೀಯ ಪಕ್ಷಗಳು ಹಾಗೂ ಕೇಂದ್ರನಾಯಕರು ಅವುಗಳನ್ನೋಲೈಸಬೇಕಾಗಿದೆ. ಅತಂತ್ರ ಲೋಕಸಭೆ ವಿಧಾನಸಭೆಗಳಿಗೆ ಆ ಪಕ್ಷಗಳೇ ಕಾರಣವೆಂಬುದೂ ನಿಜ. ಸರ್ಕಾರಗಳು ಸುಭದ್ರವಿಲ್ಲದಾಗ, ಯೋಗ್ಯರು ಶಾಸನಸಭೆ ಸಚಿವ ಮಂಡಲಿಗಳನ್ನು ಪ್ರವೇಶಿಸದಿದ್ದಾಗ ಇಡೀ ವ್ಯವಸ್ಥೆಯೇ ಕುಸಿದು ಬೀಳುತ್ತದೆಂಬುದು ಬುದ್ಧಿಜೀವಿಗಳ ಸಂಕಟವಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ದೇಶದಲ್ಲಿ ಅಜಾಗರೂಕತೆವುಂಟಾಗಬಹುದೆಂಬ ಕೆಲವರ ಅಂಜಿಕೆಯೂ ನಿರಾಧಾರವಾದುದ್ದಲ್ಲ.

ಸಂವಿಧಾನದ ಪರಾಮರ್ಶೆಯಿಂದ ಕೂಡಲೇ ಎರಡು ಪರ-ವಿರೋಧ ಚಿಂತಕರ ಪಕ್ಷಗಳು ಹುಟ್ಟಿಕೊಂಡಿರುವುದು ಸಹಜವೇ. ಅವುಗಳ ಆವಶ್ಯಕತೆಯೂ ಇದೆ. ಸಂವಿಧಾನದ ನಿಬಂಧನೆಗಳ ಪ್ರಕಾರವೇ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳಿಗೆ ಚುರುಕು ಮುಟ್ಟಿಸುವ ಪಕ್ಷಕ್ಕೆವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಬಹುದು. ಸಂವಿಧಾನದ ಮೂಲಭೂತ ಸ್ವರೂಪವನ್ನು ಬದಲಾಯಿಸುವ ಹಕ್ಕು ಲೋಕಸಭೆಗಿಲ್ಲ; ಹೊಸ ರಾಜ್ಯಾಂಗಸಭೆಯಲ್ಲಿ ಮಾತ್ರ ಏನು ಬೇಕಾದರೂ ಬದಲಾವಣೆ ಮಾಡಬಹುದು; ಕೇವಲ ಐವತ್ತು ವರ್ಷಗಳ ಹಿಂದೆ ಸಂವಿಧಾನ ನಾಡಿನ ಶ್ರೇಷ್ಠತಮ ಕಾನೂನು ಪಂಡಿತರಿಂದ ನಿರ್ಮಾಣಗೊಂಡ ಅದು ಹಳೆಯದಾಗಿಲ್ಲ; ಬದಲಾವಣೆ ಅಗತ್ಯವಾಗಿದ್ದರೆ, ತಿದ್ದುಪಡಿಗಳ ಮೂಲಕ ಮಾಡಿಕೊಳ್ಳಬಹುದು; ಪರಾಮರ್ಶೆಯ ಇಂಗಿತವನ್ನು ನೋಡಿದರೆ ಮೂಲಕ್ಕೆ ಕೊಡಲಿ ಏಟು ಹಾಕುವಂತೆ ಕಾಣುತ್ತಿದೆ ; ಬಾಬರಿ ಮಸೀದಿ ವಿನಾಶ, ಸರ್ಕಾರಿ ನೌಕರರು ಆರೆಸ್ಸೆಸ್‌ಗೆ ಸೇರಬಹುದೆಂಬ ಸುತ್ತೋಲೆ, ಐಸಿಎಚ್‌ಆರ್ ಯಿಂದ ತಜ್ಞರು ಬರೆದಿರುವ ಇತಿಹಾಸ ಸಂಪುಟಗಳ ತಿರಸ್ಕಾರ, ಇವೇ ಮೊದಲಾದುವುಗಳ ಬಗ್ಗೆ ಕ್ಷಕಿರಣ ಹಾಯಿಸಿದಾಗ, ಪರಾಮರ್ಶೆಯ ಹಿಂದೆ ನಿಗೂಢ ಕಾರ್ಯಕ್ರಮದ ಚಾಲನೆಯ ಆಲೋಚನೆ ಇರುವಂತೆ ತೋರುತ್ತದೆ ಎಂಬುದು ಪರಾಮರ್ಶೆಯ ವಿರೋಧಿಗಳ ವಾದ. ಸಂವಿಧಾನದ ನಿಬಂಧನೆ, ನಿರ್ದೇಶನ,ಮಾರ್ಗಸೂಚಿಗಳು, ಆಶಯಗಳು, ಇವನ್ನು ಸರ್ಕಾರದ ಮೂರು ಅಂಗಗಳು ಸರಿಯಾಗಿ ನೆರವೇರಿಸುತ್ತಿವೆಯೇ ಎಂಬ ಅಧ್ಯಯನ ಅನ್ವೇಷಣೆಗಳಿಗೆ ಮಾತ್ರವೇ ಪರಾಮರ್ಶೆ ಸೀಮಿತಗೊಂಡರೆ, ಒಪ್ಪಬಹುದೆಂಬ ಭಾವನೆ ವಿರೋಧಿಗಳಿಗಿದ್ದಂತೆ ತೋರುತ್ತದೆ.

ಸುಮಾರು ೮೦ ತಿದ್ದುಪಡಿಗಳಾಗಿರುವಾಗ ಸಂವಿಧಾನದಲ್ಲಿ ಏನೋ ಕೊರತೆಯಿರಬೇಕಲ್ಲವೆ? ಇಷ್ಟೊಂದು ತಿದ್ದುಪಡಿಗಳಾಗಿರುವಾಗ ಸಂವಿಧಾನದ ಮೂಲ ಸ್ವರೂಪ ಉಳಿದಿದೆಯೆ? ಇಷ್ಟಾದರೂ ರಾಜಕೀಯ ಸ್ಥಿರತೆ ಇದೆಯೆ? ಪ್ರಧಾನಿ ಅಥವಾ ಮುಖ್ಯಮಂತ್ರಿಗಳ ಸ್ಥಾನ ಅಭದ್ರವಾಗಿರುವಾಗ ಅವರು ಅಭಿವೃದ್ಧಿಯ ಕಡೆಗೆ ಲಕ್ಷ ವಿಡಲು ಸಾಧ್ಯವಾಗಿದೆಯೆ ? ಲೋಕಸಭೆ ಮತ್ತು ಶಾಸನ ಸಭೆಗಳಿಗೆ ಮೇಲಿಂದ ಮೇಲೆ ಚುನಾವಣೆ ನಡೆಯುವುದಾದರೆ, ಅನೈತಿಕತೆಗೆ ದಾರಿಮಾಡಿಕೊಟ್ಟಂತಾಗುವುದಿಲ್ಲವೆ ? ಆ ಎರಡು ಸಂಸ್ಥೆಗಳಿಗೂ ಪ್ರತ್ಯೇಕ ಚುನಾವಣೆ ಸರಿಯೆ? ಐದು ವರ್ಷಕ್ಕೊಮ್ಮೆಯೇ ಚುನಾವಣೆ ನಡೆಯಬೇಕು, ಆ ಮಧ್ಯೆ ನಡೆಯಕೂಡದು, ಅಂಥ ಪರಿಸ್ಥಿತಿಯನ್ನೆದುರಿಸಲು ಸಂವಿಧಾನದಲ್ಲಿಯೇ ನಿರ್ದೇಶನಗಳನ್ನು ಸೇರಿಸುವುದೊಳ್ಳೆಯದು. ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕೆಂದು ಪರಿಗಣಿತವಾಗತಕ್ಕದ್ದು. ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಆಯಾಯ ಮಕ್ಕಳಿಗೆ ಮಾತ್ರ ಸೀಮಿತವೆಂದು ಸ್ಪಷ್ಟಪಡಿಸಬೇಕು. ಉದ್ಯೋಗದ ಹಕ್ಕನ್ನು ಸೇರಿಸಬೇಕು. ಅಷ್ಟೇ ಅಲ್ಲ, ನೌಕರರ ಕರ್ತವ್ಯಗಳನ್ನೂ ಸ್ಪಷ್ಟಪಡಿಸಬೇಕು. ಇದು ಪರಾಮರ್ಶೆ ಪರವಾದವರ ಅಭಿಪ್ರಾಯ.

ಮೂಲಭೂತ ಹಕ್ಕುಗಳನ್ನು ಬದಲಾಯಿಸಬಹುದೆಂಬ, ದಲಿತರ ಮತ್ತು ಅಲ್ಪಸಂಖ್ಯಾತರ ಸವಲತ್ತುಗಳನ್ನು ಕಸಿದುಕೊಳ್ಳಬಹುದೆಂಬ ಶಂಕೆ ಕೆಲವು ಜನರಲ್ಲಿದೆ. ಅವನ್ನು ಮುಟ್ಟುವುದಿಲ್ಲವೆಂದು ಪ್ರಧಾನಿಗಳೂ ಪರಾಮರ್ಶನ ಸಮಿತಿಯ ಅಧ್ಯಕ್ಷರೂ ವಚನ ನೀಡಿದ್ದಾರೆ. ಪರಾಮರ್ಶೆ ಅನವಶ್ಯವೆಂದು ಜನವರಿ೨೬ರಂದು ಘೋಷಿಸಿದ ರಾಷ್ಟ್ರಪತಿಗಳು ಫೆಬ್ರುವರಿ ೨೪ರಂದು ಸಮಿತಿಯ ರಚನೆ ಸರಿಯೆಂದು ಹೇಳಿದ್ದು ತರವೆ ? ಸರ್ಕಾರ ಬರೆದುಕೊಟ್ಟ ಭಾಷಣವನ್ನವರು ಲೋಕಸಭೆ ರಾಜ್ಯಸಭೆಗಳ ಜಂಟಿ ಅಧಿವೇಶನದಲ್ಲಿ ಓದಿದರಷ್ಟೆ. ಅದು ಅನಿವಾರ್ಯ. ಆದರೆ ಸರ್ಕಾರ ಸಮಿತಿಗೆ ವಹಿಸಿರುವ ಜವಾಬ್ದಾರಿಯನ್ನು ಸ್ಪಷ್ಟಪಡಿಸಿದಂತಿಲ್ಲ.

ಪರಾಮರ್ಶನ ಸಮಿತಿಯ ರಚನೆ ತಪ್ಪಲ್ಲವೆಂದೇ ಹೇಳಬೇಕು. ಸ್ವಾತಂತ್ರ್ಯ ಬಂದ ಕೂಡಲೇ ರಾಜ್ಯಾಂಗಸಭೆ ರಚನೆಯಾಯಿತಷ್ಟೆ. ಸ್ವಾತಂತ್ರ್ಯ ಲಾಭದ ಭಾವುಕತೆಯಿದ್ದದ್ದರಿಂದ, ಬಹುಜನರಿಗೆ ಸಂವಿಧಾನದ ಕಲ್ಪನೆಯೇ ಇಲ್ಲದ್ದರಿಂದ, ಬಹುಪಕ್ಷಗಳಿಲ್ಲದೆ ಏಕಮಾತ್ರ ರಾಷ್ಟ್ರೀಯ ಪಕ್ಷವೊಂದರ ಭರಾಟೆ ವಿಶೇಷವಾಗಿದ್ದುದರಿಂದ ಎಂಥದೋ ಒಂದು ಸಂವಿಧಾನ ಬಂದರೆ ಸಾಕೆಂಬ ಭಾವನೆ ಇದ್ದ ಕಾಲವದು. ಆಗಿನ ನಮ್ಮ ನಾಯಕರಿಗೆ ಆಡಳಿತದ ಅನುಭವ ಸಾಕಷ್ಟಿರಲಿಲ್ಲ. ಸಂವಿಧಾನ ರಚನೆಗೆ ಹಲವು ದೇಶಗಳ ಸಂವಿಧಾನಗಳನ್ನು ಮಾದರಿಯಾಗಿಟ್ಟುಕೊಂಡದ್ದುಂಟು. ಆದರೆ ಅದರ ಸಾಫಲ್ಯವೈಫಲ್ಯಗಳು ಗೊತ್ತಾದದ್ದು ಅದರ ಆಧಾರದ ಮೇಲೆ ಆಡಳಿತ ನಡೆಸಿದಾಗ. ಈ ಐವತ್ತು ವರ್ಷದಲ್ಲಿ ಅದು ಎಷ್ಟರ ಮಟ್ಟಿಗೆ ಜನರ ಆಶೋತ್ತರಗಳನ್ನು ಈಡೇರಿಸುತ್ತಿದೆ, ನಮ್ಮ ಪರಿಸರಕ್ಕೆ ಅದೆಷ್ಟರ ಮಟ್ಟಿಗೆ ಹೊಂದಿಕೊಂಡಿದೆ, ಅದು ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿದೆಯೆ? ನಾಡಿನ ಮೂಲಭೂತ ಸಮಸ್ಯೆಗಳಾದ ಜಾತೀಯತೆ ಅಸ್ಪೃಶ್ಯತೆಯನ್ನು ಹೋಗಲಾಡಿಸಿದೆಯೆ? ರಾಷ್ಟ್ರದ ಎಲ್ಲ ಪ್ರಜೆಗಳು ಅದನ್ನು ಏಕ ಪ್ರಕಾರವಾಗಿ ಗೌರವಿಸುತ್ತಿದ್ದಾರೆಯೆ? ಇಂಥ ಪ್ರಶ್ನೆಗಳು ಸಂವಿಧಾನಕ್ಕೆ ಸವಾಲಾಗಿವೆ. ಇಷ್ಟರ ಮೇಲೆ ಸಮಿತಿಯ ಶಿಫಾರಸುಗಳು ಕಾನೂನಿನ ಸಾಮರ್ಥ್ಯವನ್ನು ಪಡೆಯಬೇಕಾದರೆ, ಸಂಸತ್ತು ಮತ್ತು ಶಾಸನ ಸಭೆಗಳ ಒಪ್ಪಿಗೆಬೇಕೆಂಬುದನ್ನು ಮರೆಯಲಾಗದು. ಅವು ಶಿಫಾರಸುಗಳಾಗಿ ಉಳಿದರೂ

ಆಶ್ಚರ್ಯಪಡಬೇಕಾಗಿಲ್ಲ. ಆದ್ದರಿಂದ ವಿರೋಧವಾಗಲಿ, ಮೆರವಣಿಗೆಯಾಗಲಿ, ಪ್ರದರ್ಶನವಾಗಲಿ ಅನಾವಶ್ಯಕವೆನಿಸುತ್ತದೆ. ಪರಾಮರ್ಶೆಗೆ ವಿರೋಧವಿದೆಯೆಂಬುದು ಸರ್ಕಾರಕ್ಕೆ ಗೊತ್ತಾಗಬೇಕು. ಅಷ್ಟರಮಟ್ಟಿಗೆ ವಿರೋಧ ವ್ಯಕ್ತವಾದದ್ದು ಸರಿ.

ಇನ್ನು ಮುಂದೆ ವಕೀಲರು, ರಾಜಕಾರಣಿಗಳು ಮತ್ತು ಬುದ್ಧಿಜೀವಗಳು ಮಾಡಬೇಕಾದ್ದೇನು? ಎಲ್ಲ ಪೂರ್ವಗ್ರಹ ದುರಾಗ್ರಹಗಳನ್ನು ತ್ಯಜಿಸಿ, ನಿರ್ವಿಕಾರ ಬುದ್ಧಿಯಿಂದ, ನಿರ್ಮಮತೆಯಿಂದ, ದೇಶಹಿತದ ದೃಷ್ಟಿಯಿಂದ, ನಾಡಿನ ಎಲ್ಲ ಕಡೆಗಳಲ್ಲಿಯೂ ಸಭೆ ಸೇರಿ, ಸಂವಿಧಾನದ ಎಲ್ಲ ಮುಖಗಳನ್ನು ಇಲ್ಲಿಯವರೆಗಿನ ಆಡಳಿತದ ಹಿನ್ನೆಲೆಯಲ್ಲಿ ಚರ್ಚಿಸಬೇಕು. ತಮ್ಮ ವಾದಕ್ಕೆ ಬೇಕಾದ ಮಾಹಿತಿ ಸಾಕ್ಷಿಪುರಾವೆಗಳನ್ನು ಸಂಗ್ರಹಿಸಬೇಕು. ಜನಾಭಿಪ್ರಾಯವನ್ನು ಪಡೆಯಬೇಕು ; ಅವಶ್ಯವಾದರೆ ರೂಪಿಸಬೇಕು. ಯಾರೂ ಹಿಂಸಾಕೃತ್ಯಕ್ಕೆ ತೊಡಗಬಾರದು. ಎಲ್ಲವಾದ ವಿವಾದಗಳು ಪರಿಣತಿಯ ಮಾರ್ಗದಲ್ಲಿಯೇ ನಡೆಯಬೇಕು.

ಯಾವ ಯಾವ ವಿಷಯಗಳಿಗೆ ಒತ್ತು ಕೊಡಬೇಕೆಂಬುದರಲ್ಲಿ ಸೂಚಿಸಬಹುದೆಂದು ತೋರುತ್ತದೆ. ೧. ಪೂರ್ವಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಪಿಯುಸಿವರೆಗಿನ ಶಿಕ್ಷಣ ಕಡ್ಡಾಯವಾಗಬೇಕು; ಉನ್ನತ ಶಿಕ್ಷಣ ಸಮಾಜದ ಜವಾಬ್ದಾರಿಯಾಗಬೇಕು. ೨. ಪ್ರಾದೇಶಿಕ ಭಾಷೆ ಕಡ್ಡಾಯ ಶಿಕ್ಷಣ ಮಾಧ್ಯಮವಾಗಬೇಕು. ಬೇರೆ ಭಾಷೆಗಳನ್ನು ಕಲಿಯಲು ಸಾಕಷ್ಟು ಅವಕಾಶ ಕಲ್ಪಿಸಬೇಕು. ಹದಿನಾಲ್ಕು ಭಾಷೆಗಳೂ ಅಧಿಕೃತ ಆಡಳಿತ ಭಾಷೆಗಳಾಗಬೇಕು. ೩. ವಿಕೇಂದ್ರೀಕರಣ ತತ್ತ್ವವನ್ನೊಪ್ಪಿಕೊಂಡು, ಕೇಂದ್ರ ಸರ್ಕಾರದ ಭದ್ರತೆ ರಾಜ್ಯಸರ್ಕಾರಗಳ ಭದ್ರತೆಯನ್ನವ ಲಂಬಿಸಿದೆಯೆಂಬ ವಾಸ್ತವಾಂಶವನ್ನರಿತುಕೊಂಡು, ಪ್ರತಿ ರಾಜ್ಯಕ್ಕೂ ಸ್ವಾಯತ್ತತೆ ನೀಡಬೇಕು. ೩೫೬ನೆಯ ನಿಬಂಧನೆಯನ್ನು ತೆಗೆಯಬೇಕು. ಕೇಂದ್ರ ಸರ್ಕಾರದ ತೀರ್ಮಾನವೇ ಸರಿಯೆಂಬ ಗೌಡಿಕೆಯ ಮನೋಭಾವ ಹೋಗಬೇಕು. ಕೇಂದ್ರರಾಜ್ಯಗಳ' ಸಂಬಂಧ ಸಂಯುಕ್ತ ವ್ಯವಸ್ಥಾ ವಿಧಾನಕ್ಕೆ ಹೊಂದಿಕೊಳ್ಳಬೇಕು. ಕೇಂದ್ರ ಸರ್ಕಾರ ಸಿವಿಲ್ ಆಡಳಿತದ ಭಾರವನ್ನೂ ನೌಕರರ ಮತ್ತು ಮಂತ್ರಿಗಳ ಸಂಖ್ಯೆಯನ್ನೂ ಕಡಮೆಮಾಡಿಕೊಳ್ಳಬೇಕು. ಅದು ಯಜಮಾನ ಸರ್ಕಾರವೆಂಬ ಪ್ರತಿಷ್ಠೆಯನ್ನು ತೊರೆದು ಸಂಯುಕ್ತ ರಾಜ್ಯ ವ್ಯವಸ್ಥೆಯ ಪ್ರಾತಿನಿಧಿಕ ಮಂಡಲಿಯಂತೆ ವರ್ತಿಸಬೇಕು. ಭಾರತದಂಥ ವಿಶಾಲ ದೇಶವನ್ನು ಯಾವುದೋ ಮೂಲೆಯಲ್ಲಿ ಕುಳಿತು ಕೇಂದ್ರ ಸರ್ಕಾರ ಸಮರ್ಥವಾಗಿ ಆಳಲಾರದು. ಅದು ವಿದೇಶೀಯ ವ್ಯವಹಾರ, ನೆರೆಹೊರೆಯ ರಾಷ್ಟ್ರಗಳಿಂದಾಗುವ ಅಪಾಯ, ನಾಣ್ಯವ್ಯವಸ್ಥೆ, ರೈಲ್ವೆಇಲಾಖೆ, ಉಗ್ರಗಾಮಿಗಳ ನಿರ್ಮೂಲನ, ರಾಜ್ಯರಾಜ್ಯಗಳ ನಡುವಣ ವಿವಾದ, ಇಂಥವನ್ನು ಸರಿಯಾಗಿ ನೋಡಿಕೊಂಡರೆ ಸಾಕು. ಸಚಿವರ ಪ್ರವಾಸಗಳನ್ನು ನಿಯಂತ್ರಿಸಬೇಕು. ೪. ಈಗಿರುವ ಯಾವೊಂದು ವ್ಯವಸ್ಥೆಯೂ ಭ್ರಷ್ಟಾಚಾರವನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಲೋಕಾಯುಕ್ತ ಇಲಾಖೆಯ ಅಧಿಕಾರಿಗಳು, ನ್ಯಾಯಮೂರ್ತಿಗಳೇ ಭ್ರಷ್ಟಾಚಾರಿಗಳಾಗಿರುವಾಗ, ಆ ಅನಿಷ್ಟವನ್ನು ಶೀಘ್ರ, ಕಠಿನ ಶಿಕ್ಷೆಗಳ ಮೂಲಕ ನಿಯಂತ್ರಿಸ ಬೇಕಾಗಿದೆ. ೫. ದಾರಿತಪ್ಪಿದ ನ್ಯಾಯಾಂಗವನ್ನು ಸರಿಪಡಿಸುವ ಹೊಣೆ ಯಾರದು ? ಅದರ ವಿಲಂಬ ನೀತಿಯಿಂದಾಗಿ ಅನೈತಿಕತೆ ಅನ್ಯಾಯಗಳು ಉಲ್ಬಣಗೊಳ್ಳುತ್ತಿವೆಯೆಂಬುದನ್ನು ಗಮನಿಸ ಬೇಕಾಗಿದೆ. ೬. ಅಸ್ಪೃಶ್ಯತೆ ಜಾತೀಯತೆಗಳನ್ನು ನಿರ್ಮೂಲ ಮಾಡಲು ಅಂತರ್ಜಾತೀಯ ವಿವಾಹ ಗಳಿಗೆ ಪ್ರೋತ್ಸಾಹ ನೀಡಬೇಕಲ್ಲದೆ, ಅದಕ್ಕನುಗುಣವಾಗುವ ಎಲ್ಲ ಪ್ರಯತ್ನಗಳನ್ನು

ನಿರ್ದಾಕ್ಷಿಣ್ಯವಾಗಿ ಕೈಗೊಳ್ಳಬೇಕು. ೭. ಜಾತಿ ಜನಾಂಗ ಭೇದವನ್ನು ಮರೆತು ಜನಸ ನಿಯಂತ್ರಣವನ್ನು ಸಾಧಿಸಬೇಕು. ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದವರನ್ನು ಶಾಸಕ ಮಂತ್ರಿ ಪದವಿಯಿಂದ ಹಿಡಿದು, ಸರ್ಕಾರದ ಸಕಲ ಸವಲತ್ತುಗಳಿಂದ ಬಹಿಷ್ಕರಿಸಬೇಕು. ೮. ರಾಜಕೀಯ ಪಕ್ಷ ಬಾಹುಳ್ಯವನ್ನು ಕನಿಷ್ಠ ಪ್ರಮಾಣಕ್ಕಿಳಿಸಬೇಕು. ನಾಲ್ಕು ರಾಷ್ಟ್ರೀಯ ಮತ್ತು ಎರಡು ಪ್ರಾದೇಶಿಕ ಪಕ್ಷಗಳಿಗೆ ಸೀಮಿತ ಗೊಳಿಸಬೇಕು. ೯. ಹಣ ಹೆಂಡಗಳ ಪ್ರಭಾವ, ಗಂಡಾಗುಂಡಿ, ಪಕ್ಷಾಂತರ ನಿಷೇಧ. ರಾಜಕೀಯ ಪಕ್ಷಗಳ ಕಾರ್ಯ ನೀತಿನಿಯಂತ್ರಣ, ಅಪರಾಧಿ ಅಭ್ಯರ್ಥಿಗಳ ನಿರಾಕರಣೆ- ಇವೇ ಮೊದಲಾದುವು ಸೇರಿದಂತೆ ಚುನಾವಣಾ ಸಂಹಿತೆ ನವೀಕರಣಗೊಳ್ಳಬೇಕು. ಯಾವ ಕಾರಣಕ್ಕೂ ಸಂಸತ್ ಮತ್ತು ಶಾಸನ ಸಭೆಗಳ ಅವಧಿ ಐದು ವರ್ಷ ಮೀರದಂತೆ ಅಥವಾ ಕಡಮೆ ಯಾಗದಂಥ ಸೂತ್ರವನ್ನು ಕಂಡುಹಿಡಿಯಬೇಕು.೧೦. ನಿರುದ್ಯೋಗ ಸಮಸ್ಯೆಯ ನಿವಾರಣೆ ಮತ್ತು ಜನ ಸಾಮಾನ್ಯಕ್ಕೆ ಅತ್ಯಗತ್ಯ ವಸ್ತುಗಳ ಮತ್ತು ಸೌಲಭ್ಯಗಳ ಪೂರೈಕೆ .

ಸಮಿತಿಯ ರಚನೆಗೆ ಸಂಬಂಧಿಸಿದ ವಿವಾದದ ಮೂಲಕ ಸಮಸ್ಯೆಯನ್ನು ಗೊಂದಲಗೊಳಿಸದೆ, ಸಮಿತಿ ಸರಿಯಾಗಿ ಕೆಲಸಮಾಡುವಂತೆ ನಾಯಕರು ಮತ್ತು ತಜ್ಞರು ಸಲಹೆಗಳನ್ನು ನೀಡಬೇಕಾದ್ದು ಸೂಕ್ತ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್ ಡಿಎ) ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಪರಾಮರ್ಶನ ಸಮಿತಿ ರಚನೆಯ ವಿಷಯವನ್ನು ಸೇರಿಸಿತ್ತೆಂಬುದನ್ನು ಮರೆಯಲಾಗದು. ಪರಾಮರ್ಶೆ ಅತ್ಯವಶ್ಯಕವಾದರೂ ಅದು ಕಾನೂನಾಗದೆಂಬುದನ್ನು ಜನ ಅರಿಯಬೇಕು . ಆದರೆ ಯಾವ ಉನ್ನತ ಸಮಿತಿಯೇ ಆಗಲಿ ಮೂಲ ಸಂವಿಧಾನ ಧ್ಯೇಯ ಸೂತ್ರಗಳನ್ನು ತಿರುಚಬಾರದು. ಅನಕ್ಷರತೆ ಅಜ್ಞಾನ ಅನಾರೋಗ್ಯ ದಾರಿದ್ರ್ಯ, ರಾಜಕೀಯ ಅಪರಾಧೀಕರಣಗಳನ್ನು ತೊಡೆಯುವಂಥ ಕಾರ್ಯಸೂಚಿಯನ್ನು ಒದಗಿಸಬೇಕು. ಶಿಕ್ಷಣದ ಗುಣಮಟ್ಟವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೇರಿಸುವ ನೀತಿಯನ್ನು ರೂಪಿಸಬೇಕು. ಭ್ರಷ್ಟಾಚಾರ ಮುಕ್ತ ಸ್ವಚ್ಛ ಸರ್ಕಾರ ಮತ್ತು ಸಮಾಜಗಳು ರೂಪುಗೊಳ್ಳುವಂಥ ವ್ಯವಸ್ಥೆಗೆ ಪರಾಮರ್ಶೆ ದಾರಿ ಮಾಡಿಕೊಡಬೇಕು. ಒಟ್ಟಿನಲ್ಲಿ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಶಿಸ್ತು ವ್ಯಾಪಿಸಿಕೊಂಡಾಗ ಮಾತ್ರ ದೇಶಕ್ಕೆ ಕ್ಷೇಮವೆಂಬುದನ್ನು ನಾಡಿನ ಪ್ರಜೆಗಳೆಲ್ಲರೂ ಅರಿಯಬೇಕಾಗಿದೆ.

ದೇಜಗೌ

> ರಚನಾತ್ಮಕ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾ ನಿವಾರಣೆಯ ಸ್ಥಾನವು ಇದು ಸಂಪೂರ್ಣ ಪ್ರೇಮದ ಕಾರ್ಯಕ್ರಮ. ಈ ದೃಷ್ಟಿಯಿಂದಲೇ ನಾವು ರಚನಾತ್ಮಕ ಕಾರ್ಯಕ್ರಮವನ್ನು ಅಧಿಕಾಧಿಕವಾಗಿ ಸಾಧಿಸುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕಾಗಿದೆ.
>
> -ಗಾಂಧೀಜಿ

ನಾಲ್ಕು ವೈದ್ಯಕೀಯ ಲೇಖನಗಳು

ಡಾ|| ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬಿ.ವಿ.ವ. ಸಂಘ
ಬಾಗಲಕೋಟೆ-೫೮೭೧೦೧

೧. ಹಸುಳೆ ಹಾಗೂ ಮಕ್ಕಳಲ್ಲಿ ಕಾಣುವ ರಕ್ತ ಕ್ಯಾನ್ಸರದ ಬೇರುಗಳು.

ಕ್ಯಾನ್ಸರ್ ಒಂದು ಮಾರಕ ರೋಗವೆಂದು ಎಲ್ಲರಿಗೂ ಗೊತ್ತು. ಅದರಲ್ಲೂ ರಕ್ತದ ಕ್ಯಾನ್ಸರ್ ಒಂದು ವಿಧದಲ್ಲಿ ಬಿರುಗಾಳಿಯಂತೆ ಬಂದು ಜೀವಹಾರಿಸಿಕೊಂಡು ಹೋಗುವ ಚಾಳಿಯದು. ಕೆಲವೇ ಕೆಲವು ರಕ್ತ ಕ್ಯಾನ್ಸರ್ ಪ್ರಸಾರಗಳು ದೀರ್ಘಕಾಲೀನ ಎನ್ನಬಹುದು. ಆಂಗ್ಲಭಾಷೆಯಲ್ಲಿ ರಕ್ತಕ್ಯಾನ್ಸರ್ ರೋಗವನ್ನು ಲ್ಯೂಕೇಮಿಯಾ ರೋಗ ಎಂದು ಗುರುತಿಸುತ್ತಾರೆ. ರಕ್ತದ ಶ್ವೇತ ಕಣಗಳು ಕ್ಯಾನ್ಸರ್ ಪಡೆಯುತ್ತವೆ. ರೋಗಿಯನ್ನು ಅಲ್ಪ ವೇಳೆಯಲ್ಲಿಯೇ ಕೊಂದು ಹಾಕುತ್ತವೆ.

ಹಸುಳೆಗಳಲ್ಲಿ ಹಾಗೂ ಮಕ್ಕಳಲ್ಲಿ ರಕ್ತದ ಕ್ಯಾನ್ಸರ್ ಹುಟ್ಟುವುದು ಹೇಗೆ? ಎಂಬ ಪ್ರಶ್ನೆ ಅನೇಕರನ್ನು ಚಿಂತೆಯಲ್ಲಿಟ್ಟಿದೆ. ಹಲವಾರು ಊಹೆಗಳಿದ್ದರೂ ಒಂದೂ ಖಚಿತವಾಗಿಲ್ಲ. ಈ ಊಹೆಗಳಲ್ಲಿ ಒಂದು ಊಹೆ ಪ್ರಮುಖವಾಗಿದೆ. ಅದೆಂದರೆ ವೈರಸ್ ಜೀವಿಯ ಸೋಂಕು. ಇದರ ಪ್ರಕಾರ ಹಸುಳೆ ಹಾಗೂ ಚಿಕ್ಕಮಕ್ಕಳು ಆಕಸ್ಮಿಕವಾಗಿ ಈ ಸೋಂಕನ್ನು ಪಡೆಯುತ್ತವೆ. ಈ ವೈರಸ್ ಜೀವಿ ದೇಹ ಸೇರಿ ಕ್ಯಾನ್ಸರ್ ಹುಟ್ಟಿಸುತ್ತದೆ. ಆದರೆ ಇದು ಸರಿ ಎಂದು ಯಾರಿಗೂ ಮನವರಿಕೆ ಆಗಿಲ್ಲ.

ಇನ್ನೊಂದು ಊಹೆಯ ಪ್ರಕಾರ ಶಿಶು ಇನ್ನೂ ತಾಯಿ ಗರ್ಭದಲ್ಲಿದ್ದಾಗಲೇ ರಕ್ತ ಕ್ಯಾನ್ಸರ್ ಹುಟ್ಟುತ್ತದೆ.ಇದಕ್ಕೆ ಮುಖ್ಯ ಕಾರಣವೆಂದರೆ ವಂಶವಾಹಿಗಳಲ್ಲಿ ಮೂಡುವ ವಿಕೃತಿ ಮಗು ಹುಟ್ಟುವವರೆಗೆ ಈ ವಿಕೃತಿ ವ್ಯಕ್ತಗೊಳ್ಳಲಿಕ್ಕಿಲ್ಲ. ಹುಟ್ಟಿನ ಅನಂತರ ಬಾಹ್ಯ ಪ್ರಪಂಚದಲ್ಲಿ ಕೂಸು ಬಂದಾಗ ಕ್ಯಾನ್ಸರ್ ಪ್ರಕಟಗೊಳ್ಳಬಹುದು.

ಕಾರಣ ಶಿಶು ಇನ್ನೂ ಗರ್ಭದಲ್ಲಿದ್ದಾಗಲೇ ರಕ್ತ ಪರೀಕ್ಷಿಸಿ ಆ ವಿಕಾರತೆಯನ್ನು ಗುರುತಿಸಿದರೆ ಅಂಥ ಶಿಶುಗಳನ್ನು ತಕ್ಷಣವೇ ನಾಶಪಡಿಸಲು ಸಾಧ್ಯ. ಸಾಧ್ಯವಾದರೆ ಉಪಚರಿಸಲೂ ಸಾಧ್ಯ.

೨. ಶಿಶುಗಳ ಮಿದುಳು ಪರೀಕ್ಷೆ

ಸಿ.ಟಿ. ಸ್ಕ್ಯಾನಿಂಗ್ ಉಪಕರಣ ವೈದ್ಯಕೀಯ ರಂಗದಲ್ಲಿ ಒಂದು ಕ್ರಾಂತಿಯನ್ನೇ ಮಾಡಿದೆ. ಮಿದುಳಿನ ಅಧ್ಯಯನದಲ್ಲಿ ಅದು ಇಂದು ಮಹತ್ವದ ಪಾತ್ರ ವಹಿಸುತ್ತಲಿದೆ. ಅಪಘಾತಗಳಲ್ಲಿ ತಲೆಗೆ ಗಾಯವಾದಾಗ ಸ್ಕ್ಯಾನಿಂಗ್ ವಿಧಾನ ಅಮೂಲ್ಯವೆನಿಸಿತು. ಇದು ಇನ್ನೂ ತನ್ನ ಹೆಸರನ್ನು ಮಾಡುತ್ತಿರುವಾಗಲೇ ವೈದ್ಯ ವಿಜ್ಞಾನಿಗಳಿಗೆ ಸಿ.ಟಿ.ಸ್ಕ್ಯಾನಿಂಗ್ ಉಪಕರಣಕ್ಕಿಂತ ಹೆಚ್ಚಿನ ಶಕ್ತಿಯ ಉಪಕರಣ ದೊರಕಿತು.ಇದನ್ನು ಎಮ್.ಆರ್.ಐ. (ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್) ಎಂದು ಕರೆದರು. ಈ ಉಪಕರಣ ಮಿದುಳಿನ ಸೂಕ್ಷ್ಮ ಪದರಗಳನ್ನು ಪರೀಕ್ಷಿಸುವಲ್ಲಿ ಅದ್ವಿತೀಯ ಎನಿಸಿದೆ. ಈಗ ಎಲ್ಲಿ ಹೋದರೂ ಎಮ್.ಆರ್.ಐ. ಉಪಕರಣದ ಬಳಕೆ ಬೇಕಾಗಿದೆ. ನಾವೆಲ್ಲ ಇದು ಒಂದು ಹಂತಕ್ಕೆ ಬಂದು ನಿಂತಿತು ಎನ್ನುತ್ತಿದ್ದೆವು. ವ್ಯಕ್ತಿ ಜೀವಂತನಾಗಿರುವಾಗಲೇ ಅವನ ಮಿದುಳಿನ ಎಲ್ಲ ಭಾಗಗಳನ್ನು, ಎಲ್ಲ ಕೋನ ಗಳಿಂದ ಪರೀಕ್ಷಿಸಬಹುದು. ಮಿದುಳಿನಲ್ಲಿಯ ಪ್ರತಿ ಯೊಂದು ರಕ್ತವಾಹಿನಿಯನ್ನು ನೋಡ ಬಹುದು. ವೈದ್ಯರಿಗೆ ಇದೊಂದು ಆಶ್ಚರ್ಯ ವೆನಿಸಿತ್ತು.

ಪ್ರಗತಿ ಅಲ್ಲಿಗೆ ನಿಂತಿಲ್ಲ. ವಿಜ್ಞಾನಿಗಳು ಇನ್ನೂ ಒಂದು ಹೆಜ್ಜೆ ಮುಂದಿಟ್ಟಿರುವರು. ಈಗ ಅವರು ಎಫ್.ಎಮ್.ಆರ್.ಐ. ಎಂಬ ಹೊಸ ಉಪಕರಣವನ್ನು ಸೃಷ್ಟಿಸಿರುವರು. ಇದರ ಪೂರ್ಣ ಹೆಸರು ಫಿಟಲ್, ಮಾಗ್ನೆಟಿಕ್, ರೆಸೊನೆನ್ಸ್ ಇಮೇಜಿಂಗ್ ಎಂದು. ಮೊದಲಿನದು ಕೇವಲ ಎಮ್.ಆರ್.ಐ. ಎಂದಿತ್ತು ಈಗ ಎಫ್.ಎಮ್.ಆರ್.ಐ. ಎಂದು ಹೊರಬಂದಿದೆ. ಈ ಉಪಕರಣ ಎಷ್ಟು ಸೂಕ್ಷ್ಮವಾಗಿ ತನ್ನ ಕಾರ್ಯ ಮಾಡುತ್ತದೆ ಎಂದರೆ ಅದನ್ನು ನಂಬಲಾಗುವುದಿಲ್ಲ.

ಒಂದು ಕೂಸನ್ನು ಮಲಗಿಸಿ, ಅದರ ದೇಹದ ಒಂದು ಭಾಗವನ್ನು ಸೂಜಿಯಿಂದ ಚುಚ್ಚಿದರೆ ಮಿದುಳಿನ ಯಾವ ಜೀವಕೋಶಗಳು ಅದನ್ನು ಗ್ರಹಿಸುತ್ತವೆ ಎಂಬುದು ತಿಳಿಯುತ್ತದೆ. ಮಿದುಳಿನ ಯಾವ ಭಾಗಕ್ಕೆ ರಕ್ತ ಹೆಚ್ಚು ಹರಿಯುತ್ತದೆ ಎಂಬುದೂ ಕಾಣಿಸುತ್ತದೆ. ಇದು ಒಂದು ಹಂತವಾದರೆ ಇನ್ನೂ ಮುಂದಿನ ಹಂತವೆಂದರೆ ಕೂಸು ಹೊರಗೆ ಇರಬೇಕೆಂದೇನಿಲ್ಲ. ಅದು ಇನ್ನೂ ತಾಯಿಯ ಗರ್ಭದಲ್ಲಿರುವಾಗಲೇ ಈ ಪರೀಕ್ಷೆ ನಡೆಸಲು ಸಾಧ್ಯ.

೩. ತಂಬಾಕು ಮಿದುಳು ಪ್ರಚೋದಕವೇ ?

ತಂಬಾಕು ಮಾರುವ ಕಂಪನಿಗಳು "ತಂಬಾಕು ಬ್ರೇನ್ ಟಾನಿಕ್ಕು" "ತಂಬಾಕಿನಿಂದ ಮಿದುಳು ಉತ್ತೇಜಿತ ವಾಗುವದು" ಎನ್ನುವರು. ಅಂತಲೇ ಪ್ರಸಿದ್ಧ ಲೇಖಕರು ತಂಬಾಕು ಸೇವಿಸುತ್ತಾರೆ ಎಂದು ಹೇಳುವರು. ಕಾದಂಬರಿ- ಕಥೆಗಳನ್ನು ಬರೆಯುವವರು ತಂಬಾಕು ಸೇದಿಯೇ ಬರೆಯುತ್ತಾರೆ ಎಂಬ ಪ್ರತೀತಿ ಹಬ್ಬಿಸುತ್ತಾರೆ. ಮುಖ್ಯ ರಸ್ತೆಗಳ ಬದಿಯಲ್ಲಿ ದೊಡ್ಡ ದೊಡ್ಡ ಫಲಕ ಚಿತ್ರಗಳನ್ನು ಬರೆಸುತ್ತಾರೆ. ಸಿನೇಮಾ ನಾಟಕಗಳಲ್ಲಿ ಮುಖ್ಯ ಕಲಾವಿದರು ತಂಬಾಕು ಸೇದುವಂತೆ ಮಾಡುತ್ತಾರೆ. ಇದನ್ನು ಕಂಡ ಚಿಕ್ಕಮಕ್ಕಳು ತಾವೂ ಸೇದಲು ಪ್ರಾರಂಭಿಸುತ್ತವೆ. ಕಾಲೇಜು ವಿಶ್ವವಿದ್ಯಾನಿಲಯ ಗಳ ಪ್ರಾಧ್ಯಾಪಕರು ವರ್ಗಗಳಿಗೆ ಉಪನ್ಯಾಸ ಕೊಡಲು ಹೋಗುವಾಗ ತಂಬಾಕು ಸೇದಿ ಹೋಗುವ ರೂಢಿ ಬೆಳೆಸಿರುತ್ತಾರೆ. ಇವರನ್ನು ಕಂಡ ವಿದ್ಯಾರ್ಥಿಗಳೂ ಸೇದಲು ಪ್ರಾರಂಭಿಸು ತ್ತಾರೆ.

ಆದರೆ ಇದೆಲ್ಲ ತಂಬಾಕು ಕಂಪನಿಗಳ ಸುಳ್ಳು ಪ್ರಚಾರವೆಂಬುದು ವಿಜ್ಞಾನಿಗಳಿಗೆ ಗೊತ್ತಿದೆ. ಅವರು ಅದನ್ನು ಪ್ರಚಾರಗೊಳಿಸುವುದಿಲ್ಲ. ಇದರಿಂದ ಜನ ಸಾಮಾನ್ಯರು ಜಾಹಿರಾತಿನಲ್ಲಿ ಕಂಡ ವಿಷಯಗಳೇ ಸತ್ಯವೆಂದು ನಂಬಲು ಪ್ರಾರಂಭಿಸುತ್ತಾರೆ.

ತಂಬಾಕು ನಿಜವಾಗಿ ಒಂದು ಹಾಲಾಹಲ. ಅದನ್ನು ಯಾವ ರೂಪದಲ್ಲೇ ಆಗಲಿ ಸೇವಿಸಿದರೆ ಸಾಕು. ತನ್ನ ದುಷ್ಟ ಕಾರ್ಯಗಳನ್ನು ಮಾಡಿಯೇ ಮಾಡುತ್ತದೆ. ಇತ್ತಿತ್ತಲಾಗಿ ಅಮೇರಿಕೆಯಲ್ಲಿ ತಂಬಾಕು ಸೇದುವುದು ಸೇದುವ ವ್ಯಕ್ತಿಗಷ್ಟೇ ಅಲ್ಲ ಅವನ ಸಮೀಪದಲ್ಲಿ ಇದ್ದವರಿಗೂ ಕೆಡುಕನ್ನು ತರುತ್ತದೆ ಎಂಬುದು ಖಚಿತವಾಗಿದೆ. ಕಾರಣ ಜನರು ಸೇದುವುದನ್ನು ಬಿಟ್ಟು ತಂಬಾಕು ತಿಂದರೆ ಪರಿಸರದಲ್ಲಿರುವವರೆಗೆ ಯಾವ ಹಾನಿ ಇಲ್ಲ ಎಂದು ತರ್ಕಿಸಿ ತಂಬಾಕು ನುರಿಸುವ (ಪುಡಿ ಮಾಡುವುದು) ಸಾಹಸಕ್ಕೆ ಇಳಿದರು. ತಂಬಾಕು ನುರಿಸುವಿಕೆ ವ್ಯಕ್ತಿಗೆ ಏನು ಮಾಡುತ್ತದೆ ಎಂಬುದನ್ನು ಅಭ್ಯಸಿಸಲು ವಿಜ್ಞಾನಿ ಗಳು ಪ್ರಾರಂಭಿಸಿದರು.

ತಂಬಾಕು ನುರಿಸಿದ ಮೇಲೆ ಅವರಿಗೆ ಕ್ಲಿಷ್ಟ ಪ್ರಮೇಯಗಳನ್ನು ಕೊಟ್ಟರು. ಇವರ ಕೈಗಳು ಕೈ ಬೆರಳುಗಳು ನಡುಗುತ್ತಿದ್ದುವು. ಇದರಿಂದ ಪ್ರಮೇಯಗಳನ್ನು ಇವರಿಂದ ಮಾಡಲಾಗಲಿಲ್ಲ. ಇದೇ ಜನರಿಂದ ಒಂದು ದಿನ ತಂಬಾಕು ನುರಿಸುವುದನ್ನು ನಿಲ್ಲಿಸಲಾಯಿತು. ಅನಂತರ ಪ್ರಮೇಯಗಳನ್ನು ಕೊಟ್ಟಾಗ ಯಾವ

ತೊಂದರೆ ಇಲ್ಲದೆ ಪ್ರಯೋಗಗಳನ್ನು ನಡೆಸಿದರು. ಈ ಪ್ರಯೋಗವನ್ನು ಹಲವಾರು ಬಾರಿ ಮಾಡಿ ಪ್ರಸಿದ್ಧಿಗೊಳಿಸಿದ್ದಾರೆ.

ತಂಬಾಕು ಸೇದುವುದರಿಂದ ತೊಡಕು ಕಂಡರೆ ನುರಿಸುವುದರಿಂದಲೂ ತೊಡಕು ಕಾಣುತ್ತದೆ ಎಂದು ತರ್ಕಿಸುವಲ್ಲಿ ತಪ್ಪಿಲ್ಲ.

೪. ಇಂಜೆಕ್ಷನ್ ವಿಧಾನ ಹಾಗೂ ತೊಡಕುಗಳು

ಇಂಜೆಕ್ಷನ್ ಶಬ್ದ ಇಂದು ಎಲ್ಲರಿಗೂ ಪರಿಚಿತ. ಎಲ್ಲ ಭಾಷೆಗಳಿಗೂ ಪರಿಚಿತ. ಇದನ್ನು ಕನ್ನಡದಲ್ಲಿ ಸೂಜಿಮದ್ದು ಎಂದು ಹೇಳಬಹುದು. ಹೆಸರೇ ಹೇಳುವಂತೆ ಕೊಡಬೇಕಾದ ಮದ್ದನ್ನು ಸೂಜಿಯ ಮೂಲಕ ಕೊಡುವ ವಿಧಾನವೇ ಇಂಜೆಕ್ಷನ್.

ಯಾಕೆ ಈ ವಿಧಾನ ಬೇಕಾಯಿತು ?

ರೋಗೋಪಚಾರಕ್ಕೆ ಹಲವಾರು ಮದ್ದುಗಳ ಅವಶ್ಯಕತೆ ಇದೆ. ಈ ಮದ್ದುಗಳಲ್ಲಿ ಹೆಚ್ಚಿನ ಸಂಖ್ಯೆಯ ಮದ್ದುಗಳು ಜೀವಸತ್ವದ ಮಾರ್ಗವಾಗಿ ದೇಹ ಸೇರಬಲ್ಲವು. ಅವು ತಮ್ಮ ಕಾರ್ಯ ನಡೆಸಿ ರೋಗವನ್ನು ಗುಣಪಡಿಸಬಲ್ಲವು. ಆದರೆ ಕೆಲವು ಮದ್ದುಗಳು ಜೀವಸತ್ವದ ಮಾರ್ಗವಾಗಿ ದೇಹದಲ್ಲಿ ಸೇರಲಾರವು. ಯಾಕೆಂದರೆ ಜೀವಸತ್ವದ ಸ್ರವಿಕೆಗಳು ಈ ಮದ್ದುಗಳನ್ನು ಪಚನ ಮಾಡಿ ಅವು ಕ್ರಿಯಾಹೀನವಾಗುವಂತೆ ಮಾಡುವುವು. ಉದಾಹರಣೆಗೆ ಇನ್ಸುಲಿನ್ ಮದ್ದು ಜೀವಸತ್ವ ಮಾರ್ಗವಾಗಿ ದೇಹ ಸೇರುವುದಿಲ್ಲ. ಇದನ್ನು ಸೂಜಿಮದ್ದಿನಿಂದಲೇ ದೇಹದೊಳಗೆ ಸೇರಿಸಬೇಕು. ಅದೇ ರೀತಿ ಪೆನ್ಸಿಲಿನ್ ಮದ್ದು ಜೀವಸತ್ವದಲ್ಲಿ ನಿಷ್ಕ್ರಿಯ ಗೊಳ್ಳುವುದು. ಎರಡನೆಯ ಕಾರಣವೆಂದರೆ ಮದ್ದು ತ್ವರಿತವಾಗಿ ತನ್ನ ಕಾರ್ಯ ಪ್ರಾರಂಭಿಸಬೇಕಾದಾಗ ಸೂಜಿ ಮದ್ದು ಕೊಡುವರು. ಮೂರನೆಯದಾಗಿ ಜೀವಸತ್ವವು ಕ್ರಿಯಾಹೀನವಾಗಿದ್ದರೆ ಇದು ಬೇಕು. ಇಂಜೆಕ್ಷನ್ ಮಾಡಿಸಿಕೊಳ್ಳುವುದು ಒಳ್ಳೆಯದೇ ?

ಇದರ ಉತ್ತರ ಹೌದು ಮತ್ತು ಅಲ್ಲ. ಅಂದರೆ ಇಂಜೆಕ್ಷನ್ ಕೊಡುವಾಗ ಅನುಸರಿಸುವ ವಿಧಾನಗಳು ವೈಜ್ಞಾನಿಕವಾಗಿದ್ದರೆ ಇಂಜೆಕ್ಷನ್ ಒಳ್ಳೆಯದು. ಒಂದು ವೇಳೆ ವಿಧಾನಗಳು ಎಚ್ಚರಿಕೆಯನ್ನು ಬಳಸದಿದ್ದರೆ ಇಂಜೆಕ್ಷನ್ ಬಹು ಅಪಾಯಕಾರಿ ಆಗುವ ಸಾಧ್ಯತೆ ಇದೆ.

ಅಪಾಯ ಯಾರಿಗೆ ? ಹೇಗೆ ?

ಇಂಜೆಕ್ಷನ್ ಅಪಾಯಕಾರಿ ಯಾರಿಗೆ ಎಂಬ ಪ್ರಶ್ನೆ ಬರುತ್ತದೆ. ಮುಖ್ಯವಾಗಿ ಇದು ರೋಗಿಗೆ ಬಹುಅಪಾಯಕಾರಿ ಆಗಬಹುದು. ಎರಡನೆಯದಾಗಿ ಇಂಜೆಕ್ಷನ್ ಕೊಡುವವರೂ ಅಪಾಯದ ಅಳವಿನಲ್ಲಿ ಬರುವರು. ಮೂರನೆಯದಾಗಿ ಇಡೀ ಸಮಾಜವೇ ಆಪತ್ತಿನಲ್ಲಿ ಸಿಲುಕಬಹುದು.

ರೋಗಿಗೆ ಅಪಾಯ

ಇಂಜೆಕ್ಷನ್ ವಿಧಾನ ಸರಿಯಾಗದೇ ಹೋದರೆ ರೋಗಿ ತನ್ನ ಮೂಲ ರೋಗವನ್ನಲ್ಲದೇ ಹೊಸ ತೊಡಕುಗಳನ್ನು ಎದುರಿಸಬೇಕಾಗುವುದು. ಸೂಜಿಯಾಗಲಿ, ಸಿರಿಂಜ್ ಆಗಲಿ ರೋಗಾಣು ಸೋಂಕು ಪಡೆದಿದ್ದರೆ ಆ ಸೋಂಕು ರೋಗಿಗೆ ಉಡುಗೊರೆಯಂತೆ ಬರುವುದು. ಇಂಜೆಕ್ಷನ್ ಮಾಡಿಸಿ ಕೊಂಡ ಸ್ಥಳದಲ್ಲಿ ಕೀವು ತುಂಬಿ ಕುರು ಆಗಬಹುದು. ಕೀವು ರಕ್ತವಾಹಿನಿಗಳಲ್ಲಿ ಸೇರಿ ಇಡೀ ರಕ್ತವೇ ಕೀವುಮಯ ಆಗಬಹುದು. ಕೀವು ಗಡ್ಡೆಗಳು ದೇಹದ ಎಲ್ಲ ಭಾಗಗಳಿಗೂ ತಲುಪಿ ರೋಗಿಯ ಸ್ಥಿತಿ ಚಿಂತಾಜನಕವಾಗುವುದು.

ಇಂಜೆಕ್ಷನ್ ಮಾಡುವ ಮದ್ದು ನೇರವಾಗಿ ರಕ್ತದಲ್ಲಿ ಸೇರಿದರೆ ಜೀವಕ್ಕೆ ಅಪಾಯ. ರಕ್ತದಲ್ಲಿ ಮಾಡಬೇಕಾದ ಮದ್ದು ರಕ್ತವಾಹಿನಿ

ಗಳ ಹೊರಗೆ ಹರಿದರೆ ಅದೂ ಅಪಾಯಕಾರಿ. ಉಪಚಾರಕ್ಕೆ ಬೇಕಾದಷ್ಟು ಮದ್ದು ಕೊಡದೆ ಹೆಚ್ಚು ಪ್ರಮಾಣದ ಮದ್ದು ದೇಹ ಸೇರಿದರೆ ಅದೂ ಅಪಾಯಕಾರಿ. ಒಂದು ವೇಳೆ ರೋಗಿ ಆ ಮದ್ದಿಗೆ ಅಲರ್ಜಿ ಇದ್ದರೆ ದೇವರೇ ಗತಿ. ರೋಗವನ್ನು ಕಳೆಯುವ ಪ್ರಯತ್ನದಲ್ಲಿ ರೋಗಿಯೇ ಕಳೆದು ಹೋಗಬಹುದು.

ಇಂಜೆಕ್ಷನ್ ಮಾಡುವವರಿಗೆ ಅಪಾಯ

ಇದು ಹೇಗೆ ಎಂದು ಅನಿಸಬಹುದು. ಇಂಜೆಕ್ಷನ್ ಮಾಡುವ ಸೂಜಿ ಅಕಸ್ಮಾತ್ತಾಗಿ ಮಾಡುವವನ ಬೆರಳಿಗೆ ಚುಚ್ಚಬಹುದು. ಆಗ ರೋಗಿಯ ರೋಗ ಇಂಜೆಕ್ಷನ್ ಮಾಡುವವನಿಗೂ ತಗಲುವ ಸಾಧ್ಯತೆಗಳು ಇವೆ.

ಸಮಾಜ ಆಪತ್ತಿನಲ್ಲಿ ಬರಬಹುದು

ರೋಗ ಹಾಗೂ ಇಂಜೆಕ್ಷನ್ ಮಾಡುವವರು ನೇರವಾಗಿ ತೊಂದರೆಯಲ್ಲಿ ಬರಬಹುದು. ಆದರೆ ಸಮಾಜಕ್ಕೆ ಏನು ತೊಂದರೆ ಎಂದು ಯಾರಾದರೂ ಪ್ರಶ್ನಿಸಬಹುದು.ನಿಜ. ಉಪಯೋಗಿಸಿದ ಸೂಜಿ ಹಾಗೂ ಸಿರಿಂಜಗಳು ಸೋಂಕು ಪಡೆದಿದ್ದರೆ ಅವು ಹಾನಿಕಾರಕ. ಇಂಥ ವಸ್ತುಗಳನ್ನು ಬೇಕಾಬಿಟ್ಟಿ ಚಲ್ಲಿದಾಗ ಸಮಾಜದ ಜನ ಅವುಗಳ ಸಂಪರ್ಕದಲ್ಲಿ ಬಂದು ಅವರಿಗೂ ರೋಗ ಬರಬಹುದು. ಇಂಥ ಅಪಾಯಗಳನ್ನು ತಪ್ಪಿಸಬೇಕಾದರೆ ಸುರಕ್ಷಿತ ಉಪಾಯುಗಳನ್ನು ಅನುಸರಿಸಬೇಕು. ಅವುಗಳು ಕೆಳಗಿನಂತಿವೆ ;

೧. ಪದೇ ಪದೇ ಬಳಸಬೇಕಾದ ಸಲಕರಣೆಗಳನ್ನು ಉಗಿಯಿಂದ ನಿರ್ಜೀವಿಕರಣ ಮಾಡಬೇಕು.

೨. ಉಪಯೋಗಿಸಿ ಚೆಲ್ಲಬೇಕಾದ ಸಲಕರಣೆಗಳನ್ನು ಸುಟ್ಟು ಹಾಕಬೇಕು.

೩. ಚಲ್ಲಬೇಕಾದ ಸಲಕರಣೆಗಳು ಮರಳಿ ಮಾರುಕಟ್ಟೆಗೆ ಬರದಂತೆ ನೋಡಬೇಕು.

೪. ಇಂಜೆಕ್ಷನ್ ಮಾಡುವ ಸಿಬ್ಬಂದಿಯನ್ನು ತರಬೇತು ಗೊಳಿಸಬೇಕು.ಮೇಲಿಂದ ಮೇಲೆ ಎಚ್ಚರಿಸಬೇಕು. ಸದಾ ಈ ಸಿಬ್ಬಂದಿಯ ಕಾರ್ಯಗಳನ್ನು ನೋಡುತ್ತ ಇರಬೇಕು.

೫. ಯಾವುದೇ ತರದ ತೊಡಕು ಕಂಡು ಬಂದರೆ ತತ್‌ಕ್ಷಣ ಪರಿಹಾರ ಕೊಡಬೇಕು.

೬. ತಪ್ಪು ಮದ್ದು ಕೊಡದಂತೆ ನೋಡಿಕೊಳ್ಳಬೇಕು.

ಒಂದು ಸಲ ೨೦ ಯುನಿಟ್ ಇನ್ಸುಲಿನ್ ಕೊಡಬೇಕಾಗಿತ್ತು. ಅದನ್ನು ಸರಿಯಾಗಿ ತಿಳಿಯದ ವಿದ್ಯಾರ್ಥಿ ೨೦ ಮಿಲಿ ಲೀಟರ್ ಇನ್ಸುಲಿನ್ ಕೊಟ್ಟು ರೋಗಿಯ ಕಥೆಯನ್ನೇ ಮುಗಿಸಿದ್ದ.

ಇನ್ನೊಂದು ಪ್ರಸಂಗದಲ್ಲಿ ವ್ಯಾಕ್ಸಿನ್ ಕೊಡುವ ಬದಲಾಗಿ ಇನ್ಸುಲಿನ್ ಮದ್ದನ್ನು ಶಿಸುಗಳಿಗೆ ಚುಚ್ಚಿ ಅನಾಹುತ ಮಾಡಿದ್ದರು.

ಕಾರಣ ಸಾಧ್ಯವಿದ್ದ ಎಲ್ಲ ಎಚ್ಚರಿಕೆಗಳನ್ನು ತೆಗೆದುಕೊಂಡು ಇಂಜೆಕ್ಷನ್ ಅಪಾಯಕಾರಿ ಆಗದಂತೆ ನೋಡಿಕೊಳ್ಳಬೇಕು.

ಎಚ್ಚರಿಕೆ ರಹಿತ ಇಂಜೆಕ್ಷನ್‌ಗಳಿಂದ ಪ್ರಸಾರವಾಗುವ ರೋಗಗಳು

ಸೋಂಕು ರೋಗಗಳು:(ಅ) ರಕ್ತದಿಂದ ಹರಡುವ ತೊಂದರೆ (ಆ) ಕಾಮಾಲೆ,ಡೆಂಗು, ಮಲೇರಿಯಾ ಹಾಗೂ ಹೆಚ್ ಆಯ್ ವ್ಹಿ ಇ) ಸೋಂಕುಕಾರಿ ಅಲ್ಲದ ರೋಗಗಳು ಅಂಗಾಂಶಗಳ ಗಾಯ, ನರಗಳ ಗಾಯ. ಅಂಗಾಂಗಳ ಒಣಗುವಿಕೆ. ಬಿ.ಸಿ.ಜಿ. ಹಾಲಸಗ್ರಂಥಿಗಳ ಬಾವು. ಅಲರ್ಜಿಯಿಂದ ಮರಣ.

ಮುಂಜಾಗ್ರತೆಗಳು

ಮೇಲಿನ ತೊಂದರೆಗಳು ಬರದಂತೆ ಕೆಳಗಿನ ಮುಂಜಾಗ್ರತೆಗಳು ಅವಶ್ಯ ಇರುವವು.

೧. ಸಾಧ್ಯವಾದಷ್ಟು ಇಂಜೆಕ್ಷನ್ ವಿಧಾನ ಕೈ ಬಿಡಬೇಕು. ಅದರ ಬದಲಾಗಿ, ಗುಳಿಗೆ, ಔಷಧ ಹಾಗೂ ಪಾಕಗಳನ್ನು ಉಪಯೋಗಿಸಬೇಕು. ಕೇವಲ ತುರ್ತು ಪರಿಸ್ಥಿತಿಗಳಲ್ಲಿ ಮಾತ್ರ ಇಂಜೆಕ್ಷನ್ ಮಾತ್ರ ಮಾಡಬೇಕು.

೨. ಇಂಜೆಕ್ಷನ್ ಮಾಡಲೇಬೇಕಾದಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಸೂಜಿ ಹಾಗೂ ಸಿರಿಂಜ್‌ಗಳು ನಿರ್ಜೀವೀಕೃತವಾಗಿರಬೇಕು. ಇದು ನಡೆಯಬೇಕಾದರೆ ಇಂಜೆಕ್ಷನ್ ಮಾಡುವವರು ಒಳ್ಳೆಯ ತರಬೇತಿ ಪಡೆದವರು ಇರಬೇಕು. ತರಬೇತಿ ಪಡೆಯದೇ ಇದ್ದವರಿಂದ ಇಂಜೆಕ್ಷನ್ ಮಾಡಿಸಿಕೊಳ್ಳ ಬಾರದು.

ಒಂದೇ ಸಲ ಇಂಜೆಕ್ಷನ್ ಮಾಡಿ ಚೆಲ್ಲುವಂಥ ಸಿರಿಂಜಗಳನ್ನು ಪದೇ ಪದೇ ಉಪಯೋಗಿಸಬಾರದು. ಅವಶ್ಯಕತೆ ಇಲ್ಲವೆನಿಸಿದಾಗ ಇಂಜೆಕ್ಷನ್ ಮಾಡಕೂಡದು. ನಕಲಿ ವೈದ್ಯರು, ನಕಲಿ ದಾಯಿಗಳು, ನಕಲಿ ಆರೋಗ್ಯ ಕಾರ್ಯ ಕರ್ತರಿಂದ ಇಂಜೆಕ್ಷನ್ ಮಾಡಿಸಲೇ ಬಾರದು.

ಕೆಲವು ಆಸ್ಪತ್ರೆಗಳಲ್ಲಿ ಅನುಭವಿ ದಾಯಿಗಳೆನ್ನುವವರು ಇರುತ್ತಾರೆ. ಅವರಿಗೆ ಸರಿಯಾದ ಜ್ಞಾನ ಇರುವುದಿಲ್ಲ. ಅಂಥವರು ಜಂಬ ಕೊಚ್ಚುತ್ತ ವೈದ್ಯರಿಗಿಂತ ತಾವೇ ಜಾಣರು ಎನ್ನುತ್ತ ಇಂಜೆಕ್ಷನ್ ಮಾಡುವರು. ಇದು ಮಹಾ ಅಪರಾಧ.



ಮಾರ್ಚ್ ೨೦೦೦, ಪುಸ್ತಕ ಪ್ರಪಂಚ ಸಂಚಿಕೆಯಲ್ಲಿ ಪ್ರಕಟವಾಗಿರುವ ''ರೋನಾಲ್ಡ್ ರಾಸ್ : ಮಲೇರಿಯಾ ಒಗಟನ್ನು ಬಿಡಿಸಿದ ವಿಜ್ಞಾನಿ'' ಲೇಖನದಲ್ಲಿರುವ ಕವನಗಳನ್ನು ಮೂಲ ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿರುವವರು ಶ್ರೀಮತಿ ಇಂದಿರಾ ಪ್ರಸಾದ್

ಬಾಳಬಂಡಿಗೆ ಒಲುಮೆ ಉರುವಲು

ಶೋಭಾ ಪ್ರಮೋದ್
ಮಹಾಲಕ್ಷ್ಮೀ ವಿಜೆನ್ಸಿ
ಮ.ಹುಂಗಾವ-೪೦೩೧೧೪

ಮಾನವನಿಗೆ ತನ್ನ ಕಲೆಯ ಬಗ್ಗೆ ಪ್ರೇಮವಿದ್ದರೆ, ಯಾವ ಕೆಲಸವೂ ಕಷ್ಟಕರವಾಗುವುದಿಲ್ಲ. ಆದರೆ ಈ ಕಥಾನಕದಲ್ಲಿ ಈ ವಿಧಾನದ ತಪ್ಪು ಏನೆಂದು ಗಮನಿಸೋಣ.

''ಜೋ್ಯಲಾರಾಬಿನ್''ನು ಕೇವಲ ಆರನೇಯ ವಯಸ್ಸಿನಲ್ಲಿ, ಊರಿನ ಪಂಪ್ ಹೌಸಿನ ಚಿತ್ರ ತೆಗೆದು, ಊರಿನ ಪ್ರಮುಖ ನಾಗರಿಕರಿಗೆ ತೋರಿಸಿದ. ಆ ಊರಿನ, ಔಷಧಿ ಅಂಗಡಿ ಯವನು, ಆ ಚಿತ್ರದ ಫ್ರೇಂ ತೆಗೆದು, ತನ್ನ ಷೋಕೇಸಿನಲ್ಲಿಟ್ಟ. ಇಪ್ಪತ್ತು ವರ್ಷ ಪ್ರಾಯದವನಾದ ಮೇಲೆ ಜೋ್ಯಲಾರಾಬಿನ್ ಚಿತ್ರಕಲೆಯ ಅಭ್ಯಾಸ ಮಾಡಲು ನ್ಯೂಯಾರ್ಕಿಗೆ ಹೋದ.

ಡೇಲಿಯಾ ಕ್ಯಾರುಥರ್ಸ್, ಹಳ್ಳಿಯೊಂದರ ಹುಡುಗಿ. ಊರಿನಲ್ಲಿ ಆಕೆ ಬಲು ಸೊಗಸಾಗಿ ಹಾಡುತ್ತಿದ್ದಳು. ಅದನ್ನು ಗಮನಿಸಿ, ಆಕೆಯ ಸಂಬಂಧಿಕರು, ಆಕೆಗೆ ಸಂಗೀತ ಕಲಿಯುವ ಸಲಹೆ ನೀಡಿದರು.

ಜೋ್ಯ ಹಾಗೂ ಡೇಲಿಯಾ ನ್ಯೂಯಾರ್ಕಿಗೆ ಬಂದರು. ವಿವಿಧ ಕಲೆಗಳ ಬಗ್ಗೆ ಚರ್ಚೆ ಮಾಡುವ ವಿದ್ಯಾರ್ಥಿಗಳು ಒಂದು ಕಡೆ ಕೂಡುವಲ್ಲಿ, ಇವರಿಬ್ಬರ ಭೇಟಿಯಾಯಿತು. ಹಾಗೂ ಪರಸ್ಪರ ಆಕರ್ಷಣೆ ಉಂಟಾಗಿ ಕೊನೆಗೆ ಅವರಿಬ್ಬರು ವಿವಾಹವಾಗಿ ಒಂದು ಚಿಕ್ಕ ಫ್ಲ್ಯಾಟ್ ಖರೀದಿಸಿ, ಸಂಸಾರ ಹೂಡಿದರು.

ಜೋ್ಯ ಅಲ್ಲಿ ಮ್ಯಾನಿಸ್ಟರ್ ಎಂಬ ಮಹಾನ್ ಕಲಾವಿದನಲ್ಲಿ ಕಲಿಯಲು ಹೋಗುತ್ತಿದ್ದ. ಆತನ ಫೀ ಹೆಚ್ಚಿತ್ತು. ರೋಸೆಂಥಲ್ ಸ್ಟಾರ್ಕ್ ಎಂಬಾತನ ಬಳಿ ಡೇಲಿಯಾ ಪಿಯಾನೋ ಕಲಿಯಲು ಹೋಗುತ್ತಿದ್ದಳು. ಇಬ್ಬರೂ ತಮ್ಮ ಕ್ಷೇತ್ರಗಳಲ್ಲಿ ಶ್ರೇಷ್ಠ ಕಲಾವಿದರಾಗಬೇಕೆಂಬ ಸ್ವಪ್ನ ಕಾಣುತ್ತಿದ್ದರು. ಹಣ ಇರುವ ತನಕ ಅವರಿಬ್ಬರೂ ಬಹಳ ಪ್ರೀತಿ-ಆನಂದದಿಂದ ಸಂಸಾರ ಹೂಡಿದರು. ಆದರೆ ಕಾಲಕ್ರಮೇಣ ಅವರಿಬ್ಬರಲ್ಲಿದ್ದ ಸಂಪತ್ತು ಮುಗಿದು, ತಮ್ಮ ಶಿಕ್ಷಕರಿಗೆ 'ಫೀ' ಕೊಡಲೂ ಸಾಧ್ಯವಾಗದ ಪರಿಸ್ಥಿತಿ ಬಂತು. ಆದರೆ ಕಲೆಯ ಮೇಲಿನ ಪ್ರೀತಿಗಾಗಿ, ಡೇಲಿಯಾ ಏನೂ ಮಾಡಲೂ ಸಿದ್ಧಳಿದ್ದಳು. ಪಿಯಾನೋ ಕಲಿಯುವ ವಿದ್ಯಾರ್ಥಿಗಳು ಸಿಗಬಹುದೆಂಬ ಉದ್ದೇಶದಿಂದ ಆಕೆ ಟ್ಯೂಶನ್ ಕ್ಲಾಸೊಂದನ್ನು ಆರಂಭಿಸಿದಳು.

ಒಂದು ದಿನ, ಅತ್ಯಂತ ಉತ್ಸಾಹದಿಂದ ಮನೆಗೆ ಬಂದವಳೇ ''ಜ್ಯೋ''ನನಗೆ ಟ್ಯೂಶನ್ ಸಿಕ್ಕಿದೆ! ಬಹಳ ಒಳ್ಳೆಯ ಜನ. ಜನರಲ್ ಎ.ಬಿ. ಪಿಂಕಿಯ ಮಗಳು ನನ್ನ ಶಿಷ್ಯಳಾಗಿ ಕಲಿಯಲು ಬಂದಿದ್ದಾಳೆ. ನಾನೆಂದೂ ಹಿಂದೆ ಕಂಡಿರದಂಥ ಹಲವಾರು ಅಪೂರ್ವ ವಸ್ತುಗಳ ಸಂಗ್ರಹ ಅವರ ಮನೆಯಲ್ಲಿದೆ ಆ ಶಿಷ್ಯಳ ಹೆಸರು ''ಕ್ಲೀಮೇಂಟಿನಾ'', ನನಗೆ ತುಂಬ ಮೆಚ್ಚುಗೆಯಾಗಿದ್ದಾಳೆ. ಸದಾ ಕಾಲವೂ ಶ್ವೇತಬಟ್ಟೆಯನ್ನು ಮಾತ್ರ ಧರಿಸುತ್ತಾಳೆ. ವಾರದಲ್ಲಿ ಮೂರು ತಾಸು ಆಕೆಗೆ ಪಿಯಾನೋ ನುಡಿಸುವುದನ್ನು ಕಲಿಸಬೇಕಾಗಿದೆ. ಅದಕ್ಕೆ ಫೀ ಎಷ್ಟು ಗೊತ್ತೇ? ತಾಸಿಗೆ ಐದು ಡಾಲರ್‌ಗಳು! ಹೀಗೆಯೇ ಎರಡು - ಮೂರು ವಿದ್ಯಾರ್ಥಿಗಳು ದೊರೆತರೆ, ನಾನು, ರೋಸೆಂಥಲ್ ಸ್ಟಾರ್ಕ್ ಅವರ ಬಳಿಯೇ ಸಂಗೀತ ಕ್ಲಾಸನ್ನು ತೆರೆಯಬಹುದು'' ನಿರರ್ಗಳವಾಗಿ ಮಾತನಾಡುತ್ತ, ಆಕೆ ತನ್ನ ಪತಿಯ ಮುಖವನ್ನು ದಿಟ್ಟಿಸಿ ಕೇಳಿದಳು.

★ ಓ ಹೆನ್ರಿಯ ಆಂಗ್ಲ ಮೂಲದ ಭಾವಾನುವಾದ

''ಅರೆ! ನಿನ್ನ ಚಹರೆ ಯಾಕೆ ಹೀಗಾಯಿತು''?

ಡೇಲಿಯಾ, ಒಳ್ಳೆಯದು, ನಿನಗೆ ಉಚಿತವೆಂದು ತಿಳಿದ ಕೆಲಸಮಾಡು. ನಾನು ನನ್ನ ಶಿಕ್ಷಣ ವನ್ನು ಮುಂದುವರಿಸಲೇ? ನಾನೂ ಕೂಲಿ ಮಾಡುತ್ತೇನೆ. ದಿನಪತ್ರಿಕೆಗಳನ್ನು ಹಂಚುತ್ತೇನೆ. ಒಂದೆರಡು ಡಾಲರ್‌ಗಳನ್ನು ಸಂಪಾದಿಸ ಬಹುದು''.

ಡೇಲಿಯಾ, ತನ್ನ ಬಾಹುಗಳಿಂದ ಆತನನ್ನು ಬಂಧಿಸಿ-''ನೀನು ಹುಚ್ಚನೇ ಸರಿ! ನಿನ್ನ ಅಭ್ಯಾಸವನ್ನು ಮುಂದುವರಿಸಲು. ನನ್ನ ಕೆಲಸವೂ ಸಂಗೀತಕ್ಕೆ ಅಂಟಿಕೊಂಡೇ ಇದೆ. ಅಂದರೆ ನಾನು ಕಲೆಯಿಂದ ದೂರವಾಗಿಲ್ಲ. ನೀನು, ನಿನ್ನ ಕ್ಲಾಸುಗಳನ್ನು ಮುಂದುವರಿಸು''.

''ಮ್ಯಾಗಿಸ್ಟರ್‌ನು ನನ್ನ ಚಿತ್ರಕಲೆಯನ್ನು ಪ್ರಶಂಸಿಸಿದ್ದಾನೆ. ಟಿಂಕಲ್ ಎಂಬಾತನು, ತನ್ನ ಅಂಗಡಿಯಲ್ಲಿ ಎರಡು ಚಿತ್ರಗಳನ್ನು ತೂಗು ಹಾಕಿದ್ದಾನೆ. ಶ್ರೀಮಂತ ಕಲಾಪ್ರೇಮಿ ದೊರೆತರೆ ಅವು ಮಾರಾಟವಾಗಬಹುದು''. ಆತನೆಂದ.

ಆ ಬಳಿಕ ಅವರಿಬ್ಬರೂ, ಬೆಳಿಗ್ಗೆ ಉಪಹಾರವನ್ನು ಬೇಗನೆ ಮುಗಿಸಿದರು. ಜ್ಯೋ ಬೇಸಿಗೆಯಲ್ಲಿ ಸೆಂಟ್ರಲ್ ಪಾರ್ಕ್‌ನಲ್ಲಿ ಚಿತ್ರವನ್ನು ತೆಗೆಯಬೇಕೆಂದು, ಬೆಳಿಗ್ಗೆ ಏಳಕ್ಕೆ ಮನೆ ಬಿಟ್ಟವನು, ಸಂಜೆ ಏಳಕ್ಕೆ ಮನೆಗೆ ಮರಳುತ್ತಿದ್ದ.

ವಾರಾಂತ್ಯದಲ್ಲಿ ಡೇಲಿಯಾಳು, ಹದಿನೈದು ಡಾಲರ್‌ನಷ್ಟು ತನ್ನ ಸಂಬಳವನ್ನು ಟೇಬಲ್ಲಿನ ಮೇಲಿಟ್ಟು ನುಡಿದಳು -''ಕ್ಲಿಮೇಂಟಿನಾ, ಕೆಲವೊಮ್ಮೆ ತುಂಬ ತೊಂದರೆಕೊಡುತ್ತಾಳೆ. ಸರಿಯಾಗಿ ಸಂಗೀತದ ಪ್ರಾಕ್ಟಿಸು ಮಾಡುವುದಿಲ್ಲ. ಬಹಳ ಸಲ ಕಲಿಸಬೇಕಾಗುತ್ತೆ. ಅಲ್ಲದೆ ಯಾವಾಗಲೂ ಬಿಳಿಬಟ್ಟೆಯನ್ನು ಮಾತ್ರ ಧರಿಸುತ್ತಾಳೆ. ನನಗಂತೂ ಅಸಹ್ಯವಾಗುತ್ತೆ! ಆದರೆ ಜನರಲ್ ಪಿಂಕಿ ಮಾತ್ರ ಒಳ್ಳೆಯ ವ್ಯಕ್ತಿ. ಆತನ ದಿವಾನಖಾನೆಯಲ್ಲಿದ್ದ ಗೋಡೆಯ ಬಣ್ಣ ಬಲು ಸುಂದರವಾಗಿದೆ. ಕ್ಲಿಮೇಂಟಿನಾಳಿಗೆ ಇತ್ತೀಚೆಗೆ ಕಫ ಆಗಿದೆ. ನನಗೆ ಆಕೆಯ ಬಗ್ಗೆ ಆತ್ಮೀಯತೆ ಉಂಟಾಗುತ್ತಿದೆ. ಜನರಲ್ ಪಿಂಕಿಯ ಸಹೋದರ, 'ಬೋಲಿವಿಯಾ' ಎಂಬಲ್ಲಿ ಮಂತ್ರಿಯಾಗಿದ್ದನಂತೆ. ನಿನಗೆ ಗೊತ್ತೇ''?

ಆಕೆಯ ಮಾತು ಮುಗಿದ ಬಳಿಕ, ೧೮ ಡಾಲರುಗಳನ್ನು, ಟೇಬಲ್ಲಿನ ಮೇಲಿಟ್ಟು, ಜ್ಯೋ ನುಡಿದ.-''ನನ್ನ ಚಿತ್ರಗಳನ್ನು ಪಿಯೋರಿಯಾ ಎಂಬಲ್ಲಿಯ ವ್ಯಕ್ತಿಯು ಖರೀದಿಸಿದ''.

''ನಿಜವಾಗಿಯೂ''?!

''ಬಹಳ ದಪ್ಪ ಆಸಾಮಿ ಆತ! ಕೊರಳಿನ ಸುತ್ತ ಉಣ್ಣೆಯ ಮಫ್ಲರ್ ಸುತ್ತಿಕೊಂಡಿದ್ದ. ನನ್ನಿಂದ ಇನ್ನೊಂದು ಚಿತ್ರವನ್ನೂ ಖರೀದಿಸುತ್ತಾನೆಂದು ಆಶ್ವಾಸನೆ ಕೊಟ್ಟಿದ್ದಾನೆ''.

''ಈಗ ನನ್ನಲ್ಲಿ ಹದಿನೈದು ಹಾಗೂ ನಿನ್ನಲ್ಲಿ ಹದಿನೆಂಟು ಡಾಲರ್‌ಗಳ ಸಂಗ್ರಹವಾಯಿತು. ಇಂದು ನನಗೆ ಬಹಳ ಆನಂದವಾಗಿದೆ. ಕಾರಣ ಇಷ್ಟು ಹಣ ನಮ್ಮಲ್ಲಿ ಎಂದೂ ಇರಲಿಲ್ಲ! ವಿಶೇಷ ಊಟದ ವ್ಯವಸ್ಥೆಯನ್ನು ಮಾಡೋಣ''!

ಎರಡನೆಯ ಶನಿವಾರದಂದು ಜ್ಯೋ, ಟೇಬಲ್ಲಿನ ಮೇಲೆ ಹದಿನೆಂಟು ಡಾಲರ್‌ಗಳನ್ನು ಸುರಿದು, ಬಳಿಕ ತನ್ನ ಕೈಗೆ ಅಂಟಿದ್ದ ಕಪ್ಪು ಬಣ್ಣವನ್ನು ತೊಳೆದುಕೊಂಡ. ಅರ್ಧ ತಾಸಿನ ಬಳಿಕ ಡೇಲಿಯಾ ಬಂದಳು. ಆಕೆಯ ಕೈಯಲ್ಲಿ ಬ್ಯಾಂಡೇಜು ಇತ್ತು.

''ಇದೇನು ಡೇಲಿಯಾ ? ನಿನ್ನ ಕೈಗೆ ಏನಾಯಿತು''? ಆತಂಕದಿಂದ ಲಾರಾಬಿನ್ ಪ್ರಶ್ನಿಸಿದನು.

ಮುಖದಲ್ಲಿ ತೆಳುನಗೆಯನ್ನು ಹರಡಿ, ಡೇಲಿಯಾ ನುಡಿದಳು''ಇದೆಲ್ಲ ಕ್ಲಿಮೇಂಟಿನಾಳ ಪ್ರತಾಪಗಳು! ನಮ್ಮ ಟ್ಯೂಶನ್ ಮುಗಿದ ಬಳಿಕ, ಆಕೆಗೆ ಮೊಲದ ಮಾಂಸವನ್ನು ಬೇಯಿಸಿ

ತಿನ್ನುವ ಇಚ್ಛೆಯಾಯಿತು. ನಾನು ಉತ್ಸಾಹದಿಂದ ಅವರ ಅಡುಗೆ ಮನೆಗೆ ಹೋದೆ. ಆಕೆಯ ಪ್ರಕೃತಿ ಸ್ವಲ್ಪ ನಾಜೂಕು. ಬಡಿಸುವಾಗ, ಆಕೆಯಿಂದ ಸಾಂಬಾರವು ನನ್ನ ಅಂಗೈಯ ಮೇಲೆ ಬಿದ್ದುಬಿಟ್ಟಿತು ! ಜನರಲ್ ಪಿಂಕಿಯ ವರಿಗೆ ಬಹಳ ಬೇಸರವಾಗಿ, ಔಷಧಿ ಅಂಗಡಿಯಿಂದ ಔಷಧಿ ಮಲಾಮನ್ನು ತಂದು ಹಚ್ಚಿದ್ದಾರೆ. ಈಗ ಕಡಿಮೆಯಾಗಿದೆ.''

ಆಕೆಯ ಕೈಯನ್ನು ತನ್ನ ಕೈಯೊಳಗಿಟ್ಟು, ಜ್ಯೋ ವಿಚಾರಿಸಿದ.'' ಇದೇನು? ನಿನ್ನ ಬ್ಯಾಂಡೇಜ್ ಪಟ್ಟಿಗೆ ಎಣ್ಣೆ ಹಚ್ಚಲಾಗಿದೆಯಲ್ಲ''?

ಟೇಬಲ್ಲಿನ ಮೇಲಿರುವ ೧೪ ಡಾಲರ್‌ಗಳನ್ನು ಗಮನಿಸಿ ಆಕೆ ನುಡಿದಳು.''ನಿನ್ನ ಚಿತ್ರಗಳು ಪುನಃ ಇವತ್ತು ಮಾರಾಟವಾದವೇ''? ''ಹೌದು ಪಿಯೋರಿಯಾದ ಮನುಷ್ಯನು ನನ್ನ ಚಿತ್ರಗಳನ್ನು ಇಂದು ಖರೀದಿಸಿದ್ದಾನೆ.'' ಅಂದ ಹಾಗೆ ಎಷ್ಟು ಗಂಟೆಗೆ ನಿನ್ನ ಮುಂಗೈ ಸುಟ್ಟಿದೆ''?

''ಸಂಜೆ ಐದರ ವೇಳೆಯಿರಬೇಕು. ಜನರಲ್ ಎಷ್ಟೊಂದು ಹೆದರಿಬಿಟ್ಟಿದ್ದರು ಗೊತ್ತೇ''?

ಜ್ಯೋ, ಅಲ್ಲಿರುವ ಒಂದೇ ಕುರ್ಚಿಯ ಮೇಲೆ ಕುಳಿತು, ಅತ್ಯಂತ ಪ್ರೇಮದಿಂದ ಪುನಃ ಪ್ರಶ್ನಿಸಿದ.- ''ಡೇಲಿಯಾ ನಿಜ ಹೇಳು. ಕಳೆದೆರಡು ವಾರಗಳಿಂದ ನೀನು ನಿಜಕ್ಕೂ ಏನು ಮಾಡುತ್ತಿದ್ದೆ''?

ಜನರಲ್ ಪಿಂಕಿ, ಕ್ಲೆಮೇಂಟಿನಾ ಎಂದೆಲ್ಲ ಬಡಬಡಿಸಿ, ನಂತರ ಆಕೆಯ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಹರಿಯಲಾರಂಭಿಸಿತು. ''ಬಹಳ ಪ್ರಯತ್ನಿಸಿಯೂ, ನನಗೆ ನೌಕರಿ ಸಿಗಲಿಲ್ಲ. ನಿನ್ನ ಕಲೆಯ ಶಿಕ್ಷಣ ನಿಂತು ಹೋಗಬಾರದೆಂದು, ಇಸ್ತ್ರಿ ಮಾಡುವ ಅಂಗಡಿಯಲ್ಲಿ ಕೆಲಸಕ್ಕಿದ್ದೆ. ಇಂತಹ ಕೆಲಸಮಾಡಲು ನೀನು ಒಪ್ಪುವುದಿಲ್ಲವೆಂದೇ ಜನರಲ್ ಪಿಂಕಿ ಇತ್ಯಾದಿ ಕಥೆ ಕಟ್ಟಿದ್ದೆ! ದುರ್ದೈವದಿಂದ ಇಂದು, ಹತ್ತಿರದ ಹುಡುಗಿಯ ಇಸ್ತ್ರೀ ಪೆಟ್ಟಿಗೆ ನನ್ನ ಕೈ ಮೇಲೆ ಬಿದ್ದು, ಕೈ ಸುಟ್ಟು ಹೋಗಿದೆ. ನಿನಗೆ ದುಃಖವಾದೀತೆಂದು ಮೊಲದ ಸಾಂಬಾರು ಕೈಮೇಲೆ ಬಿತ್ತೆಂದು ತಿಳಿಸಿದೆ! ನಿನಗೆ ಕೋಪ ಬಂದಿಲ್ಲ ತಾನೇ? ನಾನು ಹಾಗೆ ಮಾಡದೇ ಇದ್ದರೆ, ನಿನ್ನ ಚಿತ್ರಕಲಾ ಶಿಕ್ಷಣ ಅರ್ಧಕ್ಕೆ ನಿಂತುಹೋಗಿ, ಇಂದು ಪಿಯೋರಿಯಾದ ವ್ಯಕ್ತಿಯು ಚಿತ್ರಗಳನ್ನು ಖರೀದಿಸುತ್ತಿದ್ದನೇ?

ಡೇಲಿಯಾ, ಪಿಯೋರಿಯಾದ ಮನುಷ್ಯ ಯಾರೂ ಇರಲಿಲ್ಲ ಕಣೇ''! ಸಾವಕಾಶವಾಗಿ ಒಂದೊಂದೇ ಶಬ್ದಗಳನ್ನು ಜ್ಯೋ ಉಚ್ಚರಿಸಿದ.

''ಅವನು ಯಾರೇ-ಆಗಿರಲಿ, ಆದರೆ ನೀನು ಮಾತ್ರ ಶ್ರೇಷ್ಠ ಕಲಾವಿದನೇ ಸರಿ''! ಅಂದ ಹಾಗೆ, ನನ್ನ ಕೈಗಳ ಬಗ್ಗೆ ನಿನಗೆ ಹೇಗೆ ಸಂಶಯ ಬಂತು ಮಾರಾಯಾ''?!

ನನಗೆ ಸಂಶಯ ಬರುತ್ತಿರಲಿಲ್ಲ. ಆದರೆ ನಾನೇ ಇಂಜಿನ್ ರೂಮಿನಿಂದ , ಮೇಲಿನ ಮಹಡಿಯಲ್ಲಿ ಕೈಸುಟ್ಟುಕೊಂಡ ಹುಡುಗಿಗಾಗಿ ಹತ್ತಿ ಹಾಗೂ ಮಲಾಮನ್ನು ರವಾನಿಸಿದ್ದೇನೆ. ನೀನು ಕೆಲಸ ಮಾಡುವ ''ಲಾಂಡ್ರಿ''ಯ ಕೆಳಗಿನ ರೂಮಿನಲ್ಲಿ, ಭಟ್ಟಿ ಉರಿಸುವ ಕೆಲಸವನ್ನು ನಾನು ಮಾಡುತ್ತಿದ್ದೇನೆ ಗೊತ್ತಾ'' ?

''ಅಂದರೆ''? ಆಶ್ಚರ್ಯಚಕಿತಳಾಗಿ ಪ್ರಶ್ನಿಸಿದಳಾಕೆ. ''ನನ್ನ ಪಿಯೋರಿಯಾ ವ್ಯಕ್ತಿ ಹಾಗೂ ನಿನ್ನ ಜನರಲ್ ಪಿಂಕಿ ಇವರಿಬ್ಬರೂ ಕಲ್ಪನೆಯ ವ್ಯಕ್ತಿಗಳು! ಈ ಕಲೆಯೆಂದರೆ ಚಿತ್ರಕಲೆ ಅಥವಾ ಸಂಗೀತ ಕಲೆಯೂ ಅಲ್ಲ''!

ಇಬ್ಬರೂ ನಗತೊಡಗಿದರು. ''ಮನುಷ್ಯನಿಗೆ ತನ್ನ ಕಲೆಯ ಬಗ್ಗೆ ಪ್ರೀತಿಯಿದ್ದರೆ ಯಾವ ಕೆಲಸವೂ ಕಷ್ಟವಲ್ಲ''. ಜ್ಯೋ ನುಡಿದಾಗ, ಆತನ ಭಾಯಿಯ ಮೇಲೆ ಕೈಯಿಟ್ಟು ಡೇಲಿಯಾ ನುಡಿದಳು.

''ಕಲೆಯ ಮೇಲಿನ ಪ್ರೇಮ ಎನ್ನದಿರು, ಕೇವಲ ಪ್ರೇಮ ಎನ್ನು'' !!

"ಕತ್ತಲು"

ಡಾ|| ವಿಶ್ವನಾಥ
ಯು-೧೯, ಪಂಪಾಪತಿ ರಸ್ತೆ
ಸರಸ್ವತಿಪುರಂ, ಮೈಸೂರು-೯

ಇದು ಕಥೆ, ಬಡವರ ಬಾಳಿನ ವ್ಯಥೆ, ಎಂದೂ ಮುಗಿಯದ ಸದಾ ನಡೆಯುತ್ತಿರುವ ಮುಗ್ಧಜನತೆಯ ನಿಟ್ಟುಸಿರು

ವೈಶಾಖದ ಮೇ ತಿಂಗಳಲ್ಲಿ ಬಿಸಿಲಧಗೆ ಹೆಚ್ಚಿದ್ದರಿಂದ ಭೂಮಿ ಕಾದು ನೀರಿಗಾಗಿ ಆಕಾಶದ ಕಡೆ ಬಾಯಿ ತೆರೆದುಕೊಂಡಿತ್ತು. ಭರಣಿ ಮಳೆ ಅಲ್ಲಿ-ಇಲ್ಲಿ ಅಕ್ಷತೆಯನ್ನು ಎರಚಿದಹಾಗೆ ಕೆಲವೇ ಹನಿಗಳನ್ನು ಚೆಲ್ಲಿ ಮರೆಯಾಗಿತ್ತು. ಹಳ್ಳಿಯ ಸಮಸ್ತರು ಮುಂಗಾರು ಮಳೆಬಿದ್ದದ್ದರಿಂದ, ಗದ್ದೆಗಳನ್ನು ಬಿತ್ತಲು ತಯಾರಿ ನಡೆಸಿದ್ದರು. ಮತ್ತೆ ಕೆಲವರು ಸದಾ ಕಾಲಹರಣ ಮಾಡಿಕೊಂಡು ಸ್ಥಳೀಯ ಪುಡಾರಿತನದ ದರ್ಪ ನಡೆಸುತ್ತಿದ್ದರು. ಬೇಸಗೆಯ ಧಗೆ ಹೆಚ್ಚಿದಂತೆ. ಕಲ್ಲಣ್ಣನ ಮನಸ್ಸಿನಲ್ಲಿಯೂ ಮರುಮದುವೆಯಾಗಬೇಕೆಂಬ ಹಂಬಲ ದಿನ ದಿನೇ ಹೆಚ್ಚಾಗತೊಡಗಿತು. ಕಲ್ಲಣ್ಣನ ಮುತ್ತಾತರು ನೆಟ್ಟಿದ್ದ ಬೃಹತ್ತಾದ ಮಾವಿನ ಮರ ಬಿರುಗಾಳಿಗೆ ಸಿಡಿಲಗೊಂಡು ಪೂರ್ವದಿಕ್ಕಿಗೆ ವಾಲಿಕೊಂಡು ಹಾಗೆ ತನ್ನ ಬೇರುಗಳನ್ನು ಭೂಮಿಯೊಳಗೆ ಹುದುಗಿಸಿ ಕೊಂಡಿತ್ತು. ಆ ಮರದಲ್ಲಿ ಮಾವಿನಕಾಯಿಗಳು ನೇತಾಡುವ ದೃಶ್ಯ ಚೆಂಡುಗಳಂತೆ ಕಂಡು ಬರುತ್ತಿದ್ದುವು. ಅದರ ನೆರಳಿನಲ್ಲಿ ಚುಂಚನಕಟ್ಟೆ ಜಾತ್ರೆಯಿಂದ ತಂದಿದ್ದ ರೂಪಾಯಿಬಣ್ಣದ ಹೋರಿಗಳನ್ನು ಕಟ್ಟಿ ಅವುಗಳಿಗೆ ಮೈದಡವಿ, ಹುರುಳಿ, ನುಚ್ಚು ತಿನ್ನಿಸಿ ಬಾವಿಯಿಂದ ನಾಲ್ಕು ಬಿಂದಿಗೆ ನೀರು ಸೇದಿ, ಹೋರಿಗಳಿಗೆ ಕುಡಿಸುತ್ತಾ...

"ಅಯ್ಯೋ ದ್ಯಾವ್ರೆ, ಮನೇಲೇನಾರ ಹೆಂಗ್ಸು ಅಂತಾ ಇಲ್ಲದ ವ್ಯಾಲೆ ಮನೆ-ಮಠ ಏನಾಗ್ಬೇಕು. ಹೆಣ್ಣಿಲ್ಲದವನ ಬಾಳು ಕಣ್ಣಿಲ್ಲದಂತೆ. ವತ್ತುವತ್ತಿಗೆ ಯಿಷ್ಟು ಬೇಸ್ ಕೊಡೋರಿದ್ರೆ. ಅಳ್ಳಿ ಸಮಸ್ತಾಂಗೆ ಉತ್ತು ಬಿತ್ತಿ ಬೆಳೀತಿದ್ದೆ. ಪಾದವರ್ಷ ಅದಿನೆಂಟೇರು ಭತ್ತಭರಣ ಆಗಿತ್ತು. ಆಗ ಯೆಂಡ್ತಿ ಎಂಬೋಳು ಆರ್ಸಿಂದೆ ಇರ್ತಿದ್ಲು. ಈ ವರ್ಷ ಎಂಟ್ಹೇರು ಕಡ್ಮೆ ಆತು. ವಲಗದ್ಗೆ ನೇಗ್ಲನ್ನೆ ಇಕ್ಕಿಲಿಲ್ಲ-" ಅಂತ ತಾನು ಹೆಂಡತಿಯೊಡಗೂಡಿ ದವಸಧಾನ್ಯಗಳನ್ನು ಬೆಳೆಯುತ್ತಿದ್ದ ಇತಿಹಾಸವನ್ನು ನೆನಪಿಸಿಕೊಂಡಾಗ ಅವನ ಕಂಗಳು ತೇವಗೊಂಡವು.

ಕಲ್ಲಣ್ಣ ಅನಕ್ಷರಸ್ಥ ಆದರೆ ಹನ್ನೆರಡು ಮಕ್ಕಳ ತಂದೆ. ಒಬ್ಬರಲ್ಲಿಯೂ ಬೆಳವಣಿಗೆ ಕಾಣದವನು. ಹುಟ್ಟಿದ ಮಕ್ಕಳೆಲ್ಲ ದೇವರು ಕೊಟ್ಟಿದ್ದೆಂದು ಹೇಳುವ ಸ್ವಭಾವದವನು. ಬರಗಾಲ ಬಂದಾಗ ಸರತಿಯಸಾಲಿನಂತೆ ಎಂಟುಮಕ್ಕಳು ಮಣ್ಣುಪಾಲಾದಾಗ ಆ, ದೇವರೆ ಕಿತ್ತುಕೊಂಡನೆಂದು ಉಪಾಚಿಸುತ್ತಿದ್ದ. ಅವನ ಹೆಂಡತಿಯೂ ಹದಿನೈದು ವರ್ಷಗಳ ಹಿಂದೆ ತೀರಿಕೊಂಡಳು. ಆ ಸಮಯಕ್ಕೆ ಉಳಿದ ಮೂರು ಹೆಣ್ಣು ಕೊನೆಯದಾದ ಗಂಡೊಂದು ಉಳಿದುಕೊಂಡು ಮನೆಯ ಬೇಸಾಯ ಕೆಲಸದಲ್ಲಿ ನೆರವಾಗುತ್ತಿದ್ದುವು. ಆದರೂ ಕಲ್ಲಣ್ಣನಿಗೆ ಮತ್ತೊಂದು ಮದುವೆಯಾಗಬೇಕೆಂಬ ಹಂಬಲ ಗಾಢವಾಗಿ ಬೇರೂರಿತು. ತನ್ನ ಹೆಂಡತಿಯ ತಂಗಿ ಮಾಲುಗಣ್ಣನ ಮಾಲಿಯನ್ನು ಕೈ ಹಿಡಿಯ ಬೇಕೆಂದು ಬಯಸಿದನು. ಆಗಲೆ ತನ್ನ ಹಿರಿಯ ಮಗಳು ದೇವಿ ಹದಿನೆಂಟರ ಪೋರೆ. ಇನ್ನೆರಡು ಹೆಣ್ಣುಮಕ್ಕಳು ಆಜುಬಾಜಿನ ವಯಸ್ಸಿನವು. ಕೊನೆಯವನೇ ಗಂಡುಮಗ. ಇವರಿಗೆ ನಾಲ್ಕಕ್ಷರ ಕಲಿಸಬೇಕು, ಅವರು ವಿದ್ಯಾವಂತರಾಗಬೇಕು. ನನ್ನಂತೆ ಮೂಢಾತ್ಮರಾಗಬಾರದು. ಬದುಕು ಹಸನಾಗಬೇಕೆಂಬ ಯಾವ ಭವಿಷ್ಯದ ಯೋಚನೆಗಳೂ ಅವನ ಜೀವಮಾನದಲ್ಲಿಯೇ ಬಂದಿರಲಿಲ್ಲ, ಬರುವ ಸ್ಥಿತಿಯಲ್ಲಿಯೂ ಇರಲಿಲ್ಲ.

ಕಲ್ಲಣ್ಣ ತನ್ನ ವೃದ್ಧಾಪ್ಯದಲ್ಲಿಯೂ ಮದುವೆ ಮಾಡಿಕೊಳ್ಳುವ ಬಗ್ಗೆಯೇ ತನ್ನ ಯೋಚನಾ ಲಹರಿ ಹರಿಸುತ್ತಿದ್ದ. ''ಸತ್ತವಳು ಸತ್ತಳು. ನಿಮ್ಮ ಚಿಕ್ಕವ್ವ... ನಿಮ್ಮಪ್ಪನ ತಂಗಿ ಮಾಲಿಯನ್ನು ಮದುವೆಯಾಗ್ತೇನೆ'' ಎಂದು ಅಭಿಪ್ರಾಯ ಮೂಡಿದಾಗ ಹಿರಿಯ ಮಗಳು ದೇವಿ ಬೇಡಪ್ಪ, ಇದು ನಿಮಗೆ ಒಗ್ಗುವ ಕೆಲಸವಲ್ಲ. ಸಾಲದಕ್ಕೆ ಈಗಾಗಿರುವ ಕೊರತೆಯಾದರೂ ಏನಪ್ಪಾ. ನಾನು ಮದ್ವೆ ಮಾಡ್ಕೊಳ್ದಂಗೆ.... ನಿನ್ ಕಷ್ಟ ಸುಖಾ ನೋಡ್ಕಂತಿಲ್ವಪ್ಪಾ. ಅಮ್ಮತಿರ್ಕೊಂಡ್ಮ್ಯಾಕೆ... ನಿನ್ನ ಸ್ಯಾವೆ ಮಾಂಡ್ಕೊಂಡೇ ಬತ್ತಿದ್ದೀವಲ್ವ? ಈ ವಯಸ್ನಲ್ಲಿ. ಅದ್ರಲ್ಲೂ ಅರವತ್ತರ ಅರಳು-ಮರಳಲ್ಲಿ, ವಯಸ್ಗೆ ಬಂದ್ರೋ ಹೆಣ್ ಐಕ್ಳ ನೋಡಿ ನೋಡಿ ಯಂಗಪ್ಪಾ ಮನಸ್ ಬಂತು.... ದೇವಿ ತನ್ನ ಅಂತರ್ಯದಲ್ಲಿದ್ದ ಭಾವನೆಗಳನ್ನು ಹೊರಸೂಸಿದಳು. ಕಲ್ಲಣ್ಣನಿಗೆ ಮಗಳ ಮಾತು ಕೋಪ ತರಿಸಿತು. ''ಅವ್ವೇ ಮುಂಡೇರಾ, ನಾನು ಉಟ್ಸೇರೋನು, ಬಿತ್ತು ಬೆಳ್ದು ಆಕಿ ರೋನು, ನಂಗೆ ಬುದ್ಧಿ ಏಳಂಗಾದ್ರಾ, ನಂಗೇನು ಪರಾಯ ಬಿಲ್ವಾ. ನಾ ಮದ್ವೆ ಆಗ್ಲೇಬೇಕ್''- ಅಂತ ರಂಪಾಟ ಶುರುಮಾಡಿದ. ಅವನ ನರನಾಡಿಗಳಲ್ಲಿಯೂ ಸಿಟ್ಟು ಆವರಿಸಿ ಮುಖವೆಲ್ಲ ಕಾವಿನ ಬೆಂಕಿಯಿಂದ ಆವರಿಸಿತ್ತು.

ದೇವಿಯು ಹಡೆದತಾಯಿ ತಂಗಿ ತಮ್ಮರನ್ನು ಅವಳ ಮಡಿಲಿಗೆ ಹಾಕಿದಂತೆ, ತಾಯಿ ಎಂಬುವಳು ಕೊನೆಯುಸಿರೆಳೆದಾಗ ಕೂಲಿಯೇ ಅವರ ಬದುಕಿನ ಆಶ್ರಯವಾಗಿತ್ತು. ಅದರಲ್ಲಿ ಬಂದ ಹಣವೆಲ್ಲ ಕಲ್ಲಣ್ಣನ ಕೈಸೇರಬೇಕಿತ್ತು. ಆದರೆ ಕುಟುಂಬದ ನಿರ್ವಹಣೆ ದೇವಿಯದಾದರೂ ಅಪ್ಪನ ಆರ್ಭಟದಲ್ಲಿ ಎಲ್ಲ ನಾಲ್ಕು ಜೀವಿಗಳು ಉಸಿರಾಡದೆ ಮುದುಡಿಕೊಳ್ಳುತ್ತಿದ್ದುವು. ವರ್ಷದನುಗಾಲವೂ ಚಳಿ-ಮಳೆ-ಬಿಸಿಲೆನ್ನದೆ ತೋಟಗಳಲ್ಲಿ ದುಡಿದು ತರುವ ಮಕ್ಕಳಲ್ಲಿ ಯಾವ ವಾಂಛಲ್ಯವೂ ಅವನಲ್ಲಿರಲಿಲ್ಲ. ಬಟವಾಡೆಯ ದಿನ ಇಂತಿಷ್ಟೆ ಕೂಲಿ ಹಣ ಬರುತ್ತದೆಂಬುದು ಕಲ್ಲಣ್ಣನ ಕುರುಡು ಲೆಕ್ಕವಾಗಿತ್ತು. ಅವನು ಒಂದು ರೀತಿಯ ನಕ್ಷತ್ರಿಕನಂತೆ ನಡೆದುಕೊಳ್ಳುತ್ತಿದ್ದ. ಆ ಮಕ್ಕಳ ಸ್ಥಿತಿಯೂ ಸುಂಕದವನ ಹತ್ತಿರ ಸುಖ ದುಃಖ ಹೇಳಿಕೊಂಡಂತಾಗಿತ್ತು. ಕಲ್ಲಣ್ಣ ಮಕ್ಕಳು ದುಡಿದು ತಂದ ರೊಕ್ಕದಿಂದ ಒಂದು ರೂಪಾಯಿ ಬಣ್ಣದ ಹೋರಿಗಳಿಗೆ ಮೊಟ್ಟೆ , ಕಡ್ಲೆಹಿಂಡಿ, ಉಚ್ಚೆಳ್ಳಿನ ಹಿಂಡಿ, ಅಕ್ಕಿನುಚ್ಚು, ತೌಡುಗಳನ್ನು ತಂದು ಹಾಕಿ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನೇ ಹೊರತು, ಕಾಲು ಕೆ.ಜಿ. ಬೇಳೆಕಾಳುಗಳನ್ನು ತಂದು ತಿನ್ನುತ್ತಿರಲಿಲ್ಲ. ಭೂಮಿ ಉಳುಮೆ ಮಾಡುವ ಭೂವಣ್ಣ ಗಟ್ಟಿಯಾಗಿರಬೇಕೆಂಬ ಸಿದ್ಧಾಂತ ಸರಿಯಾಗಿದ್ದರೂ ದುಡಿದು ತರುವ ಹೆಣ್ಣುಮಕ್ಕಳ ಮದುವೆ ಮಾಡಬೇಕೆಂಬ ಯಾವ ಕಿಂಚಿತ್ತು ಮುಂದಾಲೋಚನೆಗಳು ಅವನ ಮನಸ್ಸಿನಲ್ಲಿ ಸುಳಿಯಲೇ ಇಲ್ಲ. ಹೆಂಡತಿ ಇರೋವರ್ಗೆ ಕಲ್ಲಣ್ಣ ಸಂಸಾರಕ್ಕಾಗಿ ಉಸಿರಾಡಿದವನು ಅಲ್ಲ. ಕೂಲಿ ಮಾಡಿ ಜೀವತೇದು, ಹನ್ನೆರಡು ಮಕ್ಕಳನ್ನು ಹೊತ್ತು ಹೆತ್ತು ಈ ಲೋಕದಿಂದ ಪರಮನೆಂಟಾಗಿ ಹೊರಟು ಹೋಗಿದ್ದ ಹೆಂಡತಿ ಎಂಬೋ ಪ್ರಾಣಿ ಹೆಗಲೆಣೆಯಾಗಿದ್ದಳು. ಕಲ್ಲಣ್ಣನ ಹೆಂಡತಿ ಕೂಲಿಮಾಡುವವಳಾದರೂ ಅವಳ ಮನೆಯ ಸುತ್ತ ಬೇಕಾದಂಗೆ ತರಕಾರಿ ಮತ್ತು ಪರಂಗಿ, ಹಲಸು ಹಣ್ಣಿನ ಗಿಡಗಳನ್ನು ಬೆಳಸಿದ್ದಳು. ಫಲ ಬಂದಾಗ ಅವುಗಳನ್ನು ಬಿದಿರಿನ ಕುಕ್ಕೆಯಲ್ಲಿ ಅಡವು ಹಾಕಿ, ಅದರ ಮೇಲೆ ಭತ್ತದ ಹುಲ್ಲು ತುಂಬಿ, ಹಣ್ಣು ಮಾಡಿ, ಆರು ಮೈಲಿಯ ಗೊಗ್ಗ ಸಂತೆಯಲ್ಲಿ ಮಾರಾಟಮಾಡುತ್ತಿದ್ದಳು. ನಿಂಬೆ, ದಗ್ಗಳಿ, ಸಿಹಿನಿಂಬೆ , ಮಾದಲಗಿಡಗಳು ಅವಳ ಮನೆಯ ಸುತ್ತ ಆಶ್ರಯ ಪಡೆದಿದ್ದುವು. ಒಂದು ಸಂತೆದಿನ ಬೆಳಿಗ್ಗೆಯಿಂದ ಸಂಜೆವರೆಗೆ ವ್ಯಾಪಾರ ಮಾಡುತ್ತಿದ್ದು, ಕಾಸು ಬಂದದ್ದನ್ನು ಒಂದು ಡಬ್ಬಿಯಲ್ಲಿ ಹಾಕಿದ್ದನ್ನು ಕಂಡವನೊಬ್ಬ, ಆಕೆಯ ದೃಷ್ಟಿಯನ್ನು ಬೇರೆಕಡೆಗೆ ಎಳೆಸಿ ಕದ್ದು ಪರಾರಿಯಾಗಿದ್ದ. ಸಂತೆ ದಿನದಲ್ಲಿ ಮಕ್ಕಳಿಗೆ

ಕಡ್ಲೆಪುರಿ ಖಾರಸೇವು ತಂದು ಪರಾವು ಮಾಡುವ ಆಕೆ ಅಂದು ಬರಿಕೈಲಿ ಮನೆಗೆ ಹಿಂತಿರುಗಿದ್ದಳು. ಆವತ್ತು ಕಲ್ಲಣ್ಣ, ಹೆಂಡತಿಗೆ ಆದ ಈ ದುಃಸ್ಥಿತಿ ಕಂಡು ಮರುಗದೇ, ಬಾರುಕೋಲಿನಿಂದ ಮೈ ಬಾಸುಂಡೆಬರುವಂತೆ ಚಚ್ಚಿದ್ದ. ಅವಳ ದುಃಖ ಅಂದು ಗಾಳಿಯಲ್ಲಿ ಒಂದಾಗಿತ್ತು.

ತನ್ನ ಜೊತೆಗೆ, ಎತ್ತರಕ್ಕೆ ಸರಿಸಮನಾಗಿ ಬೆಳೆದು ಬರುತ್ತಿರುವ ದೇವಿ ಮತ್ತು ಇನ್ನೆರಡು ಮಕ್ಕಳನ್ನು ಕೂಲಿಮಾಡಿ- ಕೊಟ್ಟಣ ಕುಟ್ಟಿಯಾದರೂ ಮದುವೆ ಮಾಡಬೇಕೆಂಬ ಧ್ಯೇಯ ಕಲ್ಲಣ್ಣನ ಹೆಂಡತಿಯದಾಗಿತ್ತು. ಒಮ್ಮೆ ಅವಳ ಬಾಳಲ್ಲಿ ಘಟನೆಯೊಂದು ಘಟಿಸಿತ್ತು. ಊರಲ್ಲಿ ಸರಿಸಮಕರ ಮದುವೆ. ಪರಿಚಯಸ್ಥರ ಮನೆಯಿಂದ ಒಂದು ಎರಡೆಳೆ ಚಿನ್ನದ ಚೈನನ್ನು ಎರವಲು ಪಡೆದು ಮದುವೆ ಸಮಾರಂಭಕ್ಕೆ ಹೋಗಿದ್ದಳು. ಕೊಟ್ಟಮನೆಯವಳು ಎಲ್ಲರದುರಿಗೆ ಚೈನಿನ ಸರ ಬಿಚ್ಚಿಸಿಕೊಳ್ಳಲು... ಅವಳಲ್ಲಿ ಒಂದು ಚಲ ಮನೆ ಮಾಡಿಕೊಂಡಿತ್ತು. ಐದು ವರ್ಷಗಳ ಕಾಲ ಕೂಲಿಯಿಂದ ಬಂದ ಹಣ ಸೇರಿಸಿ ಚಿನ್ನದ ಸರ ಮಾಡಿಸಿಯೇ ಬಿಟ್ಟಳು. ಸುತ್ತಲಿನ ಮನೆಯವರ ಕಣ್ಣುಗಳು ಕೆಂಪಾದುವು. ಕೆಲವರು ಕಿಚ್ಚು ಪಟ್ಟುಕೊಂಡರು. ಮತ್ತೆ ಕೆಲವರು ಸಂತೋಷಪಟ್ಟರು. ಈ ವಿಚಾರ ಕಾಫಿಪ್ಲಾಂಟರ್ ನಂಜಕ್ಕನಿಗೆ ತಿಳಿಯಿತು. ಎಂದೂ ಬಾರದ ನಂಜಕ್ಕ ತನ್ನ ಮಗನೊಂದಿಗೆ ಬೈಕೇರಿ ಬಂದು ಕಲ್ಲಣ್ಣನ ಮನೆ ಮುಂದೆ ಜಮಾಯಿಸಿಯೇ ಬಿಟ್ಟಳು. ರಾಗಿ ಬೀಸುತ್ತಿದ್ದ ಕಲ್ಲಣ್ಣನ ಹೆಂಡತಿ ಸಿರಿವಂತರಾದ ನಂಜಕ್ಕನ ಆಗಮನ ಕಂಡು ಹರ್ಷಿತಳಾದಳು. ಅವಳ ಮಕ್ಕಳು ನಾಚಿಕೊಂಡೇ ಮನೆಯೊಳಗಿಂದ ಹೊರಗೆ ಸುಳಿಯಲೇ ಇಲ್ಲ. ಹೊಸದಾಗಿ ತಂದಿದ್ದ ಮಂದರಿಗೆ ಚಾಪೆಹಾಕಿ, ಅದರಲ್ಲಿ ನೆಂಟರು ಕುಳಿತುಕೊಳ್ಳುವಂತೆ ಸೂಚಿಸಿದಳು. ಅಷ್ಟರಲ್ಲಿ ಜಮೀನಿಗೆ ಹೋಗಿದ್ದ ಕಲ್ಲಣ್ಣ ಮನೆಗೆ ಬಂದ. ತನ್ನ ಮಾವನ ಹೆಂಡತಿ ನಂಜಕ್ಕ ಬಂದಿರುವುದು ಅವನಿಗೂ ಸಂಭ್ರಮ ತಂದಿತ್ತು. ಬಹುಶಃ ಬೆಳೆದು ನಿಂತಿರುವ ತನ್ನ ದೊಡ್ಡಮಗಳು ದೇವಿಯನ್ನು ಕೇಳಲು ಬಂದಿರಬಹುದೆಂದು ಅಂದುಕೊಂಡಿದ್ದ. ಎಂದೂ ಬಾರದವರು ಅಪರೂಪಕ್ಕೆ ನೆಂಟರಾಗಿ ಬಂದದ್ದು, ಕಲ್ಲಣ್ಣನ ಮನೆಯ ಅಂತಸ್ತನ್ನು ಹೆಚ್ಚಿಸಿತ್ತು. ಊರವರೆಲ್ಲರೂ ಇದನ್ನು ಆಶ್ಚರ್ಯಕರ ರೀತಿಯಿಂದ ನೋಡುತ್ತಿದ್ದರು. ಅಪರೂಪಕ್ಕೆ ಬಂದ ನಂಜಕ್ಕನ ದೃಷ್ಟಿ ಎರಡಂಕಣದ ಮನೆಯೊಳಗೆಲ್ಲ ಹರಿದಾಡಿತು. ಮನೆಯ ಒಳ-ಹೊರಗೆಲ್ಲ ಅಡ್ಡಾಡಿದಳು. ಪುಟ್ಟಮನೆ ಚೊಕ್ಕಟವಾಗಿದೆ ಹಿತ್ತಲು-ಹಟ್ಟಿ ಗಿಡಮರಗಳಿಂದ ತುಂಬಿ ಕಂಗೊಳಿಸುತ್ತಿದೆ. ಸಾವಿರಾರು ಎಕರೆ ಕಾಫಿ ತೋಟವುಳ್ಳ ನಂಜಕ್ಕನಿಗೆ ಚೋಟಾಬಾಗ್ ತುಂಬಾ ಹಿಡಿಸಿದೆ. ಮನೆಯೊಳಗೆ ಬಂದು ಕುಳಿತು''...ಬಿಡು ಪುಟ್ಟೀರಕ್ಕ, ಮನೆ-ಮಠ ಅಂದ್ರೆ ನಿನ್ನಂಗಿರಬೇಕು, ಪಾತ್ರೆ ಪರಡೆ ಅಂದ್ರೆ ನಿನ್ನಂಗಿರಬೇಕು. ಚಲಗಾರ್ತಿ ಕಣವ್ವ ನೀನು. ಚಿನ್ನದ ಚೈನು ಮಾಡಿಸ್ದೆ ಅಂತ ಕೇಳ್ದೆ, ನಮ್ಮಲ್ಲೂ ಸಾಕಷ್ಟು ಚೈನ್ ಅವೆ. ಆದ್ರೂ ಈ ತರಹದ್ದು ಇಲ್ಲ. ನನ್ ಮಗ್ಳು ವಸ್ಲೀ ಚೈನ್ ಇಸ್ಕಂಡ್ ಬಾರವ್ವ ಅಕ್ಕಂತಾವು ಅಂದವ್ಳೆ...'' ಅಂದಾಗ ಹಿಂದೆ ಮುಂದೆ ನೋಡದೆ ಪುಟ್ಟೀರಕ್ಕ ಚಿನ್ನದ ಸರವನ್ನು ನಂಜಕ್ಕನ ಕೈಗಿತ್ತಿದ್ದಳು. ನಂಜಕ್ಕಳಂತ ಸಿರಿವಂತೆ ಕಲ್ಲಣ್ಣನ ಮನೆಗೆ ಬಂದದ್ದು ಯಾವುದೋ ದೇವತೆ ಬಂದ ಹಾಗೆ ಆಗಿತ್ತು. ಆದರೆ ನಂಜಕ್ಕ ಆ ಚೈನನ್ನು ಬ್ಯಾಂಕಿನಲ್ಲಿಟ್ಟು ಹಣ ಪಡೆದು ತಮ್ಮ ತೆವಲು ತೀರಿಸಿಕೊಂಡಿದ್ದಳು. ಅದು ಮತ್ತೆಂದು ಪುಟ್ಟೀರಕ್ಕನ ಬಳಿ ಸುಳಿಯಲೇ ಇಲ್ಲ. ಕಲ್ಲಣ್ಣ ಚೈನು ಹೋದದ್ದರ ಬಗ್ಗೆ ಬೇಸರಿಸಲಿಲ್ಲ. ಅದರಲ್ಲಿ ಅವನ ಪರಿಶ್ರಮವೇನೂ ಇರಲಿಲ್ಲ. ಆದ್ರೆ, ಮಕ್ಕಳು ಸಂಪಾದಿಸಿದ ಕೂಲಿ ಹಣದಲ್ಲಿ ಒಂದು ನಯಾ ಪೈಸೆ ಬಿಡುತ್ತಿರಲಿಲ್ಲ. ತನ್ನ ಮಕ್ಕಳು ಎರಡು ರೂಪಾಯಿ ಬಳೆ ತೊಟ್ಟುಕೊಂಡ ವಿಚಾರವೇ ಸಂತೆಯ ಸುದ್ದಿಯಾಗಿತ್ತು, ಹಳ್ಳಿವಾರ್ತೆಯಾಗುತ್ತಿತ್ತು.

ಪುಟ್ಟೀರಕ್ಕ ಸತ್ತಮೇಲೆ, ಕೊನೆಯ ಮಗ 'ರಾಮು'ಗದ್ದೆ ಉಳುಮೆ ಮಾಡುವ ವಿದ್ಯೆ ಕಲಿತ. ಅದರಿಂದ ಸ್ಕೂಲಿಗೆ ಹೋಗಿ ಅಕ್ಷರಾಭ್ಯಾಸ ಮಾಡುವುದಕ್ಕೆ ಕತ್ತರಿಬಿದ್ದಿತ್ತು. ತನ್ನ ಕುಟುಂಬದ ಸರ್ವರೂ ಉತ್ತಮ ಮಟ್ಟದ ಬದುಕು ಸಾಗಿಸುವಲ್ಲಿ ಅವನ ಪಾತ್ರ ಹಿರಿದು. ಅವನು ನಿಜವಾದ ಮಣ್ಣಿನ ಮಗ. ಅವನ ಪಾರುಪತ್ಯದ ಕಾರುಬಾರಿನಲ್ಲಿ ದವಸ ಧಾನ್ಯಗಳು ಮನೆಯ ಕಣಜವನ್ನು ತುಂಬಿದ್ದವು. ಅಷ್ಟಾದರೂ ಎಲ್ಲದಕ್ಕೂ ಕಲ್ಲಣ್ಣನ ಹತ್ತಿರವೇ ಕೈಚಾಚ ಬೇಕಿತ್ತು. ಕಾಲಕ್ಕೆ ತಕ್ಕನಾಗಿ ಜೀವನ ಮಾಡಲು ಒಂದು ಪೇಸ್ಟ್, ಬ್ರಷ್ ಬೇಕೆಂದು ಬೇಡಿಕೆ ಇಟ್ಟರೆ. ಇದ್ಲಾಗೆ ಉಜದ್ರೂ ಆಯ್ತದೆ, ಅಂತ ಉವಾಚಿಸುತ್ತಿದ್ದ. ಮಕ್ಕಳು ದುಡಿದು ಕೊಡುವ ಹಣ, ತಾನು ಮದುವೆ ಮಾಡಿಕೊಳ್ಳುವ ಎರಡನೇ ಹೆಂಡತಿಗೆ ಆಸೆ ತೋರಿಸುವುದಕ್ಕೋಸ್ಕರ ಪೇರಿಸಿಟ್ಟಿದ್ದ. ಹಾಗೇ ಪೇರಿಸಿದ್ದು ಸ್ಕೂಲ್‌ಮಾಸ್ತರನೊಬ್ಬನ ಗೆಳೆತನದಿಂದ, ತಂಗ್ಯವ್ವನ ತಂಗಿಗಾಗಿಯೆ.

ಒಮ್ಮೆ ಯುಗಾದಿ ಹಬ್ಬಕ್ಕೆಂದು ದೇವಿ, ತಮ್ಮ ಹಾಗೂ ತಂಗಿಯರಿಗೆ ಬಟ್ಟೆಬರೆ ತಂದು ಕವರಿನಲ್ಲಿಟ್ಟಿದ್ದಾಗ, ಅದು ಕಲ್ಲಣ್ಣನಿಗೆ ಹೇಳಿ ತರಲಿಲ್ಲವೆಂದು, ಅದಕ್ಕೆ ಸೀಮೆಎಣ್ಣೆ ಸುರಿದು ಬೆಂಕಿಗೆ ಅರ್ಪಿಸಿದ್ದನು. ಇಷ್ಟೆಲ್ಲ ಅವಾಂತರಗಳು ಸೃಷ್ಟಿಯಾಗಲು ಎದುರುಮನೆ ತಂಗ್ಯವ್ವ ತನ್ನ ತಂಗಿಕೊಟ್ಟು ಮದುವೆ ಮಾಡಿಸಿ-ಹಳ್ಳಸಾಲಿನ ಎರಡೆಕರೆ ಗದ್ದೆ ಜಮೀನನ್ನು ಲಪಟಾಯಿಸ ಬೇಕೆಂದು ಹೊಂಚುಹಾಕಿ, ಕಲ್ಲಣ್ಣ ಎರಡನೇ ಮದುವೆ ಆಗಲೇ ಬೇಕೆಂದು ಅವನ ತಲೆಯಲ್ಲಿ ತುಂಬಿದ್ದಳು. ಸ್ವಾರ್ಥದ ವಾಂಛೆಯನ್ನು ಕಲ್ಲಣ್ಣ ಹೆಂಡತಿ ಕಳೆದುಕೊಂಡವನು, ಅವನಿಗೆ ಕನಿಕರ ಉಂಟುಮಾಡುತ್ತಾ ಎದುರು ಮನೆ ತಂಗ್ಯವ್ವ ನಾಟಕವಾಡುತ್ತಿದ್ದಳು. ಇದರಿಂದ ಕಲ್ಲಣನ ಮನೆ ದವಸ ಧಾನ್ಯಗಳು ಯಾವಾಗೆಂದರೆ ಆಗ ಎದುರು ಮನೆ ಸೇರಿದ್ದುವು. ಅದರಲ್ಲಿ ಹಾಲು, ಮೊಸರು, ಬೆಣ್ಣೆಯೂ ಸೇರಿದ್ದುವು. ತನ್ನ ಮಕ್ಕಳಿಗೆ ಯಾವುದೇ ನೆಮ್ಮದಿ ಬದುಕನ್ನು ರೂಪಿಸದ ಅವನು ತನ್ನ ಬದುಕೇ ಮೂರಾಬಟ್ಟೆಯಾಗಿದೆ ಎಂದು ಕೊಂಡಿದ್ದನು. ಹಿರಿಯ ಮಗಳು ತನ್ನ ಬುದ್ಧಿವಂತಿಕೆಯಿಂದ ಹೆಣ್ಣುಮಕ್ಕಳಿಗಾಗಿ ಮಾಡಿಸಿಟ್ಟಿದ್ದ ಚಿನ್ನದ ಸರ, ಕೈಬಳೆಗಳೂ ತಂಗ್ಯವ್ವನ ತಂಗಿಯ ಕೊರಳು ಸೇರಿದ್ದವು. ಅದು ದೇವಿಗೆ ತಿಳಿಯಲು ಅಪ್ಪನೆದುರು ಪ್ರತಿಭಟಿಸುವ ಸೂಚನೆಗಳು ಇರಲಿಲ್ಲ. ಆಗ, ಹೆತ್ತವಳು ಸಾಯುವುದಕ್ಕಿಂತ ನಾವೇ ಈ ಭೂಮಿಮೇಲೆ ಇಲ್ಲವಾಗಿದ್ದರೆ ಎಷ್ಟೋ ಪುಣ್ಯ ಬರುತ್ತಿತ್ತೆಂದು ಮನದಲ್ಲಿಯೇ ಅಂದುಕೊಂಡಳು.

ಮೇಗೆ ಹಿಂದಿನ ತಿಂಗಳು ಯುಗಾದಿ ಹಬ್ಬವೂ ಬಂದು ಹೋಗಿತ್ತು. ತನ್ನ ಮಗ ಕೊನೆಯವನಾದ ರಾಮು ಬೆಳೆಸಿಟ್ಟಿದ್ದ ಭತ್ತ-ಭರಣವನ್ನೆಲ್ಲ ಮಾರಿಕೊಂಡಿದ್ದ ಕಲ್ಲಣ್ಣ ಒಪ್ಪತ್ತಿನ ಊಟಕ್ಕೂ ಅಕ್ಕಿ ಇಲ್ಲದಂತೆ ಮಾಡಿದ್ದ. ಹಾಗೇ ಮಾರಾಟದ ಹಣವೆಲ್ಲ ತಂಗವ್ವನ ಮನೆಯಲ್ಲಿ ಸೇರಿ ಬಿಡುತ್ತಿತ್ತು. ಎಲ್ಲರ ಮನೆಯಲ್ಲಿ ಒಬ್ಬಟ್ಟು ಪಾಯಸ, ವಡೆಗಳ ಘಮಘಮಿಸುವ ಪರಿಮಳ ಗಾಳಿಯಲ್ಲಿ ಸೇರಿ ಬೀದಿಯಲ್ಲಿ ಹಾದು ಹೋಗುತ್ತಿರಲು ದೇವಿಯ ತಂಗಿಯರೆಲ್ಲ ಆ ಪರಿಮಳ ವನ್ನೆಲ್ಲ ಹೀರುತ್ತಿದ್ದರು. ಕಲ್ಲಣ್ಣ ಮಾತ್ರ ಗೆಳಕಾರರ ಮನೆಯಲ್ಲಿ ಗಡದ್ದಾಗಿ ಬಾರಿಸಿಬಂದಿದ್ದು, ಮಕ್ಕಳೆದುರಿಗೆ ತೇಗುತ್ತಿದ್ದ. ಅಷ್ಟರಲ್ಲಿ 'ರಾಮು' ಹೆಗಲಲ್ಲಿ ಹೊತ್ತು ತಂದ ಅಕ್ಕಿಯಿಂದ ಅನ್ನ ಮಾಡಿದ ದೇವಿ ನಾಲ್ಕು ಜೀವಗಳು ಒಟ್ಟಿಗೆ ಕುಳಿತು ಊಟಮಾಡುವಂತೆ ಅಣಿ ಮಾಡಿದಳು. ಆ ನಾಲ್ಕು ಮಕ್ಕಳಿಗೆ ಬೆಲ್ಲಕ್ಕಿಂತ -ಬೇವಿನ ಕಹಿಯೇ ಹೆಚ್ಚಾಗಿತ್ತು ಪ್ರತಿ ಯುಗಾದಿಯಲ್ಲಿಯೂ. ಆ ಉರಿಬಿಸಿಲಿನ ದಗೆಯಲ್ಲಿಯೂ ಎದುರು ಮನೆಯಿಂದ ಬಂದ ಕಲ್ಲಣ್ಣ ''ಕತ್ತೆಮುಂಡೇವಾ, ಅದೇನ್ ಕಡ್ದುಕಟ್ಟೇ ಆಕ್ತಿದ್ದೀರಿ ಹ್ವಾಸೇಲಿ. ವಲಾ-ಗದ್ದೆ ಹೋಗಿ ಆ, ಎಂಟೇನಾರಾ ಬಡ್ದು ಬನ್ನಿ. ನುಂಗಾಕೆ ಅಂಗೆ ಬತ್ತಾದ ...''ಅನ್ನಲು ತಟ್ಟೆಯಲ್ಲಿ ದೃಷ್ಟಿಹರಿಸಿ ಉಣ್ಣುತ್ತಿದ್ದ ನಾಲ್ಕು

ಜೀವಗಳು ಉಚ್ವಾಸ -ನಿಚ್ವಾಸ ಇಲ್ಲದಂತೆ ಆಂ-ಹೂಂ ಅಂದಿರಲಿಲ್ಲ. ತುತ್ತು ತುತ್ತು ಅನ್ನವೂ ತೊತ್ತಿನ ಕಿರಕಿರಿಯುಂಟು ಮಾಡಿತ್ತು.

ಕಲ್ಲಣ್ಣನ ಗೆಳೆಯ ಗುಡ್ಡದಹಳ್ಳಿ ತಿರಿಯಣ್ಣ ಪ್ರತ್ಯಕ್ಷನಾಗಿ ''ಕಲ್ಲಣ್ಣ ನೀ ಏಳ್ಟಂಗೆ ವಂದ್ ಯೆಣ್ ನೋಡ್ಕಂಡ್ ಬಂದ್ವೀನಿ. ವಸ್ಲಿ ಯೇಜ್ ಆಗ್ಯಾದೆ. ನೀನ್ ಆಸ್ತಿ ವಗೈರೆ ಎಲ್ಲಾನು ಆ ವುಡ್ಗಿ ಎಸರ್ಗೆ ಬರ್ದ್ರೆ...ಮದ್ವೆ ಆಯ್ತದೆ. ಒಪ್ಗೇನಾ..'' ಅಂದಿದ್ದ. ಅದಕ್ಕೆ ಕಲ್ಲಣ್ಣ ಸಮ್ಮತಿಸಿ ಅಂಗೆ ಆಗಲಿ ತಿರ್‍ಯಣ್ಣ ಎನ್ನಲು ಆಂವ ಮಕ್ಕಳು ಕೂಗೇರಿ ರುವುದ ಕಂಡು, ಬಂದ ಕಾರ್ಯವೆನಗಿ ಜಾಗ ಖಾಲಿ ಮಾಡಿದ್ದ. ಈ ವಿಚಾರ ದೇವಿಯ ಕಿವಿಗೂ ಬೀಳಲು, ತನ್ನ ಒಂದೆ ಹುಟ್ಟು ಬಂದಿರುವ ತಮ್ಮ ತಂಗಿಯರಲ್ಲಿ ಧೈರ್ಯ ತುಂಬಿ ಅವರೆಲ್ಲರ ಮುಂದಿನ ಬದುಕಿಗೆ ಕಂಡುಕೊಳ್ಳುವ ಮಾರ್ಗದ ಬಗ್ಗೆ ಯೋಚಿಸಿ, ಆತ್ಮಸ್ಥೈರ್ಯ ತುಂಬಿದ್ದಳು. ''ಅಪ್ಪಾ ಮದ್ವೆಯಾಗೋದಾದ್ರೆ ಆಗ್ಲಿ ನಾವೆಲ್ಲ ಎಲ್ಲಾದ್ರೂ ಕಾಫಿ ತೋಟದ 'ಲೈನ್'ಗೆ ಹೋಗಿ ಕೂಲಿ ಮಾಡಿ ಹೊಟ್ಟೆ ತುಂಬ್ಸಿಕೊಳ್ತಾನ'' ಅಂದಾಗ ಎಂಟು ಕಣ್ಣುಗಳು ನೀರಾದವು. ಅಪ್ಪನು ಮರುಮದುವೆಯಾಗು ವುದು ಚಿಗುರುಮೀಸೆಯ ಹೈದ ರಾಮುಗೆ ಸುತರಾಂ ಇಷ್ಟವಾಗಲಿಲ್ಲ. '' ಅದ್ಹೆಂಗೆ ಆಗ್ತಾದಕ್ಕಾ. ಚಿಲ್ ಕುಲ್ ಇಲ್ಲಾ. ಹಾಗೇ ನಾದ್ರೂ ಮದ್ವೆ ಆಗೋದಾದ್ರೆ , ನವ್ ನಾಲ್ಕ್ ಜನ್ನೂ ವಿಷ ಕುಡ್ಗಿ ಆಗ್ಲಿ. ಅದ್ಯಾವನ್. ಹೆಣ್ ಕೊಡಾಕೆ ಬರ್ತಾನೋ ಬರ್‍ಲಿ. ಅವ್ನಿಗೂ, ಇವ್ನಿಗೂ ಗತಿ ಕಾಣಸ್ತೀನಿ..'' ಎಂದು ಪ್ರತಿಭಟಿಸಿದಾಗ, ಕಲ್ಲಣ್ಣ ಎದುರು ಮನೆಗೆ ಹೊಕ್ಕಿಕೊಂಡಿದ್ದ. ತಂಗ್ಯವ್ವನ ಉಸಾಬರಿಯಿಂದ ತಂಗಿಯಾದವಳು ಕಲ್ಲಣ್ಣನ ಮದುವೆಯಾಗಿ ಆಸ್ತಿ ಹೊಡೆದುಕೊಳ್ಳಬೇಕೆಂಬ ಸಂಚು ಮಕ್ಕಳಿಗೆ ಗೊತ್ತಿಲ್ಲದೇ ನಡೆದಿತ್ತು. ದೇವಿ ಮಾಡಿಸಿಟ್ಟಿದ್ದ ಚಿನ್ನದ ವಡವೆಗಳು ತಂಗ್ಯವ್ವನ ಮನೆ ಸೇರಿಯೇ ಬಿಟ್ಟಿದ್ದುವು. ಇದ್ದಕ್ಕಿದ್ದಂತೆ ತಂಗ್ಯವ್ವನ ತಂಗಿ ಕಲ್ಲಣ್ಣನ ಮನೆಯಲ್ಲಿ ಪ್ರತ್ಯಕ್ಷ ಳಾಗಲು ''ಯಾರವ್ವ ನೀನು, ಆ ಓಲೆಯಾರ್ದು? ನನ್ನಕ್ಕಂದಿರು ಬೆವ್ರು ಸುರ್‍ಸಿ ಸಂಪಾದ್ನೆ ಮಾಡಿರೋದು ತತ್ತಾ ಇಲ್ಲಿ, ಕೊಡ್ತಿಯೋ ಇಲ್ಲ ಕಿತ್ಕೊಳ್ಲ.. ಅಂತ ಅನ್ನಲು ಎಲ್ಲೋ ಹಿಂಬದಿಯಿಂದ ಆಡರಿದ ಕಲ್ಲಣ್ಣ ಗುದ್ದಲಿಯ ಕಾವಿನಿಂದ ರಾಮುವಿನ ತಲೆಗೆ ಇಕ್ಕಿದ. ಅದರಿಂದ ರಕ್ತ ಚಿಲ್ ಎಂದು ಚಿಮ್ಮಲು, ತಂಗವ್ವನ ತಂಗಿ ಓಲೆ ಸರಗಳನ್ನು ಕಿತ್ತೆಸೆದು ಓಟ ಕಿತ್ತಿದ್ದಳು. ಆ ಹೊತ್ತಿಗೆ ಗದ್ದೆ ಹೆಂಟೆ ಬಡಿದು ಬಂದು ಸುಸ್ತಾಗಿದ್ದ ದೇವಿ ತಮ್ಮನ ತಲೆಯಿಂದ ಸೋರುತ್ತಿದ್ದ ರಕ್ತವನ್ನು ಒತ್ತಿ ಹಿಡಿದು ತನ್ನ ಕಣ್ಣೀರಿನಿಂದ ಕರಗಿ ಹೋದಳು. ''ಬಾರಪ್ಪ ಈ ಕಟುಕಪ್ಪನಾ ಸಹವಾಸವೇ ಬೇಡಾ, ಹೊಟ್ಟೆ ಪಾಡಿಗೆ ಉಳ್ಳವರ ತೋಟದಲ್ಲಿ ಗೇದು ಹೊಟ್ಟೆ ತುಂಬಿಸಿ ಕೊಳ್ಳೋಣ...'' ಎಂದು ತನ್ನ ದುಃಖ ಇಮ್ಮಡಿಸಲು ಅರೆ ಪ್ರಜ್ಞಾವಸ್ಥೆಯಲ್ಲಿದ್ದ ರಾಮುವನ್ನು ಸಾವರಿಸಿದಳು. ಅವರಿಬ್ಬರ ನೋವಿನಲ್ಲಿ ಇಬ್ಬರು ತಂಗಿಯರು ಪಾಲ್ಗೊಂಡರು.

ಹಳ್ಳಿಯ ನಾಟಿವೈದ್ಯ ಕಲ್ಲಜ್ಯ ಯಾವುದೋ ನಾಟಿ ವೈದ್ಯ ಮಾಡಲು ತಲೆಗೆ ಬಿದ್ದ ಏಟು, ಚಿಮ್ಮುವ ರಕ್ತ ನಿಲ್ಲುವಂತೆ ಹಸಿರೆಲೆ ಕುಟ್ಟಿ, ಬಿಳಿ ಬಟ್ಟೆಯ ಪಟ್ಟುಗಳನ್ನು ಹಾಕಿ ,ಗೋಡೆಯಲ್ಲಿ ನೇತುಹಾಕಿದ್ದ ಪುಟ್ಟೀರಕ್ಕನ ಫೋಟೋಗೆ ಕೈಮುಗಿದು''ಅವ್ವಾ, ತಾಯೇ ನಿನ್ನ ಮಕ್ಕಳ ಈ ದುಸ್ಥಿತಿಯನ್ನು ಕಾಣಲಾರಳೆ. ಈ ಅಪರಂಜಿಯಂತ ಮಕ್ಕಳನ್ನು ಇಲ್ಲಿ ಬಿಟ್ಟು ನೀ ಮಾತ್ರ ಸ್ವರಗ ಸೇರಿಕೊಂಡೆಯ ತಾಯಿ, ಇವರ ಗೋಳಾಟ ನಿನಗೆ ತಲುಪದೆಯೇ ತಾಯಿ...'' ಅವನ ಕಣ್ಣಲ್ಲಿಯೂ ನೀರು ಧಾರಾಕಾರವಾಗಿ ಸುರಿಯಲಾರಂಭಿಸಿದವು, ಅವನಿಗರಿವಿಲ್ಲದಂತೆಯೆ.

ಅತ್ತ ರಾಮುವನ್ನು ಗೋಣಿಚೀಲದ ಮೇಲೆ ಮಲಗಿಸಿದ ದೇವಿ, ಅವನ ಸಂಪೂರ್ಣ ಆರೈಕೆಯಲ್ಲಿ ತೊಡಗಿದಳು. ಉಳಿದಿಬ್ಬರು ಕಾಫೀ ತೋಟದಲ್ಲಿ ಕೂಲಿ-ಕಾಳಿಗಾಗಿ ಹೊರಟು

ಹೋಗಿದ್ದರು. ಕರುಣೆ ಇಲ್ಲದ ಅಪ್ಪನ ಕೂಡಾ ಬದುಕುವುದು ಒಂದು ರೀತಿ ನರಕಯಾತನೆಯನ್ನು ತರಿಸಿತ್ತು. ಅದಕ್ಕೆ ಒತ್ತಾಗಿರುವಂತೆ ರಾಮು ಎಲ್ಲ ತೊಂದರೆಗಳನ್ನು ಬೆನ್ನಿಗೆ ಹಾಕಿಕೊಂಡು, ಹೆಣ್ಣು ಮಕ್ಕಳ ಜೀವನವನ್ನು ಜತನದಿಂದ ನೋಡಿಕೊಂಡಿದ್ದ. ಇದೆಲ್ಲವನ್ನು ಮೆಲುಕು ಹಾಕಿದ ದೇವಿ 'ಅಮ್ಮ ಸತ್ತ ಹಿನ್ನೆಲೆಯಲ್ಲಿ, ಅಪ್ಪ ಮರುಮದುವೆಗ ಪ್ರಯತ್ನಿಸುತ್ತಿದ್ದಾನಲ್ಲ, ಒಂದು ವೇಳೆ ಅಪ್ಪಸತ್ತು, ಅಮ್ಮಾ ಉಳಿದಿದ್ದರೆ ಬೇರೊಂದು ಗಂಡು ಬೇಕೆಂದು ಹೊರಡುತ್ತಿದ್ದಳೆ. ಅವಳ ಯೋಚನ ಲಹರಿಯ ತರಂಗಗಳು ಕಂಪಿಸಲನುವಾದವು.

ತಾಯಿ ಇಲ್ಲದ ತಬ್ಬಲಿಗಳೆಂಬ ಅನುಕಂಪ ಒಂದು ಕಡೆಯಾದರೆ, ತಂದೆ ಎಂಬುವನು ಅವಗಣಿಸಲ್ಪಟ್ಟಿರುವ ವಿಚಾರ ಹಳ್ಳಿಯ ಪಟಂಗರಿಗೆ ಕೆಣಕಲು ಸುಲಭದಾರಿಯಾಗಿದ್ದರೂ ರಾಮು ಮತ್ತು ದೇವಿಯರ ಹೆದರಿಕೆಗೆ, ಮನೆಯತ್ತ ಸುಳಿಯದಾದರು. ಆದರೂ ದೇವಿಯ ಅನುಪಸ್ಥಿತಿಯಲ್ಲಿ ಹೆಣ್ಣು ಮಕ್ಕಳಿಬ್ಬರು ತೋಟಕ್ಕೆ ಕೂಲಿಗೆ ಹೋಗಲು ರೈಟರ್ ಒಬ್ಬ ಕೆಣಕಲು, ತಾನು ಹಿಡಿದುಕೊಂಡು ಕೆಲಸ ಮಾಡುತ್ತಿದ್ದ ಕುಡುಗೋಲಿನಿಂದ ಅವನ ಮುಖವನ್ನು ಕೊಚ್ಚಿ, ಇಡೀ ತೋಟದ ಕೂಲಿಕಾರರು ಬೆಚ್ಚುವಂತೆ ಮಾಡಿದ್ದಳು ಒಬ್ಬಳು. ಅದು ಹಳ್ಳಿಯ ಮನೆಮನೆಗೆ ತಲುಪಿ ಮೌಖಿಕ ವಾರ್ತೆಯಾಗಲು, ಇಂಥ ಜನರ ನಡುವೆ ಬಾಳುವೆ ಮಾಡುವುದಕ್ಕಿಂತ ನದಿ, ನೀರುಗಳ ಪಾಲಾಗುವುದೇ ಉತ್ತಮ ಎಂದು ಭಾವಿಸಿ, ಅಂತಹ ಸಂದರ್ಭದಲ್ಲೂ ಧೃತಿಗೆಡದಾದಳು ದೇವಿ.

ಹೆತ್ತವರಿಗೆ ಜವಾಬ್ದಾರಿ ಇಲ್ಲದ ಮೇಲೆ ಎಲ್ಲರ ಬದುಕು ಹೀಗೆಯೇ. ಹೆತ್ತವಳಿದ್ದರೆ ನಮಗೆಲ್ಲ ಈ ಸ್ಥಿತಿ ಬರುತ್ತಿರಲಿಲ್ಲವೇನೋ. ನಮಗೆ ಹೀಗಾಗಬೇಕೆ. ಆ ದೇವರೆಂಬುವನು ನಮ್ಮನ್ನು ಪರೀಕ್ಷಿಸುತ್ತಿದ್ದಾನೆಯೆ? ಅಪ್ಪ ಮತ್ತೊಂದು ಮದುವೆ ಮಾಡಕೊಳ್ಳಲು ತಯಾರಿದ್ದಾನೆ. ಅವನು ಮಾಡಿಕೊಳ್ಳಲಿ. ಆ ನನ್ನ ತಾಯಿಯಲ್ಲಿ ಹುಟ್ಟುವ ಮಕ್ಕಳಿಗಾಗುವುದು ಇದೇ ಸ್ಥಿತಿಯೆ. ಇದರಿಂದ ಮತ್ತೊಂದು ಕೌಟುಂಬಿಕ ಕುರುಕ್ಷೇತ್ರ ಶುರುವಾಗುವುದರಲ್ಲಿ ಅನುಮಾನವಿಲ್ಲ. ಆದ್ರೆ ಆದ್ರೆ ಅಪ್ಪಾ ಎರಡನೇ ಮದುವೆ ಮಾಡ್ಕೋಳ್ಳಾಕೆ ಮಾತ್ರ ಆಸ್ಪದ ಕೊಡಬಾರದು. ಅವಳ ಮನಸ್ಸು ದ್ವಂದ್ವದಿಂದ ಹೇಳಿತು. ''ಬದುಕು ಹಣೇಲಿ ಬರದಂಗೆ ಆಗ್ಲಿ''ಎಂದು ರಾಮುವಿಗೆ ಗಂಜಿ ಕೊಡಲು ನಿರತಳಾದಳು ದೇವಿ.

ಆ ಹಳ್ಳಿಯಲ್ಲಿ ಇರುವ ಇಪ್ಪತ್ತೇಳು ಕುಟುಂಬದ ಕತೆಯೂ ಒಂದೊಂದು ರೀತಿಯೇ. ಮೂವತ್ತೇಳು ಹೆಣ್ಣುಗಳ ಸರದಾರ ಮಂಜನದು ಒಂದು ಹುಳವನ್ನು ಕರುಣಿಸದ ಕತೆಯಾದರೆ, ತಂಗ್ಯವ್ವನ ಗಂಡ ಹೆಂಡ ಕುಡಿದು ಮನೆ-ಮಾರು ಮಣ್ಣು ಮಾಡಿದವ. ಕೆಲವರ ಕುಟುಂಬದ ಹಿರಿಯರಿಗೆ ಜೂಜಿನಲ್ಲಿ ಎಲ್ಲವನ್ನು ಕಳೆದು ಕೊಂಡದ್ದು. ಮತ್ತೆ ಕೆಲವರು ಸಂಸಾರಕ್ಕಾಗಿ ಬೇರೆಯುವರನ್ನು ಆಶ್ರಯಿಸಿ, ಬಂಡಾಟದ ಬದುಕು ಸಾಗಿಸುವವರು. ಇಷ್ಟೆಲ್ಲದರ ನಡುವೆಯೂ ಮುದುಕ ಕಲ್ಲಣ್ಣನ ಸಂಸಾರದ ವಿಚಾರ ಊರವರ ಬಾಯಲ್ಲಿ ಸಿಕ್ಕು ಎಲ್ಲೆಂದರಲ್ಲಿ ನಲಿದಾಡುತ್ತಿದೆ. ಅವನ ಮನೆಮುರಿಯುವ ಖದೀಮರು ಹೆಚ್ಚಾಗಿದ್ದಾರೆ. ಕೊನೆಗೆ ರಾಮುಗೆ ಹೆಣ್ಣು ನೋಡುವ ನೆಪದಲ್ಲಿ ಕಲ್ಲಣ್ಣ ಅವರಿವರ ಮನೆಗೆ ಎಡೆತಾಕಿದ್ದು, ಆ, ಸುದ್ದಿ ಮಗನ ಕಿವಿ ಹೊಕ್ಕಿದಾಗ... ತಿರಸ್ಕಾರಕ್ಕೊಳಗಾಗಿ ಕಲ್ಲಣ್ಣ ಅಪಹಾಸ್ಯಕ್ಕೊಳಗಾಗುತ್ತಾನೆ. ಹೆತ್ತವರ ಈ ನಡತೆ ದೇವಿಯಲ್ಲಿ ಹೇಸಿಗೆ ಬರಿಸುತ್ತದೆ.

ತನ್ನನ್ನೇ ನಂಬಿಕೊಂಡು ಬದುಕು ನೂಕುತ್ತಿರುವ ದೇವಿ ರಾಮು ಮತ್ತು ಇಬ್ಬರು ತಂಗಿಯರೊಂದಿಗೆ ಉಟ್ಟ ಬಟ್ಟೆಯೊಂದಿಗೆ ಪಡುವಣ ದಿಕ್ಕಿಗೆ ಹೆಜ್ಜೆಹಾಕಿದಾಗ ಆಕಾಶದಲ್ಲಿ ನಕ್ಷತ್ರಗಳು ನಗುತ್ತಿವೆ. ಗಾಳಿಯೂ ಮಂದವಾಗಿ ಬೀಸುತ್ತಿದೆ. ಕವಿದ ಕತ್ತಲೆಯಲ್ಲಿಯೇ ಕಲ್ಲಣ್ಣ, ಮಕ್ಕಳು ಕತ್ತಲೆಯಲ್ಲಿ ಲೀನವಾದುದ್ದನ್ನು ಬಹುದೂರದವರೆಗೆ ದೃಷ್ಟಿಸುತ್ತಾನೆ. ಅವನ ನೋಟದಲ್ಲಿಯೂ ಕತ್ತಲು ಲೀನವಾಗುತ್ತದೆ.

'ಬುದ್ಧ್ಯಂಕ' ಪರೀಕ್ಷೆ

ಜಿ. ಜಿ. ಹೆಗಡೆ ಕಡೇಕೋಡಿ
ಚೌಕೀಮಠರಸ್ತೆ
ಶಿರಸಿ-೫೮೧೪೦೧

ಪುನಃ ಪುನಃ ಅದೇ ಹಳೆಯ ಸವಕಲು ಕಾರ್ಯಕ್ರಮಗಳನ್ನು ನೀಡುವ ಬದಲು ಹೊಸ ರೀತಿಯ ಕಾರ್ಯಕ್ರಮ ನೀಡಬೇಕೆನ್ನುವ ವಿಚಾರ ಟಿ.ವಿ. ಸ್ಟೇಷನ್ನಿನ ನಿರ್ದೇಶಕರಿಗೆ ಬಂದಿತು. ಸರ್ಕಾರಿ ಕಚೇರಿ, ಕಾಲೇಜು, ಶಾಲೆಗಳಿಗೆ ಹೋಗಿ ಬುದ್ಧಿ ಮತ್ತೆ ಪರೀಕ್ಷಿಸುವ ಕಾರ್ಯಕ್ರಮದ ಶೂಟಿಂಗ್ ನಡೆಸುವುದೆಂದು ನಿರ್ಧರಿಸಲಾಯಿತು.

ಕ್ಯಾಮರಾ ಟೀಮ್‌ನ ಜೊತೆ ಕಾರ್ಯಕ್ರಮದ ನಿರ್ದೇಶಕರು ಸರ್ಕಾರಿ ಕಚೇರಿಯೊಂದಕ್ಕೆ ಬಂದರು. ಲೈಟ್, ಕ್ಯಾಮರಾ, ಮೈಕ್ ಎಲ್ಲವೂ ಸಿದ್ಧವಾದವು. ಕಾರ್ಯಕ್ರಮದ ನಿರ್ದೇಶಕರು ಬ್ಲ್ಯಾಕ್‌ಬೋರ್ಡ್ ಮೇಲೆ ಖಡುವಿನಿಂದ ಒಂದು ವರ್ತುಳ ಬಿಡಿಸಿ ''ಇದೇನೆಂದು ಹೇಳಿ'' ಎಂದರು.

ಅತಿ ಹೆಚ್ಚಿನ ಶಕ್ತಿಯ ಮರ್ಕ್ಯುರಿ ವೇಪರ್ ಸ್ಪಾಟ್‌ಲೈಟ್‌ಗಳು ಜ್ವಾಜ್ವಲ್ಯಮಾನವಾಗಿ ಬೆಳಗುತ್ತಲಿದ್ದವು. ಕ್ಯಾಮರಾ ಕಚೇರಿಯ ಸಿಬ್ಬಂದಿಗಳ ಮೇಲೆ ಕೇಂದ್ರೀಕೃತವಾಗಿತ್ತು. ಓರ್ವ ವ್ಯಕ್ತಿ ಕೈಯಲ್ಲಿ ರಿಮೋಟ ಮೈಕ್ ಹಿಡಿದು ಉತ್ತರ ನೀಡುವವರ ಬಳಿ ಧಾವಿಸಲು ಕಾತರನಾಗಿ ನಿಂತಿದ್ದ. ಸಿಬ್ಬಂದಿವರ್ಗದವರೆಲ್ಲ ಗಾಬರಿಯಿಂದ ಬ್ಲ್ಯಾಕ್ ಬೋರ್ಡ್ ಮೇಲಿರುವ ವರ್ತುಳವನ್ನೇ ದಿಟ್ಟಿಸತೊಡಗಿದ್ದರು. ''ಇದು ಏನನ್ನು ಸೂಚಿಸುತ್ತದೆ ?'' ಪ್ರತಿಯೊಬ್ಬರೂ ಮನದಲ್ಲಿಯೇ ಯೋಚಿಸ ತೊಡಗಿದರು.

ಎಲ್ಲರಲ್ಲಿಯೂ ಅಳುಕು. ಉತ್ತರಿಸುವ ಧೈರ್ಯವಿಲ್ಲ. ಕ್ಯಾಮರಾ ಎಲ್ಲರ ಮೋರೆಯ ಮೇಲೆ ಅತ್ತ-ಇತ್ತ ಎಂದು ಚಲಿಸತೊಡಗಿತ್ತು. ಸಿಬ್ಬಂದಿಯ ದ್ವಿತೀಯ ದರ್ಜೆಯ ಕ್ಲಾರ್ಕ್‌ಗಳು ಆದೇಶ ಅಪೇಕ್ಷಿಸುತ್ತ ಪ್ರಥಮದರ್ಜೆಯ ಕ್ಲಾರ್ಕ್‌ಗಳ ಮೋರೆ ನೋಡತೊಡಗಿದರು. ಪ್ರಥಮ ದರ್ಜೆಯ ಕ್ಲಾರ್ಕ್‌ಗಳು ತಮ್ಮ ಮೇಲಿನವರ ಆದೇಶಕ್ಕಾಗಿ ನಿಂತರು. ಎಲ್ಲರೂ ತಮ್ಮ ಹಿರಿಯ ಅಧಿಕಾರಿಗಳ ಆದೇಶಕ್ಕಾಗಿ ಕಾದು ನಿಂತರು. ಹಿರಿಯ ಅಧಿಕಾರಿಗೂ ಏನೂ ತೋಚುತ್ತಿಲ್ಲ. ಅಭ್ಯಾಸಬಲ ಎಂಬಂತೆ ಅವರು ತಮ್ಮ ಪರ್ಸನಲ್ ಸೆಕ್ರೆಟರಿಯತ್ತ ಕಣ್ಣು ಹಾಯಿಸಿದರು. ಸುಂದರಿಯಾಗಿರುವ ಸೆಕ್ರೆಟರಿಗೆ ಕೂಡ ಆ ವರ್ತುಳದ ಅರ್ಥ ಹೊಳೆಯಲಿಲ್ಲ. ಕ್ಯಾಮರಾದ ಕಣ್ಣು ತನ್ನನ್ನು ಕ್ಲಿಕ್ಕಿಸುತ್ತಿದೆ ಎನ್ನುವುದನ್ನೂ ಮರೆತು ಆಕೆ ತನ್ನ ಬಾಸ್‌ನ ಕಿವಿಯಲ್ಲಿ ಅದೇನೊ ಪಿಸುಗುಟ್ಟಿದಳು. ''ನೋಡಿ ಸ್ವಾಮಿ ಇದರ ಬಗ್ಗೆ ವಿವರಣೆ ಕೊಡಬಹುದಿತ್ತೇನೊ.. ಆದರೆ ಈ ಬಗ್ಗೆ ಸರ್ಕಾರದ ಸ್ಪಷ್ಟ ಆದೇಶ ಇದ್ದ ಹೊರತು ಯಾವುದೇ ಟಿಪ್ಪಣಿ ವ್ಯಕ್ತಪಡಿಸೋಕೆ ಸಾಧ್ಯವಿಲ್ಲ''.

ಬುದ್ಧಿಮತ್ತೆ ಪರೀಕ್ಷೆಯ ಎರಡನೆಯ ಸುತ್ತಿಗಾಗಿ ಕ್ಯಾಮರಾ ಟೀಮ್ ವಿಶ್ವವಿದ್ಯಾಲಯದ ಚೀನೀ ಭಾಷಾ ವಿಭಾಗದ ವಿದ್ಯಾರ್ಥಿ ಸಮೂಹ ಇದ್ದಲ್ಲಿ ಬಂದೀತು. ಸ್ಪಾಟ್‌ಲೈಟ್ ಬೆಳಗಿದವು. ಕ್ಯಾಮರಾ ಹಾಗೂ ಟೇಪ್‌ರಿಕಾರ್ಡ್ ಚಾಲನೆಗೊಂಡವು. ಮೊದಲಿನಂತೆಯೆ ಕಪ್ಪು ಹಲಗೆಯ ಮೇಲೆ ವರ್ತುಲ ಬಿಡಿಸಿ ಅದೇನೆಂದು ಪ್ರಶ್ನಿಸಲಾಯಿತು.

ಒಂದೆರಡು ನಿಮಿಷ ಎಲ್ಲರೂ ಸ್ತಬ್ಧರಾಗಿ ನಿಂತರು. ''ಹೋಗಿ, ಹೋಗಿ ಇದೆಂಥಾ ಪ್ರಶ್ನೆ ಕೇಳ್ತಾ ಇದೀರಿ, ನಮ್ಮಂಥ ವಿಶ್ವವಿದ್ಯಾಲಯದ ಸ್ಟೂಡೆಂಟ್ಸ್ ಪರೀಕ್ಷೆ ಮಾಡ್ತಾ ಇದೀರಾ ?'' ಸ್ವಲ್ಪ ಸೊಕ್ಕಿನ ಹುಡುಗರು ಪ್ರಶ್ನಿಸಿದರು. ''ಎಲ್ಲಾಬಿಟ್ಟು ನಿಮ್ಮನ್ನು ಮೂರ್ಖರಾಗಿಸೋಕೆ ಬಂದಿದ್ದಾರೆ.''

''ಇಂಥ ಪ್ರಶ್ನೆಗೆ ಉತ್ತರ ನಿಡೋನು ಮೂರ್ಖನಾಗಿರ್ಬೇಕು.''

''ಏಯ್ ಕೂಕ್ಕೋ ಬೇಡ್ವೋ ಟೇಪ್ ರಿಕಾರ್ಡರ ಆನ್ ಆಗಿದೆ'' ಇನ್ನೊಬ್ಬ ನಡುವೆಯೇ ಕೂಗಿಕೊಂಡ.

ಕಾರ್ಯಕ್ರಮ ನಿರ್ವಹಣೆಯ ತಂಡ ತನ್ನೆಲ್ಲ ಸಾಮಾನುಗಳನ್ನು ಪ್ಯಾಕ್ ಅಪ್ ಮಾಡಿಕೊಂಡು ಮೂರನೆಯ ಸುತ್ತಿನ ಪರೀಕ್ಷೆಗಾಗಿ ಮಿಡ್ಲ್ ಸ್ಕೂಲಿಗೆ ಬಂದಿತು. ಕಪ್ಪು ಹಲಗೆಯ ಮೇಲೆ ವರ್ತುಳ ಬಿಡಿಸಿ ಅದೇನೆಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಲಾಯಿತು. ಯಾವಾಗಲೂ ಕ್ಲಾಸಿಗೆ ಪ್ರಥಮ ಬರುತ್ತಿದ್ದ ವಿದ್ಯಾರ್ಥಿ ತಕ್ಷಣವೇ ಕೈ ಮೇಲೆತ್ತಿದ.

''ಯಸ್, ಏನದು, ಹೇಳ್ತೀಯಾ ?'' ಕಾರ್ಯಕ್ರಮ ನಿರ್ದೇಶಕನ ಪ್ರಶ್ನೆ.

''ಝೀರೋ'' ವಿದ್ಯಾರ್ಥಿ ಉತ್ತರಿಸಿದ.

''ಉತ್ತರ ಸರೀನಾ '' ನಿರ್ದೇಶಕ ಇತರ ವಿದ್ಯಾರ್ಥಿಗಳನ್ನು ಕೇಳಿದ.

''ಹೌದು'' ಎಲ್ಲರೂ ಒಕ್ಕೊರಲಿನಿಂದ ಹೇಳಿದರು.

''ನಾಕೇಳಿದ ಪ್ರಶ್ನೆಗೆ ಬೇರೆ ಇನ್ಯಾವುದೇ ಉತ್ತರ ಇರಬಹುದಾ ? ಸ್ವಲ್ಪ ಯೋಚಿಸಿ ನೋಡಿ.''

ಇದು ಇಂಗ್ಲೀಷ್ ಅಕ್ಷರಮಾಲೆಯ 'ಓ' ಒಬ್ಬ ತುಂಟ ಹುಡುಗ ಕುಳಿತಲ್ಲಿಂದಲೇ ಉತ್ತರಿಸಿದ.

ಕ್ಲಾಸ್ ಟೀಚರ್ ಕೆಂಗಣ್ಣಿನಿಂದ ಆ ಹುಡುಗನನ್ನು ನೋಡುತ್ತಿರುವಾಗಲೇ ಕಾರ್ಯಕ್ರಮದ ನಿರ್ದೇಶಕರು ಹೇಳಿದರು.''ಯು ಆರ್ ಪರ್ಫೆಕ್ಟಲೀ ರೈಟ್ .''

ಅಂತಿಮ ಸುತ್ತಿನಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳನ್ನು ಪರೀಕ್ಷಿಸಲಾಯಿತು. ಕಪ್ಪು ಹಲಗೆಯ ಮೇಲೆ ಬಿಡಿಸಿದ ವರ್ತುಳ ನೋಡುತ್ತಲೇ ಎಲ್ಲ ಮಕ್ಕಳೂ ಕೈಗಳನ್ನು ಮೇಲಕ್ಕೆತ್ತಿ ''ಸರ್'' ''ಸರ್'' ಎಂದು ಕೂಗ ತೊಡಗಿದರು.

''ಇದು ಚಂದ್ರ ಸರ್''.

''ಚಂದ್ರ ಅಂತ ಹ್ಯಾಗೆ ಹೇಳ್ತಿಯಾ ?'' ನಿರ್ದೇಶಕರ ಪ್ರಶ್ನೆ.

''ಕಪ್ಪು ಹಲಗೆ ಆಕಾಶಕ್ಕೆ ಸಮಾನ. ಈಗ ಕತ್ತಲಾಗಿದೆ. ಚಂದ್ರ ಬೆಳ್ಳಗೆ ಹೊಳೆಯುತ್ತಿದ್ದಾನೆ.''

''ಇದು ಪಿಂಗ್-ಪಾಂಗ್ ಬಾಲ್''

''ಇದು ಎಳ್ಳಿನ ಉಂಡೆ''.

''ಕೋಳಿ ಮೊಟ್ಟೆ''

''ಇದು ಲೀ ಗುಯಿ ಅವರ ಬಾಯಿ. ಆಕೆ ಹಾಡುತ್ತಿದ್ದಾಳೆ''

''ಅಲ್ಲ ಇದು ನಮ್ಮ ಟೀಚರ್ ಕಣ್ಣು. ಅವ್ರಿಗೆ ಸಿಟ್ಟು ಬಂದಿದೆ''

ಬುದ್ಧಿಮತ್ತೆ ಪರೀಕ್ಷೆ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಟಿ.ವಿ. ಪ್ರಸಾರಣ ಕೇಂದ್ರ ಕಾರ್ಯಕ್ರಮದ ಪ್ರಸಾರ ಮಾಡುವಾಗ ಒಂದು ಸಬ್ ಟೈಟಲ್ ಸೇರಿಸಿತು''ಜನರು ತಮ್ಮ ಕಲ್ಪನಾ ಶಕ್ತಿ ಯಾವ ರೀತಿ ಕಳೆದು ಕೊಂಡಿದ್ದಾರೆ''.

ಕತ್ತಲೆಯಿಂದ ಬೆಳಕಿನತ್ತ

ಸುಮತಿ ಪಾಂಗಾಳ
೨೦೨ ಮಾನಸ ಅಪಾರ್ಟ್‌ಮೆಂಟ್ಸ್,
ಲೋಬೋಲೇನ್, ಬೆಂದೂರು
ಮಂಗಳೂರು-೫೭೫ ೦೦೨

ಶಿಶುವು ಹುಟ್ಟುವುದಕ್ಕೆ ಮುಂಚೆಯೇ ಅದರ ಕಣ್ಣುಗಳು ರೂಪುಗೊಂಡಿರುವುವು. ಸ್ತ್ರೀಯು ಗರ್ಭಧಾರಣೆಯಾಗಿ ಕೆಲವು ವಾರಗಳಲ್ಲಿಯೇ ಗರ್ಭಕೋಶದೊಳಗೆ ಪುಟ್ಟ ಆಕಾರದ ಪಿಂಡದಲ್ಲಿ ಬಹು ಸೂಕ್ಷ್ಮವಾದ ದೃಷ್ಟಿಯ ವ್ಯವಸ್ಥೆ ರಚನೆಗೊಳ್ಳುವುದು. ಗರ್ಭ ಬೆಳೆದಂತೆ ದೃಷ್ಟಿಯ ನರಗಳೂ ವೃದ್ಧಿಗೊಳ್ಳುವುವು. ಆದುದರಿಂದ ಗರ್ಭಿಣಿ ಸ್ತ್ರೀ ಸರಿಯಾದ, ಸಮತೂಕದ ಆಹಾರವನ್ನು ಸೇವಿಸಬೇಕು. ಅದರಲ್ಲೂ 'ಎ' ಜೀವಸತ್ವವು ಮಗುವಿನ ಕಣ್ಣುಗಳ ಆರೋಗ್ಯಕ್ಕೆ ಅತಿ ಮುಖ್ಯ.

ಮಗುವಿನ ಜನನದ ತರುವಾಯವೂ ಎ ಜೀವಸತ್ವದ ಕೊರತೆಯುಂಟಾಗಬಾರದು. ಕೊರತೆಯುಂಟಾದಲ್ಲಿ ಮೊದಮೊದಲು ಮಗುವಿಗೆ ಮಂದವಾದ ಬೆಳಕಿನಲ್ಲಿ ನೋಡಲು ತೊಂದರೆ ಕಂಡುಬರುವುದು. ಇದು 'ಇರುಳು ಕುರುಡುತನ'. ಇದಕ್ಕೆ ಚಿಕಿತ್ಸೆಯಾಗದೇ ಇದ್ದಲ್ಲಿ ಕಣ್ಣಿನ ರೆಪ್ಪೆಗಳು ಒಣಗಿ ಪ್ರಕಾಶಹೀನವಾಗುತ್ತವೆ. ಆಗಲೂ ನಿರ್ಲಕ್ಷಿಸಲ್ಪಟ್ಟ ಕಣ್ಣುಗಳಿಗೆ ಮೃದುವಾಗಿ ಸೋಂಕುತಾಗುವುದು. ಇದು ಶಾಶ್ವತವಾದ ಅಂಧತ್ವಕ್ಕೆ ಎಡೆಮಾಡಿಕೊಡುತ್ತದೆ. ಶಿಶುವಿನ ಜನನವಾದ ಕೆಲವೇ ದಿನಗಳಲ್ಲಿ ಉತ್ಪತ್ತಿಯಾಗುವ ತಾಯಿಯ ಹಾಲು ಎ ಜೀವಸತ್ವದ ಗನಿ ಎಂದರೂ ಅತಿಶಯೋಕ್ತಿಯಲ್ಲ. ಇಂದಿಗೂ ಎಷ್ಟೋ ಜನರು ಕೊಲೆಸ್ಟ್ರೋಮ್‌ಯುಕ್ತ ಅಮೃತ ಸಮಾನವಾದ ಈ ಹಾಲನ್ನು ಅಂಧಶ್ರದ್ಧೆಯಿಂದಾಗಿ ಮಗುವಿಗೆ ಉಣಿಸದೆ ದೊಡ್ಡ ತಪ್ಪು ಮಾಡುತ್ತಾರೆ.

ತರಕಾರಿಗಳಲ್ಲಿ ಕ್ಯಾರೆಟ್, ಟೊಮೊಟೋ, ಸಿಹಿಕುಂಬಳಕಾಯಿ, ಸೊಪ್ಪುಗಳಲ್ಲಿ ಮೂಲಂಗಿ, ಬಸಳೆ, ಮೆಂತೆ, ಹರಿವೆ, ನುಗ್ಗೆ ಸೊಪ್ಪುಗಳು ಹೇರಳ ಎ ಜೀವಸತ್ವ ಯುಕ್ತವಾಗಿವೆ. ಹಣ್ಣುಗಳಾದ ಬೆಣ್ಣೆಹಣ್ಣು (ಅವಕೇಡಸ್) ಪರಂಗಿ, ಮಾವು, ಹಲಸಿನ ಹಣ್ಣು ರುಚಿಗೆ ಮಾತ್ರವಲ್ಲ ಎ ಜೀವಸತ್ವವನ್ನು ಹೊಂದಿಕೊಂಡಿವೆ.

ನೇತ್ರ ರಕ್ಷಣೆಗಾಗಿ ನಿಸರ್ಗವೇ ನಮಗೆ ಋತುಮಾನದಲ್ಲಿ ಕೆಲವು ವಿಶೇಷವಾದ ಹಣ್ಣುಗಳನ್ನು, ತರಕಾರಿಗಳನ್ನೂ ಒದಗಿಸುತ್ತದೆ. ಸ್ಥಳೀಯವಾಗಿ ಬೆಳೆಯುವ ಇವುಗಳ ಬೆಲೆಯೂ ದುಬಾರಿಯಾಗಿರುವುದಿಲ್ಲ. ಆಗ ಹೆಚ್ಚಾಗಿ ಇವನ್ನು ಸೇವಿಸಿದರೆ ಇಡೀ ವರ್ಷದ ಖರ್ಚಿಗೆ ಬೇಕಾದ 'ಎ' ಜೀವಸತ್ವ ನಮ್ಮ ಯಕೃತ್ತಿನಲ್ಲಿ ಶೇಖರಣೆಯಾಗುವುದು.

ಅಪಘಾತಗಳಿಂದಲೂ ಅಂಧತ್ವ ಉಂಟಾಗಬಹುದು. ಸಾಮಾನ್ಯವಾಗಿ ಮಕ್ಕಳು ಒರಟಾದ ವಸ್ತುಗಳನ್ನು ಹಿಡಿದುಕೊಂಡು ಆಡಲು ಇಷ್ಟಪಡುತ್ತಾರೆ. ದೂರದರ್ಶನದಲ್ಲಿ ರಾಮಾಯಣ, ಮಹಾಭಾರತ ಪ್ರಸಾರಗೊಳ್ಳುತ್ತಿದ್ದ ಕಾಲದಲ್ಲಿ ಹೆಚ್ಚಾಗಿ ಬಾಲಕ, ಬಾಲಕಿಯರು ಬಿಲ್ಲುಬಾಣಧಾರಿಗಳಾಗಿ ಸಣ್ಣಪುಟ್ಟ ಯುದ್ಧಗಳ ಆಟವನ್ನೇ ಆಡುತ್ತಿದ್ದರು. ಆಕಸ್ಮಾತ್ ಮಗುವಿನ ಕಣ್ಣಿಗೆ ಆ ಚೂಪಾದ ಬಾಣ ನಾಟಿದರಂತೂ ಬಹಳ ಅಪಾಯಕಾರಿ. ಅಂತೆಯೇ ಮಕ್ಕಳು ಕಾಗದ ಕತ್ತರಿಸುವಾಗ ಉಪಯೋಗಿಸುವ ಹರಿತವಾದ ಕತ್ತರಿ, ತಾಯಿಯಂದಿರು ಹೊಲಿಯುವಾಗಿನ ಸೂಜಿ, ಅವರೇ ಆಟವಾಡುವ ಕವಣೆಗಲ್ಲುಗಳೂ ಅಷ್ಟೇ ಅಪಾಯಕಾರಿ. ಬಾಲಕಿಯರಿಗಿಂತಲೂ ಬಾಲಕರೇ ಹೆಚ್ಚಾಗಿ ಇಂತ ಅಪಘಾತಗಳಿಂದ ಕಣ್ಣಿನ ಹಾನಿಗೀಡಾಗುತ್ತಾರೆ.

ಚಿಕ್ಕಮಕ್ಕಳ ಆಟಿಕೆಗಳನ್ನು ತಯಾರಿಸುವವರು ಹರಿತವಾದ ವಸ್ತುಗಳನ್ನು ತಯಾರಿಸದೆ, ಮಕ್ಕಳ ಕಣ್ಣುಗಳು ಹಾಗೂ ಇತರ

ಅಂಗಾಂಗಗಳಿಗೆ ಅಪಾಯವಿರದ ವಸ್ತುಗಳನ್ನು ತಯಾರಿಸುವುದು ಒಳಿತು. ಮಕ್ಕಳ ಹೆತ್ತವರು ಮುನ್ನೆಚ್ಚರಿಕೆಯನ್ನು ವಹಿಸುವುದರಿಂದ ಅನಾವಶ್ಯಕವಾಗಿ ಆಗುವ ಅನೇಕ ಆಕಸ್ಮಿಕಗಳನ್ನು ತಡೆಗಟ್ಟಬಹುದು.

ಮಕ್ಕಳು ಸಾಕಷ್ಟು ಬೆಳಕಿಲ್ಲದ ಪರಿಸರದಲ್ಲಿ ಓದುವುದೂ ಕಣ್ಣುಗಳ ತೊಂದರೆಗೆ ಮಗುದೊಂದು ಕಾರಣವಾಗಿದೆ. ಕಣ್ಣಿನೊಳಕ್ಕೆ ಏನಾದರೂ ಕಸವಾಗಲೀ ,ಸಣ್ಣ ಲೋಹದ ಪುಡಿಯಾಗಲೀ, ಧೂಳಾಗಲೀ ಸೇರಿದರೆ ತತ್ ಕ್ಷಣವೇ ನೋವಾಗುವುದಲ್ಲದೆ, ಕಣ್ಣು ಗಳಿಂದ ನೀರು ಸುರಿಯಲು ಪ್ರಾರಂಭವಾಗು ವುದು. ಇದು ಪ್ರಕೃತಿಯೇ ಆ ಕಸವನ್ನು ಕಣ್ಣುಗಳಿಂದ ಹೊರ ಹಾಕುವ ಉಪಾಯ ವಾಗಿದೆ. ಇಷ್ಟಕ್ಕೂ ಕಸ ಹೊರ ಹೋಗದಿದ್ದಲ್ಲಿ ನಾವೇ ಶುದ್ಧವಾದ ನೀರನ್ನು ಹಲವು ಬಾರಿ ಕಣ್ಣುಗಳಿಗೆ ಚಿಮುಕಿಸಬೇಕು ಹಾಗೂ ಹೋಗದಾಗ ಹತ್ತಿರದ ನೇತ್ರ ತಜ್ಞರನ್ನು ಸಂಪರ್ಕಿಸುವುದು ಅಗತ್ಯ.

ದೀಪಾವಳಿಯಂತಹ ಹಬ್ಬ ಹರಿದಿನಗಳಲ್ಲಿ ಹಿರಿಯರ ಅನುಪಸ್ಥಿತಿಯಲ್ಲಿ ಮಕ್ಕಳೇ ಪಟಾಕಿಗಳನ್ನು ಹೊತ್ತಿಸಲು ಬಿಡುವುದು ಬಹಳ ಅಪಾಯಕಾರಿ. ರಾಸಾಯನಿಕ ವಸ್ತುವಾಗಲಿ, ಕ್ರಿಮಿ ನಿವಾರಣ ಔಷಧಿಯಾಗಲಿ ಕಣ್ಣಿನೊಳಗೆ ಬಿದ್ದರಂತೂ ಅಪಾಯ. ಆದ್ದರಿಂದ ಹಿರಿಯರು ಅವನ್ನು ಮಕ್ಕಳ ದೃಷ್ಟಿಗೆ ಕಾಣದಂತೆ ಜೋಪಾನ ವಾಗಿ ಇರಿಸಬೇಕು.

ಅಂಧತ್ವ ಉಂಟಾಗಲು ಹಲವಾರು ಕಾರಣಗಳಿದ್ದರೂ ವಯಸ್ಕರಿಗೆ ಬರುವ ಅಂಧತ್ವಕ್ಕೆ ಬೆಳೆಯುವ ಕಣ್ಣಿನ ಪೊರೆಯೂ ಅತಿ ಮುಖ್ಯ ಕಾರಣವಾಗಿದೆ. ಸಾಮಾನ್ಯವಾಗಿ ಪೊರೆಗಳೆಲ್ಲ ನಿಧಾನವಾಗಿ ಮುಂದುವರೆಯುವುವು. ಸಿಹಿ ಮೂತ್ರ ರೋಗಿಗಳು ಹೆಚ್ಚಾಗಿ ಈ ಕಣ್ಪೊರೆಯ ಕಾಯಿಲೆಗೆ ಗುರಿಯಾಗುವರು. ಈ ಕಾ[illegible] ಗುರಿಯಾಗದಂತೆ ಹೆಚ್ಚು 'ಎ' ಜೀವ[illegible] ಆಹಾರವನ್ನು ಸೇವಿಸುವುದರೊಂದಿಗೆ ಸಾಕಷ್ಟು ನೀರನ್ನು ದ್ರವಾಹಾರವನ್ನು ಸೇವಿಸಿ ರಕ್ತ ಚಲನೆಯನ್ನು ಸರಿಯಾಗಿ ಇರಿಸಿಕೊಳ್ಳುವುದು ಸೂಕ್ತ.

ಪೊರೆಯು ಪೂರ್ಣವಾಗಿ ಬೆಳೆಯುವ ಮುಂಚೆ ನೇತ್ರತಜ್ಞರ ಸಲಹೆಯಂತೆ ಕನ್ನಡಕ ಗಳನ್ನು ಬದಲಾಯಿಸಬಹುದು. ಮುಂದುವರಿದ ಪೊರೆಗಳನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯಿಸಿದಾಗ ಅಂಧತ್ವ ದೂರವಾಗುವುದು.

ಗ್ಲಾಕೋಮಾ ಅಥವಾ 'ಕಣ್ಣೆಗಿತ' ಎಂದು ಕರೆಯಲ್ಪಡುವ ಕಣ್ಣಿನ ವ್ಯಾಧಿಯು ವಯಸ್ಕರಲ್ಲಿ ಕಂಡುಬರುವ ಅಂಧತ್ವಕ್ಕೆ ಇನ್ನೊಂದು ಕಾರಣವಾಗಿದೆ. ಪ್ರಾರಂಭದ ದೆಸೆಯಲ್ಲಿ ಈ ವ್ಯಾಧಿಯನ್ನು ಪತ್ತೆ ಹಚ್ಚುವುದೇ ಕಷ್ಟಕರ. ಕಣ್ಣು ಗುಡ್ಡೆಯೊಳಗಣ ಒತ್ತಡವು ಅತಿಯಾದರೆ ಕಣ್ಣು ಕೆಂಪಗಾಗಿ ದೃಷ್ಟಿಗೆ ಹೊಗೆಕವಿದಂತಿರುವುದು. ಈ ವ್ಯಾಧಿಯು ನಮಗಿಲ್ಲವೆಂದು ದೃಢಪಡಿಸಿ ಕೊಳ್ಳಲು ನಾವು ಕನಿಷ್ಠಪಕ್ಷ ವರ್ಷಕ್ಕೊಂದಾ ವರ್ತಿಯಾದರೂ ನೇತ್ರ ವೈದ್ಯರಿಂದ ಪೂರ್ಣ ವಾಗಿ ನೇತ್ರ ಪರೀಕ್ಷೆ ಮಾಡಿಸಿಕೊಳ್ಳುವುದು ಕ್ಷೇಮಕರ.

ನಮ್ಮ ದೇಶದಲ್ಲಿ ಎಷ್ಟೋ ಜನರು ಕನ್ನಡಕಗಳನ್ನು ಕೊಳ್ಳಲು ಅಸಮರ್ಥರು. ಈ ಕಾರಣದಿಂದಲೇ ಕುರುಡರಾದವರೂ ಹಲವಾರು ಮಂದಿ. ಸಮಾಜಸೇವಕರು, ಸೇವಾ ನಿರತ ಸಂಘಸಂಸ್ಥೆಗಳು ಧರ್ಮಾರ್ಥವಾಗಿ ಕನ್ನಡಕಗಳನ್ನು ಒದಗಿಸಿ ಇಂಥ ಬಡಜನರು ಅಂಧರಾಗದಂತೆ ತಡೆಯಬಹುದು.

ಟ್ರಕೋಮಾ ಅಥವಾ ರವೆಗಣ್ಣು ಎಂಬುದು ಹೆಚ್ಚಾಗಿ ಉತ್ತರ ಆಫ್ರಿಕ, ಮಧ್ಯಪ್ರಾಚ್ಯ, ದಕ್ಷಿಣ ಯೂರೋಪುಗಳಲ್ಲಿ ಕಂಡುಬರುವ ಪ್ರಬಲ ವಾದ ಕಣ್ಣಿನ ಅಂಟುರೋಗ. ನೇರ ಸಂಪರ್ಕದಿಂದ ಅಥವಾ ಸೋಂಕು ತಗುಲಿದ [illegible]ವಲು, ಕರವಸ್ತ್ರಗಳನ್ನು ಉಪಯೋಗಿಸು [illegible]ದರಿಂದ ಈ ರೋಗ ಹರಡುವುದು. ಒಮ್ಮೆ

ವಾಸಿಯಾದಂತೆ ಕಂಡು ಬಂದರೂ ಮತ್ತೆ ಮತ್ತೆ ಅದೇ ವ್ಯಕ್ತಿಯಲ್ಲಿ ತಲೆದೋರುವುದು. ಈ ರೋಗ ಅನಾರೋಗ್ಯ ಪರಿಸರದಲ್ಲಿ ವಾಸಮಾಡುವವರಲ್ಲಿ ಹೆಚ್ಚಾಗಿ ಕಂಡು ಬರುವುದು. ಆರೋಗ್ಯಪಾಲಕ ನಿಯಮ ಪಾಲನೆಯೂ, ಶುಚಿತ್ವವೂ ಈ ರೋಗ ಬಾರದಂತೆ ತಡೆಗಟ್ಟುವುವು. ಆದುದರಿಂದ ಈ ರೋಗ ಉಲ್ಬಣಗೊಳ್ಳುವ ಮೊದಲೇ ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಿಕೊಳ್ಳಬೇಕು.

ಯಾವ ಚಿಕಿತ್ಸೆಯಿಂದಲೂ, ಗುಣವಾಗದ ಕಣ್ಣಿನ ಸಮಸ್ಯೆಗೆ ಕೆಲವೊಮ್ಮೆ 'ಕಾರ್ನಿಯಾದ ಕಸಿ'ಯ ಶಸ್ತ್ರಚಿಕಿತ್ಸೆಯೇ ರಾಮಬಾಣ. ಯಾವುದಾದರೂ ವ್ಯಾಧಿಯಿಂದಲೋ, ಇತರ ಹಾನಿಯಿಂದಲೋ ಅಕ್ಷಿಪಟಲ ಅಥವಾ ಕಣ್ಣುಗುಡ್ಡೆಯ ಪಾರದರ್ಶಕ ಕಾರ್ನಿಯಾಕ್ಕೆ ಏಟಾಗಿದ್ದರೆ, ಅದರಿಂದ ಕಲೆಗೊಂಡ ಅಂಗಾಂಶಗಳು ಕಣ್ಪಾಪೆಯನ್ನು ಮುಚ್ಚಿ ಭಾಗಶಃ ಅಥವಾ ಪೂರ್ಣವಾಗಿ ಅಂಧತ್ವವನ್ನುಂಟು ಮಾಡಬಹುದು. ಇಂತಹ ಗಾಯಗೊಂಡ ಅಂಗಾಂಶವನ್ನು ಕೂಡಿಸಲು ಈಗ ಸಾಧ್ಯವಿದೆ.

ಈ ದಿಸೆಯಲ್ಲಿ ನೇತ್ರದಾನ ಮಹಾದಾನವಾಗಿ ಪರಿಣಮಿಸಿದೆ. ನೇತ್ರದಾನವು ಪ್ರಯೋಜನಕ್ಕೆ ಬರಬೇಕಾದರೆ ನೇತ್ರದಾನಿಯೂ ಸತ್ತಕೂಡಲೇ ಮತ್ತೊಬ್ಬರಿಗೆ ಜೋಡಿಸಬೇಕಾದ ಕಣ್ಣಿನ ಕಾರ್ನಿಯಾಗಳನ್ನು ಸಂಗ್ರಹಿಸಿ ಅತ್ಯಂತ ಸಮೀಪದ ನೇತ್ರನಿಧಿಗೆ ತಲುಪುವಂತೆ ಮಾಡಲು ವೈದ್ಯರಿಗೆ ತಕ್ಷಣ ಸುದ್ದಿ ತಿಳಿಸಬೇಕು. ವ್ಯಕ್ತಿಯು ಮರಣವನ್ನಪ್ಪಿದ ಆರುತಾಸುಗಳೊಳಗೆ ಸಂಗ್ರಹಿಸಿದ ಕಾರ್ನಿಯವನ್ನು ಅಂಧವ್ಯಕ್ತಿಗೆ ೨೪ ತಾಸುಗಳೊಳಗೆ ಜೋಡಿಸುವುದು ಕ್ರಮವಾಗಿದೆ.

ಮಹಿಳೆಯೊಬ್ಬಳು ತನ್ನ ೩೦ನೆಯ ವಯಸ್ಸಿನಲ್ಲಿ ದೃಷ್ಟಿಯನ್ನು ಕಳೆದುಕೊಂಡು, ನೇತ್ರದಾನದಿಂದ ಪಡೆದ ಕಾರ್ನಿಯಾದ ಕಸಿಯಿಂದ ದೃಷ್ಟಿಯ ಪುನಶ್ಚೇತನ ಪಡೆದುದನ್ನು ವೃತ್ತಪತ್ರಿಕೆಯಲ್ಲಿ ತಾನೇ ಓದಿ ಆನಂದಬಾಷ್ಪ ಸುರಿಸಿದಳು. ಗೃಹಸ್ಥರೊಬ್ಬರು ತನ್ನ ಮೂರು ಪುತ್ರರನ್ನು ಸ್ಪರ್ಶಮಾತ್ರದಿಂದಲೇ ಹಿರಿಯವ, ಮಧ್ಯಮ, ಕಿರಿಯವ ಎಂದು ಗುರುತಿಸುತ್ತಿದ್ದರು. 'ಕೋರ್ನಿಯಲ್ ಗ್ರಾಫ್ಟಿಂಗ್' ಶಸ್ತ್ರಚಿಕಿತ್ಸೆಯಿಂದ ದೃಷ್ಟಿಪಡೆದು ಕಣ್ಣಿನಿಂದಲೇ ನೋಡಿದಾಗ ಅವರಿಗಾದ ಸಂತಸ ವರ್ಣಿಸಲಸದಳ.

ಮಾನವನ ಅವಸಾನದ ಅನಂತರ ಕಣ್ಣುಗಳು ಬೆಂದು ಸುಟ್ಟು ಬೂದಿಯಾಗುವುವು ಇಲ್ಲವೆ ಮಣ್ಣಿನೊಂದಿಗೆ ಸೇರಿ ಗೊಬ್ಬರವಾಗುವುವು. ಅದರ ಬದಲು ನಾವು ಜೀವಿಸಿರುವಾಗಲೇ ನೇತ್ರದಾನ ಮಾಡಿದ್ದರೆ ನಮ್ಮವೇ ಆ ಕಣ್ಣುಗಳು ಇನ್ನೊಬ್ಬರ ಮುಖದಲ್ಲಿ ಮತ್ತೆ ಹಲವುವರ್ಷಗಳ ಕಾಲ ಸೂರ್ಯೋದಯ, ಸೂರ್ಯಾಸ್ತಮಾನ ಅಂದವನ್ನು, ಹಕ್ಕಿಯ ಪುಕ್ಕಗಳ ಬಣ್ಣಗಳನ್ನು, ಹೂ, ಹಣ್ಣುಗಳ ವರ್ಣಸೌಂದರ್ಯವನ್ನು ನೋಡಲು ಸಾಧ್ಯವಾಗುವುದು. ಈ ಜಮಾನದ ವೈಜ್ಞಾನಿಕ ಮುನ್ನಡೆ!

ನೇತ್ರದಾನ ಮಾಡಲು:-

೧. ವ್ಯಕ್ತಿ ಹದಿನೆಂಟು ವರ್ಷ [illegible]ವಾಗಬೇಕು.

೨. ವೃದ್ಧರೂ ನೇತ್ರದ[illegible] ಮಾಡಬಹುದು.

೩. ಪೊರೆ ರೋಗದಿಂದ ಬಳಲುತ್ತಿರುವವರ ಕಣ್ಣುಗಳು ಉಪಯೋಗಕರ.

೪. ಕನ್ನಡಕ ಧಾರಿಗಳೂ ದಾನ ಮಾಡಲು ಅರ್ಹರು

೫. ಸಕ್ಕರೆ ಕಾಯಿಲೆ ರಕ್ತದೊತ್ತಡವೂ ಅಡ್ಡಿಯಾಗದು.

ಆದರೆ ವಿಶೇಷ ರೋಗಗಳಾದ ಏಯ್ಡ್ಸ್, ಗನೋರಿಯ, ಸಿಫಿಲಿಸ್, ಕ್ಯಾನ್ಸರ್ ಮುಂತಾದ ರೋಗಗಳಿಂದ ಬಳಲುವವರ ಕಣ್ಣುಗಳು ಉಪಯೋಗಿಸಲಾಗುವುದಿಲ್ಲ. ನೀರಿನಲ್ಲಿ ಮುಳುಗಿ ಸತ್ತವರ ಕಣ್ಣುಗಳೂ ನಿರರ್ಥವಾಗುವುವು.

ಈ ಎಲ್ಲಾ ತಿಳುವಳಿಕೆಯನ್ನು ಪಡೆದು ಕತ್ತಲೆಯಿಂದ ಬೆಳಕಿನೆಡೆಗೆ ದೃಷ್ಟಿ ಹರಿಸೋಣ.

'ತಮಸೋಮ ಜ್ಯೋತಿರ್ಗಮಯಾ'

ನೀರಿನಿಂದ ಚಲಿಸುವ ಕಾರು

ಪ್ರೊ. ಎಂ.ಎನ್. ಗೋಪಾಲನ್
೫೬, ಮಾರುತಿ ದೇವಸ್ಥಾನದ ರಸ್ತೆ
೪ನೇ ಮುಖ್ಯ ರಸ್ತೆ, ಕುವೆಂಪುನಗರ
ಮೈಸೂರು-೫೭೦ ೦೦೯

ಇದೇನು ನೀರಿನಿಂದ ಚಲಿಸುತ್ತದೆಯೇ ಕಾರು ಎಂದು ಅಚ್ಚರಿಗೊಳ್ಳಬೇಡಿ. ನಾನೇನೂ ಹಗಲುಗನಸು ಕಾಣುತ್ತಿಲ್ಲ. ನಾನು ಹೇಳುತ್ತಿರುವುದು ಸತ್ಯವಾದ ಸಂಗತಿ. ಇಂಥ ಅದ್ಭುತವಾದ ಸಂಶೋಧನೆಯನ್ನು ಜರ್ಮನಿ ದೇಶದಲ್ಲಿರುವ ಮ್ಯೂನಿಕ್ ನಗರದ ಬಿ.ಎಮ್.ಡಬ್ಲ್ಯು ಎಂಬ ಸಂಸ್ಥೆಯು ಮಾಡಿದೆ. ಪೆಟ್ರೋಲ್, ಡೀಸೆಲ್ ಇತ್ಯಾದಿ ಇಂಧನಗಳನ್ನು ಉರಿಸಿ ಚಲಿಸುವ ವಾಹನಗಳಿಂದ ಉಂಟಾಗುತ್ತಿರುವ ವಾಯು ಮಾಲಿನ್ಯ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪ್ರಾಣವಾಯುವನ್ನು ಆಮ್ಲಜನಕ ಶ್ವಾಸಕೋಶಗಳಿಗೆ ತುಂಬಿ ಕೊಡುವ ಸಂಸ್ಥೆಗಳು ಈಗಾಗಲೇ ಹುಟ್ಟಿಕೊಂಡಿವೆ. ಇದೆಂಥ ವಿಪರ್ಯಾಸ ? ಈ ಮೇಲೆ ತಿಳಿಸಿದ ಸಂಶೋಧನೆಯಿಂದ ಇನ್ನು ಮುಂದಾದರೂ ವಾತಾವರಣವು ಹದಗೆಡದಿರಬಹುದು. ಸಂಶೋಧನೆಯ ವಿವರ ಹೀಗಿದೆ:

ಮೊಟ್ಟಮೊದಲು, ಸೌರಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಾರೆ. ಅನಂತರ, ವಿದ್ಯುಚ್ಛಕ್ತಿಯ ಸಹಾಯದಿಂದ ನೀರನ್ನು ಜಲಜನಕ ಮತ್ತು ಆಮ್ಲಜನಕ ಅನಿಲಗಳಾಗಿ ವಿಭಾಜಿಸುತ್ತಾರೆ. ಜಲಜನಕ ಅನಿಲವನ್ನು ದ್ರವೀಕರಿಸಿ, ಸಿಲೆಂಡರುಗಳಲ್ಲಿ ತುಂಬಿಸಿ, ಕಾರನ್ನು ಓಡಿಸುತ್ತಾರೆ. ಜಲಜನಕ ತುಂಬಿದ ಸಿಲೆಂಡರುಗಳು ಸುಲಭವಾಗಿ ಸಿಗಲು ದ್ರವ ಜಲಜನಕ ಸ್ಟೇಷನ್‌ಗಳನ್ನು ಆರಂಭಿಸುತ್ತಾರೆ. ಇಂತ ಎಲ್‌ಎಚ್‌ಎಫ್‌ಎಸ್‌ನ್ನು ಬಿಎಂಡಬ್ಲ್ಯೂ ಸಂಸ್ಥೆಯು ದುಬಾಯಿಯಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಪ್ರದರ್ಶನದಲ್ಲಿ ಇಟ್ಟಿದ್ದಾರೆ. ಜಲಜನಕ ಚಾಲಿತ ಕಾರು ಪ್ರದರ್ಶನಕ್ಕೆ ಭೇಟಿ ಕೊಟ್ಟಿರುವ ಜನಸ್ತೋಮದ ಮನಸ್ಸನ್ನು ಆಕರ್ಷಿಸಿದೆ. ಮನಸ್ಸು ಆಕರ್ಷಗೊಳ್ಳದೆ ಮತ್ತೇನು? ವಾಹನ ಪ್ರದೂಷಣ ನಿಯಂತ್ರಣ ಕಾರ್ಯದಲ್ಲಿ ಒಂದು ಪುಟ್ಟ ಹೆಜ್ಜೆ ಇಟ್ಟರೂ ಅದು ಶ್ಲಾಘನೀಯವೆಂದೇ ತಿಳಿಯಬೇಕು.

ಬಿಎಂಡಬ್ಲ್ಯೂ ಸಂಸ್ಥೆಯ ಹಿರಿಯ ಅಧಿಕಾರಿಗಳೊಬ್ಬರಾದ ಡಾ. ಹೋರ್ಸ್ಟ್ ಟೆಲ್ಲಿಕ್ ಪ್ರಕಾರ ಸಂಸ್ಥೆಯು ಕಳೆದ ೨೫ ವರ್ಷಗಳ ದೀರ್ಘಕಾಲ ಸಂಶೋಧನೆಯನ್ನು ನಡೆಸಿ, ಯಾವ ಡೀಸೆಲ್ ಪೆಟ್ರೋಲ್ ಚಾಲಿತ ಕಾರಿಗಿಂತ ವೇಗದಲ್ಲಿಯಾಗಲೀ ಅಥವಾ ಮುಂಜಾಗ್ರತೆ ಕ್ರಮದಲ್ಲಿಯಾಗಲೀ ಕಡಿಮೆ ಇರದಂತಹ ಜಲಜನಕಚಾಲಿತ ಕಾರೊಂದನ್ನು ತಯಾರಿಸಿದೆ. ಇಂಥಹ ಕಾರು ಮಾರುಕಟ್ಟೆಗೆ ಬರಬೇಕಾದರೆ, ಇನ್ನೂ ಹಲವಾರು ವರ್ಷಗಳೇ ಬೇಕಾದೀತು ! ಕಾರಣ, ಇಷ್ಟೆ. ಈಗ ಸ್ಥಾಪಿತಗೊಂಡಿರುವ ಪೆಟ್ರೋಲ್ ಕಂಪನಿಗಳು ದ್ರವೀಕರಿಸಿದ ಜಲಜನಕದ ಸಿಲೆಂಡರುಗಳ ಸ್ಟೇಷನ್‌ಗಳನ್ನು ತೆರೆಯಬೇಕು. ಈ ಸಾಹಸದ ಕಾರ್ಯಕ್ಕೆ ಪೆಟ್ರೋಲ್ ಕಂಪನಿಗಳು ಕೈಹಾಕುತ್ತವೆಯೇ ಎಂಬ ಪ್ರಶ್ನೆಗೆ ಉತ್ತರವನ್ನು ಕಾದು ನೋಡಬೇಕಾಗಿದೆ. ಪೆಟ್ರೋಲ್ ಬಾವಿಗಳು ಇನ್ನು ಕೆಲವೇ ವರ್ಷಗಳಲ್ಲಿ ಬತ್ತಿ ಹೋಗುತ್ತವೆ ಎಂದು ತಜ್ಞರು ಈಗಾಗಲೇ ತಿಳಿಸಿದ್ದಾರೆ. ಮುಂದೆ ಏನು ಗತಿ ಎಂದು ಈಗಲೇ ಯೋಚಿಸಿ, ಮುಂಜಾಗ್ರತೆ ಕ್ರಮವಹಿಸಿ, ಸಂಶೋಧನಾ ಕಾರ್ಯದಲ್ಲಿ ತೊಡಗಬೇಕು. ಬಿಎಂಡಬ್ಲ್ಯೂ ಸಂಸ್ಥೆಯು ಈ ಸಂಶೋಧನೆಗೆ ನಾಂದಿ ಹಾಡಿದೆ.

ಜಲಜನಕಚಾಲಿತ ಕಾರುಗಳ ಒಂದೇ ಒಂದು ನ್ಯೂನತೆ ಏನೆಂದರೆ , ಇಂಥ ಕಾರುಗಳು ಈಗ ಚಾಲನೆಯಲ್ಲಿರುವ ಪೆಟ್ರೋಲ್ ಚಾಲಿತ ಕಾರುಗಳಲ್ಲಿರುವ ಪೆಟ್ರೋಲ್ ಡಬ್ಬಗಳಿಗಿಂತ

ಮೂರರಷ್ಟು ಹೆಚ್ಚು ಗಾತ್ರ ದ್ರವೀಕರಿಸಿದ ಜಲಜನಕದ ಡಬ್ಬಗಳನ್ನು ತಮ್ಮೊಳಗೆ ಅಳವಡಿಸಿಕೊಳ್ಳಬೇಕು. ಮೇಲಾಗಿ, ಈ ಡಬ್ಬಗಳನ್ನು ಉಷ್ಣಾಂಶದಲ್ಲಿಟ್ಟಿರಬೇಕು.

ಮಾನವನು ನೀರನ್ನು ಇಂಧನವನ್ನಾಗಿ ಉಪಯೋಗಿಸಿಕೊಂಡು, ತನ್ನ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯಬೇಕೆಂದು ಆಶಿಸುವುದು ಸ್ವಾಭಾವಿಕ, ಈ ದಿಟ್ಟಿನಲ್ಲಿ ಮೇಲಿನ ಸಂಶೋಧನೆಯು ಅತ್ಯಂತ ಪ್ರಮುಖವಾದುದೆಂದು ಹೇಳುತ್ತಾರೆ. ಬಿಎಂಡಬ್ಲ್ಯು ಸಂಸ್ಥೆಯ ವಿಜ್ಞಾನ ಮತ್ತು ಸಂಶೋಧನಾ ವಿಭಾಗದ ಡೈರೆಕ್ಟರ್ ಡಾ॥ಡೆಟ್ಲೆಫ್ ಫ್ರ್ಯಾಂಕ್ ಅಂತೂ ವಿಜ್ಞಾನದಿಂದ ಪ್ರಕೃತಿ ವಿರೂಪಗೊಳ್ಳದೆ, ತನ್ನ ನೈಜ ಸ್ವರೂಪವನ್ನು ತಾಳುವಂತಾಗಿದೆ. ಇದು ಅತ್ಯಂತ ಸಂತಸದ ವಿಷಯ. ಮಾನವನು ಇದೇ ರೀತಿ ಮುಂದಿನ ಹೆಜ್ಜೆ ಇಡುತ್ತಾನೆ ಎಂದು ಭಾವಿಸೋಣವೇ?

(ಸಾಧಾರ)



ಆಶಾವಾದಿಗೆ ಸಂಕಟದಲ್ಲೂ ಆಸೆಯ ಬೆಳಕು ಕಾಣುತ್ತದೆ; ನಿರಾಶಾವಾದಿಗೆ ಆಸೆಯಲ್ಲೂ ದುಃಖವೇ ಕಾಣುತ್ತದೆ.

-ಹೆಮಾಕ್ ಎಲ್ಲಿಸ್

ಸುಕ್ರಿಸ್ತನ ಜನನ ದಿನಾಂಕದ ಜಿಜ್ಞಾಸೆ

ಡಾ|| ಬಿ.ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ
ಹೈಗ್ರೌಂಡ್ಸ್, ಶ್ರೀ ಟಿ. ಚೌಡಯ್ಯ ರಸ್ತೆ
ಬೆಂಗಳೂರು - ೫೬೦ ೦೦೧

ಪಂಚಾಂಗದ ಇತಿಹಾಸವನ್ನು ಕೆದಕಿದಾಗ ಗಣಿತ ಹಾಗೂ ಧರ್ಮಶ್ರದ್ಧೆ ನಡುವೆ ಘರ್ಷಣೆ ಎದ್ದುಕಾಣುತ್ತದೆ. ಪಾಶ್ಚಾತ್ಯರಲ್ಲಿ ಈ ಘರ್ಷಣೆಯ ಪರಿಣಾಮವು ಸಾಮಾಜಿಕ ವ್ಯವಹಾರಗಳಲ್ಲೂ ಕಂಡುಬರುತ್ತದೆ. ಅದೃಷ್ಟವಶಾತ್ ಈ ಬಗೆಯ ಗೊಂದಲ ಭಾರತೀಯ ಪರಿಸರದಲ್ಲಿ ಉಂಟಾಗಿರಲಿಲ್ಲ.

ಈಸ್ಟರ್ ಎಂಬುದು ಕ್ರಿಶ್ಚಿಯನ್ನರು ಆಚರಿಸುವ ಒಂದು ಹಬ್ಬ. ಇದರ ಆಚರಣೆಗಾಗಿ ದಿನಸೂಚಿಯನ್ನೇ (ಕ್ಯಾಲೆಂಡರ್) ಪರಿಷ್ಕರಿಸಬೇಕಾಗಿ ಬಂದದು ಒಂದು ಸ್ವಾರಸ್ಯಕರ ಸಂಗತಿ.

ಇದರ ಮೂಲ ಹೀಬ್ರೂ (ಯಹೂದಿಗಳ) ದಿನಸೂಚಿ. ಯಹೂದಿಗಳು ಈಜಿಪ್ಟ್‌ನಿಂದ ಹೊರಟ ಸಂದರ್ಭವನ್ನು "ಜ್ಯೂಯಿಷ್ ಪಾಸ್ ಓವರ್" ಎಂಬ ಹೆಸರಿನಿಂದ ಆಚರಿಸುತ್ತಿದ್ದರು. ಹೀಬ್ರೂ ದಿನಸೂಚಿಯಲ್ಲಿ ಈ ತಿಂಗಳ ಹೆಸರು ನಿಸಾನ್ ಎಂದು (ವಸಂತ ಮಾಸ-ಮಾರ್ಚ್, ಏಪ್ರಿಲ್ ಅವಧಿ). ಇದು ಆರಂಭವಾಗುವುದು ಅಮಾವಾಸ್ಯೆಯ ಮರುದಿನ. ತಿಂಗಳ ಹದಿನೈದನೆಯ ದಿನ ಹುಣ್ಣಿಮೆ. ಅಂದು ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿದ್ದರು.

ಆದ್ದರಿಂದ ಹುಣ್ಣಿಮೆಯ ಮುಂದಿನ ಭಾನುವಾರವನ್ನು ಈಸ್ಟರ್ ಎಂದು ನಿಗದಿಪಡಿಸಿದರು.

ಈಗ ತಿಂಗಳನ್ನು ನಿಗದಿಪಡಿಸುವ ಕೆಲಸ ಉಳಿಯಿತು. ಇದಕ್ಕಾಗಿ ಸೌರದಿನಸೂಚಿ ಬೇಕಾಯಿತು. ಆದ್ದರಿಂದ ವಸಂತಾಗಮನವನ್ನು ಸೂಚಿಸುವ ದಿನವನ್ನು ಬಳಸಲಾಯಿತು. ಇದೇ ಮಾರ್ಚ್ ೨೧, ವಸಂತವಿಷುವ. ಸೂರ್ಯ ಈ ವಿಷುವದ್ ಬಿಂದುವನ್ನು ದಾಟಬೇಕು. ಆನಂತರ ಹುಣ್ಣಿಮೆಯಾಗಬೇಕು. ಅದರ ಮುಂದಿನ ಭಾನುವಾರವೇ ಈಸ್ಟರ್.

ಸೌರ ಮತ್ತು ಚಾಂದ್ರಮಾಸಗಳನ್ನು ಹೊಂದಿಸುವ ಪ್ರಯಾಸದ ಕೆಲಸದ ಆರಂಭ ಇದು. ಇದಕ್ಕಾಗಿ ಸುವರ್ಣ ಸಂಖ್ಯೆ (ಗೋಲ್ಡನ್ ನಂಬರ್) ಎಂಬುದೊಂದು ಸಂಖ್ಯೆಯನ್ನು ಪ್ರತಿವರ್ಷಕ್ಕೂ ನಿಗದಿಪಡಿಸಿದ್ದಾರೆ. ಮಾರ್ಚ್ ೨೧ರ ಮುಂದಿನ ಹುಣ್ಣಿಮೆಯನ್ನು ಲೆಕ್ಕಹಾಕಿ ಅದರ ವಾರವನ್ನು ತಿಳಿಯಬೇಕು. ಇದಕ್ಕೆ ಅನುಸರಿಸುವ ಗಣಿತ ಗಣನೆ ಸಾಕಷ್ಟು ಸಂಕೀರ್ಣವಾಗಿದೆ. ವಿಶೇಷ ಪರಿಣಿತರು ಮಾತ್ರ ಇದರಲ್ಲಿ ಯಶಸ್ಸು ಕಾಣಬಲ್ಲರು. ಸಾಮಾನ್ಯ ಜನತೆಗೆ ಅಂತಿಮ ಫಲಿತಾಂಶ ಮಾತ್ರ ದೊರೆತರೆ ತೃಪ್ತಿ! ಈ ಗಣನೆಯ ಪ್ರಕಾರ ಪ್ರಸಕ್ತ ೨೦೦೦ನೇ ಇಸವಿಯ ಸುವರ್ಣಸಂಖ್ಯೆ ೬, ಮತ್ತು ಈಸ್ಟರ್ ದಿನಾಂಕ ೨೩-೪-೨೦೦೦.

ಪ್ರತಿ ೧೯ ವರ್ಷಗಳಿಗೊಮ್ಮೆ ಸೂರ್ಯ, ಚಂದ್ರ ಮತ್ತು ಭೂಮಿ ನಿರ್ದಿಷ್ಟ ಸ್ಥಾನಗಳಿಗೆ ಮರುಳುತ್ತವೆ ಎಂಬ ತತ್ವದ ಆಧಾರದ ಮೇಲೆ ಮೇಲಿನ ಗಣನೆಗಳು ನಿಂತಿವೆ. ಇದಲ್ಲದೇ ವಾರಗಳ ಹಂಚಿಕೆ ಪುನರಾವರ್ತನೆಯಾಗಲು ೨೮ ವರ್ಷಗಳು ಬೇಕು ಎಂಬುದನ್ನು ಲೆಕ್ಕಮಾಡಿ ತಿಳಿಯಬಹುದು. ಈ ಎರಡೂ ಅಂಶಗಳನ್ನು ಸೇರಿಸಿ ೧೯ x ೨೮= ೫೩೨ ವರ್ಷಗಳಿಗೊಮ್ಮೆ ಈಸ್ಟರ್ ಅದೇ ತಾರೀಖಿಗೆ ಬರುತ್ತದೆ ಎಂದು ತಿಳಿಯಬಹುದು. ದಿನಸೂಚಿಯ ಪರಿಷ್ಕರಣದಲ್ಲಿ ಈ ಸಂಖ್ಯೆ ೫೩೨ ಎಂಬುದು ಮುಖ್ಯಪಾತ್ರ ವಹಿಸಿದೆ.

ರಾಜಮಹಾರಾಜರ ಪಟ್ಟಾಭಿಷೇಕದ ದಿನದಿಂದ ವರ್ಷಗಳ ಗಣನೆಯನ್ನು ಆರಂಭಿಸುವ ಪರಿಪಾಠ ಎಂದಿನಿಂದಲೂ ಜಾರಿಯಲ್ಲಿದೆ. ಆದ್ದರಿಂದ ರೋಮ್‌ನಗರವನ್ನು ಸ್ಥಾಪಿಸಿದ ದಿನದಿಂದ ವರ್ಷಗಣನೆಯನ್ನು ಆರಂಭಿಸಬೇಕು ಎಂದು ಚಕ್ರವರ್ತಿ ಅಗಸ್ಟಸ್ ಹೊಸದಾಗಿ ನಿಯಮವನ್ನು ವಿಧಿಸಿದ. ಇದನ್ನು AUC ಎಂದು ಕರೆಯಲಾ ಯಿತು. ಈ ಗಣನೆ ಆರಂಭವಾದ ೧೪೮೫ ವರ್ಷಗಳನಂತರ ದಿನಸೂಚಿಯ ಪರಿಷ್ಕರಣೆ ಯ ಮೊದಲ ಪ್ರಯತ್ನ ನಡೆಯಿತು.

ಸೈಥಿಯ ಪ್ರಾಂತದ ಡಯೋನಿಯುಸ್ ಎಕ್ಸಿಗುಸ್ ಎಂಬ ಪಾದ್ರಿ ಮುಂದಿನ ಈಸ್ಟರ್ ದಿನಾಂಕಗಳನ್ನು ನಿರ್ಧರಿಸುವ ಜವಾಬ್ದಾರಿ ನಿರ್ವಹಿಸಿದ. ಆಗ ವರ್ಷಗಣನೆ ನಡೆಯುತ್ತಿದ್ದುದು ಡಯೋಕ್ಲಿಟಿಯಸ್ ರಾಜನ ಶಕೆ. ಈತ ಕ್ರಿಶ್ಚಿಯನ್ನರಿಗೆ ವಿರೋಧಿಯಾಗಿದ್ದುದರಿಂದ ಡಯೋನಿಯಸ್ ಈ ಶಕೆಯನ್ನು ಬಿಟ್ಟು AUC ಯನ್ನು ಅನುಸರಿಸಲು ನಿರ್ಧರಿಸಿದ. ಆತ ಲೆಕ್ಕಹಾಕಿದಾಗ ಆ ವರ್ಷ ಮಾರ್ಚ್೨೧ರಂದು ಅಮಾವಾಸ್ಯೆಯಾಗಿದ್ದುದು ಕಂಡುಬಂದಿತು. ಸರಿಯಾಗಿ ೫೩೨ ವರ್ಷಗಳ ಹಿಂದೆ ಅಂದರೆ ೭೫೪ AUC ಯಲ್ಲಿಯೂ ಮಾರ್ಚ್೨೧ರಂದು ಅಮಾವಾಸ್ಯೆಯಾಗಿತ್ತು ಎಂದಾತ ಲೆಕ್ಕಹಾಕಿದ. ಆ ವರ್ಷವನ್ನೇ ಆತ ಕ್ರಿಸ್ತ ಹುಟ್ಟಿದ ವರ್ಷ ೧ಎಂದು ಘೋಷಿಸಿ ಕ್ರಿಸ್ತಶಕ ೧ ಅಥವಾ AD ೧ ಎಂದು ಕರೆದ. ಇದೊಂದು ಸಾಧ್ಯತೆ. ಅಂದರೆ ಕ್ರಿ.ಶ.೧=೭೫೪ AUC.

ಲ್ಯೂಕನ ಗಾಸ್ಪೆಲ್‌ನಲ್ಲಿ ಏಸುಕ್ರಿಸ್ತನಿಗೆ ಸುಮಾರು ೩೦ವರ್ಷ ವಯಸ್ಸಾಗಿದ್ದಾಗ ಟೈಬೀರಿಯಸ್ ಸೀಸರನ ಆಳ್ವಿಕೆಯ ೧೪ ವರ್ಷಗಳು ಕಳೆದಿದ್ದುವು ಎಂಬ ಸೂಚನೆ ಇದೆ. ಈ ಚಕ್ರವರ್ತಿಯ ಆರೋಹಣ ನಡೆದದ್ದು (ಇಂದಿನ ಲೆಕ್ಕದ ಪ್ರಕಾರ) ಕ್ರಿ.ಶ.೧೪ ಈ ಅಂಶವನ್ನು ಬಳಸಿ ಡಯಾನೀಸಿಯಸ್ ಕ್ರಿ.ಶ. ೧ನ್ನು ನಿರ್ಧರಿಸಿರುವುದು ಸಾಧ್ಯ

ಆದರೆ ಡಯಾನೀಸಿಯಸ್‌ನ ಲೆಕ್ಕ ತಪ್ಪಾಗಿದೆ ಎಂದು ಸೂಚಿಸುವ ಇನ್ನೊಂದು ಅಂಶ ಹೀಗಿದೆ. ಏಸುಕ್ರಿಸ್ತ ಹುಟ್ಟಿದ್ದು ಹೆರಾಡ್ ಮಹಾರಾಜನ ಆಳ್ವಿಕೆಯಲ್ಲಿ. ಈ ಮಹಾರಾಜ ಸತ್ತದ್ದು ೭೫೦ AUC ಯಲ್ಲಿ . ಆದ್ದರಿಂದ ಅದಕ್ಕಿಂತ ಮುಂಚೆ ಕ್ರಿಸ್ತ ಹುಟ್ಟಿರಬೇಕಾದರೆ ಕ್ರಿಸ್ತಶಕ ೧ ಎಂಬುದೇ ೭೫೪ AUC ಯಾಗಲು ಹೇಗೆ ಸಾಧ್ಯ ?

ಕೆಲವು ಖಗೋಳ ಅಂಶಗಳನ್ನು ಪರಿಗಣಿಸಿ ಕ್ರಿಸ್ತ ಹುಟ್ಟಿದ ವರ್ಷವನ್ನು ನಿಖರವಾಗಿ ನಿರ್ಧರಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಕ್ರಿಸ್ತ ಸತ್ತದಿನ ಹಗಲಿನಲ್ಲೇ ಕತ್ತಲು ಕವಿಯಿತು ಎಂಬ ವಾಕ್ಯ ಹೊಸ ಒಡಂಬಡಿಕೆ (New Testament) ಯಲ್ಲಿದೆ. ಇದನ್ನು ಸೂರ್ಯಗ್ರಹಣ ಎಂದು ಪರಿಗಣಿಸಲು ಅನೇಕ ತೊಡರುಗಳಿವೆ. ಇಲ್ಲಿ ಕತ್ತಲು ಎಂಬ ಪದ ಆಧ್ಯಾತ್ಮಿಕ ಅಜ್ಞಾನವನ್ನು ಸೂಚಿಸುತ್ತದೆ ಎಂದು ಅನೇಕರ ಅಭಿಪ್ರಾಯ.

ಇನ್ನೊಂದು ಖಗೋಳ ವೈಜ್ಞಾನಿಕ ಅಂಶ ಬೆತ್ಲೆಹಮ್‌ನ ನಕ್ಷತ್ರಕ್ಕೆ ಸಂಬಂಧಿಸಿದೆ. ಮೂವರು ಮಾಗಿ ಪಂಡಿತರಿಗೆ ಈ ನಕ್ಷತ್ರವೇ ಕ್ರಿಸ್ತನ ಆಗಮನದ ಸಂದೇಶ ನೀಡಿತ್ತು.

ಈ ಘಟನೆಯ ಖಗೋಳ ವೈಜ್ಞಾನಿಕ ವಿವರಣೆ ನೀಡಲು ಅನೇಕ ಪ್ರಯತ್ನಗಳು ಹಿಂದಿನಿಂದಲೂ ನಡೆದಿವೆ. ಈಗಲೂ ನಡೆಯುತ್ತಿವೆ. ಮಂಗಳ, ಗುರು ಹಾಗೂ ಶನಿಗ್ರಹಗಳು ಆಕಾಶದಲ್ಲಿ ಒಂದೇ ಬಿಂದುವಿನಲ್ಲಿ ಸೇರಿಕೊಂಡು, ಬರಿಗಣ್ಣಿಗೆ ಹೊಸ ನಕ್ಷತ್ರದಂತೆ ಕಂಡಿರಬಹುದು ಎಂಬುದು ಒಂದು ವಿಶ್ಲೇಷಣೆ. ನೋವಾ ಇರಬಹುದೇ? ಸೂಪರ್‌ನೋವಾ ಇರಬಹುದೇ? ಎಂಬುದು ಇನ್ನೊಂದು

ಜಿಜ್ಞಾಸೆ. ಕೆಲವರು (ಹ್ಯಾಲೀ) ಧೂಮಕೇತು ಇರಬಹುದು ಎನ್ನುತ್ತಾರೆ. ಗುರುಗ್ರಹವನ್ನು ಶುಕ್ರಗ್ರಹ ಮರೆಮಾಡುವ ಅಪೂರ್ವಘಟನೆ ಇರಬಹುದು ಎಂದು ಕೆಲವರ ಅಭಿಪ್ರಾಯ.

ಖ್ಯಾತ ಖಗೋಳ ವಿಜ್ಞಾನಿ ಯೋಹಾನ್ಸ್ ಕೆಪ್ಲರ್(೧೫೭೧-೧೬೩೦)ಆರಂಭಿಸಿದ ಈ ಜಿಜ್ಞಾಸೆ ಈಗ ಒಂದು ವಿಶಿಷ್ಟ ಅಧ್ಯಯನಾಸಕ್ತ ವಿಷಯವಾಗಿ ಬೆಳೆದು ನಿಂತಿದೆ . ಈಚೆಗೆ ಪ್ರಕಟವಾಗಿರುವ ಮೈಕೇಲ್ ಮೊಲ್ನಾರ್ ಅವರ ಇನ್ನೂರು ಪುಟಗಳ ಗ್ರಂಥ ಹೊಸದೊಂದು ತಿರುವನ್ನು ನೀಡಿದೆ. (The Star of Bethlehem, by Michael R.Molnar. Rutgers University Press,1999)

ಬೆತ್ಲೆಹೆಮ್ ನಕ್ಷತ್ರದ ಬಗ್ಗೆ ತಲೆಕೆಡಿಸಿಕೊಂಡಿರುವವರೆಲ್ಲರೂ ಖಗೋಳಜ್ಞರೇ. ಗ್ರಹಗಳು ಒಟ್ಟಾಗಿ ಸೇರುವ ಸಂದರ್ಭವಾಗಲೀ, ಆಚ್ಛಾದನೆಗಳಾಗಲೀ (ಒಂದು ಕಾಯ ಇನ್ನೊಂದರ ಮುಂದೆ ಹಾದು ಹೋಗುವ ವಿಶೇಷ ಗ್ರಹಣ) ಖಗೋಳಜ್ಞರಿಗೆ ಮಹತ್ವದ ಘಟನೆಯಾಗಿರುವುದಲ್ಲದೆ ಜನಸಾಮಾನ್ಯರಿಗಲ್ಲ. ಆದ್ದರಿಂದ ಈ ಘಟನೆಗಳನ್ನು ವಿಶೇಷ ಎಂದು ಮಾಗಿ ಜನಾಂಗದವರು ಪರಿಗಣಿಸಿರಲಾರರು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಅಂದಿನ ಸಾಮಾಜಿಕ ಪರಿಸರವನ್ನುಮೊಲ್ನಾರ್ ಅಭ್ಯಸಿಸಿದ್ದಾರೆ. ಪ್ಲೇಟೋ ಹುಟ್ಟು ಹಾಕಿದ್ದ ಫಲ ಜ್ಯೋತಿಷ್ಯ ಆಗಲೇ ಸಾಕಷ್ಟು ಆಳವಾಗಿ ಬೇರೂರಿದ್ದುದು ಈ ಅಧ್ಯಯನದಿಂದ ತಿಳಿದು ಬರುತ್ತದೆ. ಆದ್ದರಿಂದ ಮಾಗಿ ಪಂಡಿತರು (ಇವರನ್ನು ಕೆಲವು ಸಂದರ್ಭದಲ್ಲಿ ಜೋಯಿಸರು ಎಂದು ಭಾಷಾಂತರಿಸಲಾಗುತ್ತದೆ.) ಲೆಕ್ಕಾಚಾರದಲ್ಲಿ ನಿಪುಣರಾಗಿದ್ದು ಆಕಾಶವನ್ನು ತಲೆ ಎತ್ತಿ ನೋಡುತ್ತಿದ್ದರೋ ಇಲ್ಲವೋ ಎಂಬ ಸಂಶಯ ಮೊಲ್ನಾರ್ ಅವರದು.

ಈ ಜಾಡನ್ನು ಹಿಡಿದು ಮುಂದುವರೆದಾಗ, ಮಾಗಿ ಪಂಡಿತರು ಜಾತಕವೊಂದನ್ನು ಮೊದಲೇ ತಯಾರಿಸಿಟ್ಟುಕೊಂಡು ಆ ಸಮಯಕ್ಕೆ ಹುಟ್ಟುವ ಮಗುವಿಗಾಗಿ ಕಾಯುತ್ತಿದ್ದರೇ ಎಂಬ ಅನುಮಾನ ಉಂಟಾಗುತ್ತದೆ. ಇದಕ್ಕೆ ಕಾರಣ ಇಲ್ಲದಿಲ್ಲ. ಟಾಲೆಮಿಯ ಟೆಟ್ರಾಬಿಬ್ಲೋಸ್ ಎಂಬ ಫಲ ಜ್ಯೋತಿಷ್ಯದ ಗ್ರಂಥವನ್ನು ಓದಿ ಜೀರ್ಣಿಸಿಕೊಂಡ ಮೇಲೆ ಮೂಡಿದ ತರ್ಕ. ಅಲ್ಲಿ ಸಿಕ್ಕ ಒಂದು ಸುಳಿವು- ಜೂಡಾದ ಚಕ್ರವರ್ತಿ ಹೆರಾಡ್‌ನ ಆಳ್ವಿಕೆಯಲ್ಲಿ ಮೇಷರಾಶಿ ಅಧಿಪತಿಯಾಗಿತ್ತು. ಆದ್ದರಿಂದ ಮಾಗಿಜೋಯಿಸರು ಇದೇ ಮುಹೂರ್ತದಲ್ಲಿ ಹುಟ್ಟುವ ಮಗುವನ್ನು ಹುಡುಕುತ್ತಿದ್ದಿರಬಹುದು.

ಹೀಗೆ ಫಲಜ್ಯೋತಿಷ್ಯವನ್ನು ಆಧಾರ ಎಂದು ಪರಿಗಣಿಸಲು ಇನ್ನೊಂದು ಕಾರಣವಿದೆ. ಬೈಬಲ್‌ನ ಮ್ಯಾಥ್ಯೂ ಗಾಸ್ಪೆಲ್‌ನಲ್ಲಿ ಸೂಚಿಸಿರುವಂತೆ ಹೊಸ ನಕ್ಷತ್ರ ಉದಯಿಸಿದ್ದು ಪೂರ್ವದಿಕ್ಕಿನಲ್ಲಿ; ಜೋಯಿಸರು ಹೊರಟದ್ದು ಪಶ್ಚಿಮದಿಕ್ಕಿಗೆ. ಅಂದರೆ ನಕ್ಷತ್ರದ ಉದಯ ಒಂದು ನಿಶ್ಚಿತ ಅವಧಿಯನ್ನು (ಲಗ್ನ ಎಂಬುದಕ್ಕೆ ಸಮಾನವಾದದ್ದು) ಸೂಚಿಸುತ್ತಿದ್ದಿರಬೇಕು. ಆ ಲಗ್ನದಲ್ಲಿ ಜೂಡಾದ ರಾಜಧಾನಿಯಲ್ಲಿ ಹುಟ್ಟಿದ ಮಗುವನ್ನು ಅವರು ಕಾಣಬೇಕಾಗಿತ್ತು. ಆದ್ದರಿಂದ ಅವರು ಪಶ್ಚಿಮ ದಿಕ್ಕಿಗೆ ಪಯಣಿಸಿದರು.

ಹೀಗೊಂದು ಸುಳಿವನ್ನು ಪಡೆದ ಮೊಲ್ನಾರ್ ''ಪ್ರಶಸ್ತ'' ಎಂದು ಅವರು ಪರಿಗಣಿಸದ ಸಮಯದ ಬಗ್ಗೆ ತಲೆ ಕೆಡಿಸಿಕೊಂಡಿದ್ದಾರೆ. ಇದಕ್ಕಾಗಿ ಫಲಜ್ಯೋತಿಷ್ಯವನ್ನು ಅಭ್ಯಸಿಸಿ ನಾಲ್ಕಾರು ದಿನಾಂಕಗಳನ್ನು ಪತ್ತೆ ಮಾಡಿದ್ದಾರೆ .ಇವುಗಳಲ್ಲಿ ಕ್ರಿ.ಪೂ.೬ರ ಏಪ್ರಿಲ್೧೭ ''ಅತ್ಯಂತ ಪ್ರಶಸ್ತ'' ಎಂದು ಫಲಜ್ಯೋತಿಷ್ಯಗಳಿಂದ ತಿಳಿದಿದ್ದಾರೆ. ಈ ಲಗ್ನದಲ್ಲಿ ಮೇಷ ರಾಶಿಗೆ

ವಿಶೇಷ ಸ್ಥಾನ ಇದೆ. ಸೂರ್ಯನಲ್ಲದೆ ಶುಕ್ರ, ಗುರು ಇವೂ ಮೇಷರಾಶಿಯಲ್ಲಿವೆ. ಚಂದ್ರ ಗುರುವನ್ನು ಆಚ್ಛಾದಿಸಿರುವುದೂ ಒಂದು ವಿಶೇಷ.

ಕ್ರಿ.ಪೂ.೧೦ ರಿಂದ ೪ ರವರೆಗೆ ಕ್ರಿಸ್ತನ ಜನ್ಮ ಎಂದು ಸೂಚಿಸಿದ ಇತಿಹಾಸಕಾರರಿಗೆ ಈ ದಿನಾಂಕ ಒಪ್ಪಿಗೆಯಾಗುತ್ತದೆ.

ಫಲಜ್ಯೋತಿಷ್ಯವನ್ನು ಮುಂದೊಡ್ಡಿ ತರ್ಕ ಹೂಡಿರುವುದು ಒಂದು ಭಾಗವಾದರೆ, ಇದಕ್ಕೆ ತೀರಾ ವಿರುದ್ಧವಾದ ಇನ್ನೊಂದು ಭಾಗವೂ ಇದೆ. ಇದು ಕೇವಲ ಕಟ್ಟುಕತೆ ಇರಬಹುದು. ಕ್ರಿ.ಶ. ೭೦ರ ಸುಮಾರಿನಲ್ಲಿ ಹೆಣೆದಿರಬಹುದಾದ ಈ ಕತೆಯಲ್ಲಿ ಏಸುಕ್ರಿಸ್ತ ಜನ್ಮಕ್ಕೆ ವಿಶೇಷ ಅರ್ಥವನ್ನು ಕೊಡುವ ಘಟನೆಯನ್ನು ಆಕಾಶದಿಂದ ಎಳೆತರುವ ಪ್ರಯತ್ನವೂ ಇದಾಗಿರಬಹುದು ಎಂಬುದು ಕೆಲವರ ಅಭಿಪ್ರಾಯ. ಈ ಎರಡೂ ಅತಿರೇಕಗಳ ನಡುವೆ ವಾಸ್ತವ ಅಡಗಿದೆ.

ಹಳೆಯ ಸಾಮಾಜಿಕ ವ್ಯವಸ್ಥೆಯನ್ನು ಹೊಸ ಅಳತೆಗೋಲಿನಿಂದ ಅಳೆಯುವಾಗ ಉಂಟಾಗುವ ಒಪ್ಪುತಪ್ಪುಗಳ ಪರಿಣಾಮವೇ ಈ ಜಿಜ್ಞಾಸೆ. ಏಸುಕ್ರಿಸ್ತನ ೨೦೦೦ ವರ್ಷದ ಜಯಂತಿಯನ್ನು ಸಂಭ್ರಮವಾಗಿ ಆಚರಿಸುತ್ತಿರುವ ಸಂದರ್ಭದಲ್ಲಿ ಈ ಪುಸ್ತಕ ಪ್ರಕಟವಾಗಿರುವುದೊಂದು ಸಾಹಸವೇ ಸರಿ. ಯಾವರೀತಿಯ ಪ್ರತಿಕ್ರಿಯೆಯನ್ನು ಇದು ಉಂಟುಮಾಡುತ್ತದೆ ಎಂದು ಕಾದು ನೋಡಬೇಕು.



ದೇವಾಲಯವನ್ನು ತನ್ನ ಯಶಸ್ಸಿಗಲ್ಲದೆ, ದೇವರ ಸೇವೆ ಎಂದೇ ಕಟ್ಟಿಸುವವರಾರೂ ಅದರ ಮೇಲೆ ತಮ್ಮ ಹೆಸರನ್ನು ಕೆತ್ತಿಸುವುದಿಲ್ಲ.

-ಅಲೆಗ್ಸಾಂಡರ್ ಪೋಪ್

ಸ್ವಾತಂತ್ರ್ಯ ಯೋಧ ವೀರ ಸಾವರಕರ್ : ಜೀವನ ಮತ್ತು ಸಂದೇಶ

ಕೆ ಶಾಂತಾಮಣಿ
೧೦೦೯ ಕಲ್ಪದ್ರುಮ, ಇ ಅಂಡ್ ಎಫ್
ಬ್ಲಾಕ್ ಉದಯರವಿ ರಸ್ತೆ, ಕುವೆಂಪುನಗರ,
ಮೈಸೂರು-೨೩

ಹೇ ಮಾತೃಭೂಮಿ ತುಜಲಾ ಮನ ವಾಹಿಯೇಲೇ
ವಕ್ತೃತ್ವ-ವಾಗ್ವಿಭವಹೀ ತುಜ ಅರ್ಪಿಯೇಲೇ
ತೂತೇಚಿ ಅರ್ಪಿಲಿ ನವೀ ಕವಿತಾ ರಸಾಲಾ
ಲೇಖಾ ಪ್ರತಿ ವಿಷಯ ತೂಚಿ ಅನನ್ಯ ಝಾಲಾ॥

ವಿನಾಯಕ ದಾಮೋದರ ಸಾವರಕರ್ ಅವರುನಾಸಿಕತಾಲ್ಲೂಕಿನಗೂ ಭಗೂರು ಗ್ರಾಮದಲ್ಲಿ ೧೮೮೩ರ ಮೇ ತಿಂಗಳ ೨೮ನೇ ತಾರೀಖಿನಲ್ಲಿ ಜನ್ಮ ತಾಳಿದರು. ತಂದೆ ದಾಮೋದರ ಸಾವರಕರ. ತಾಯಿ ರಾಧಾ ಬಾಯಿ. ಅವರ ಪೂರ್ವಿಕರು ಪಾಲಶೇತ ಬಳಿ ಇರುವ ಸಾವರವಾಡಿಯವರು. ಇದರಿಂದಲೇ ಸಾವರಕರ್ ಎಂದು ಹೆಸರು ಬಂತು. ಚಿತ್ಪಾವನ ಕುಲಸ್ಥರಾದ ಅವರ ಮನೆಯವರು ವೇದ ವಿದ್ಯಾಸಂಪನ್ನರು. ಸಾವರಕರ್ ಚಿಕ್ಕಪ್ಪ ಚಿಕ್ಕ ಹುಡಗರನ್ನು ಕೂರಿಸಿಕೊಂಡು ರಾಣಿಲಕ್ಷ್ಮೀ ಬಾಯಿ, ಶಿವಾಜಿ ಇವರ ವೀರಕತೆಗಳನ್ನು ಹೇಳುತ್ತಿದ್ದರು. ಲಾವಣಿಗಳನ್ನು ಹಾಡುತ್ತಿದ್ದರು. ಸಾವರಕರ್ ಮೈಯೆಲ್ಲ ಕಣ್ಣಾಗಿ ಕೇಳುತ್ತಿದ್ದರು. ಅವರದು ವೀರವಂಶ.

ತಾಯಿಯ ಸಾವಿನನಂತರ ಇವರ ವಿದ್ಯಾಭ್ಯಾಸ ನಾಸಿಕದಲ್ಲಿ ನಡೆಯಿತು. ಇವರ ಅಣ್ಣ ಗಣೇಶ ಅವನನ್ನು ಪ್ರೀತಿಗೆ ಬಾಬಾ ಎಂದೂ ಇವರನ್ನು 'ತಾತ್ಯಾ' ಎಂದು ಕರೆಯುತ್ತಿದ್ದರು. ಇವರಿಗೆ ಒಬ್ಬ ತಂಗಿ ಮಾಯ ಒಬ್ಬ ತಮ್ಮ ನಾರಾಯಣ. ಈ ಮೂವರು ದೇಶಕ್ಕಾಗಿ ದೇಹ ಸವೆಸಿದರು. ವಿದ್ಯಾರ್ಥಿ ದೆಸೆಯಲ್ಲೇ ಸಾವರಕರ್ ಮಿತ್ರರನ್ನು ಕಟ್ಟಿಕೊಂಡು ಸ್ವತಂತ್ರ ಘೋಷಣೆ, ರಾಜ್ಯಕ್ರಾಂತಿ, ಸಾಮಾಜಿಕ ಕ್ರಾಂತಿ ನಡೆಸುತ್ತಿದ್ದರು. ಆಗಲೇ ಕಾವ್ಯವನ್ನೂ ರಚಿಸುತ್ತಿದ್ದರು. ಮಹಾಭಾರತದ ಭೀಮ ಅವರ ಮೆಚ್ಚಿನ ನಾಯಕ. ಓವಿ, ಘಟಿಕಾ, ಆರ್ಯ, ಎಲ್ಲವನ್ನೂ ರೂಢಿ ಮಾಡಿಕೊಂಡಿದ್ದರು.

ನಾಸಿಕದಲ್ಲಿ ಶಿವಾಜಿ ಶಾಲೆಗೆ ಸೇರಿದರು. ಅಣ್ಣನ ಕೊಠಡಿಯಲ್ಲೇ ವಾಸ. ರಾನಡೆ, ಜೋಶಿ, ಖರ್ವೆ ಅದರ ಸಂಚಾಲಕರು. ಅಲ್ಲಿಯ ಗೆಳೆಯರು ಇವರಿಗೆ ಸರಿಹೋಗಲಿಲ್ಲ. ಕಾಡು ಹರಟೆ ಅಗ್ಗದ ಹಾಸ್ಯದಲ್ಲಿ ಕಾಲಕಳೆಯುತ್ತಿದ್ದರು. ಪಟ್ಟಣದ ಈ ಸುಶಿಕ್ಷಿತರಿಗಿಂತ ಹಳ್ಳಿಯ ಅಶಿಕ್ಷಿತ ಗೆಳೆಯರೇ ಹೆಚ್ಚು ಜ್ಞಾನಿಗಳು, ದೇಶಭಕ್ತರು, ಸುಶೀಲರು ಆಗಿ ಕಂಡರು. ಇವರು ಬರಹಗಾರರೆಂದು ಎಲ್ಲರಿಗೂ ತಿಳಿಯಿತು. 'ಹಿಂದೂ ಸಂಸ್ಕೃತಿ ಶ್ರೇಷ್ಠತೆ' ಬಗ್ಗೆ ಲೇಖನ ಬರೆದು, ನಾಸಿಕ ವೈಭವದಲ್ಲಿ ಪ್ರಕಟಿಸಿದರು. ನಾಸಿಕದ 'ವಕ್ತೃತ್ವೋತೇಜಕ-ಸಭೆ' ನಡೆಸಿದ ಭಾಷಣದಲ್ಲಿ ಇವರಿಗೆ ಮೊದಲ ಬಹುಮಾನ. ತೀರ್ಪುಗಾರರು ಇವರ ಭಾಷೆ, ಶಾಸ್ತ್ರ ಶುದ್ಧ ಲೇಖನ ಪದ್ಧತಿಗೆ ಬೆರಗಾದರು. ಗಣಪತಿ ಹಬ್ಬಕ್ಕೆ ಊರಿಗೆ ಹಿಂತುರಿಗಿದಾಗ ಅಲ್ಲಿ ಮೊತ್ತ ಮೊದಲ ಸಾರ್ವಜನಿಕ ಭಾಷಣ ಮಾಡಿಚಿಕ್ಕಪ್ಪನಿಂದ 'ಭೇಷ್' ಎನಿಸಿಕೊಂಡರು.

೧೮೯೭ರಲ್ಲಿ ವಿಕ್ಟೋರಿಯ ರಾಣಿಯ ಸಿಂಹಾಸನಾರೋಹಣದ ಉತ್ಸವ ಆಚರಿಸಬೇಕೆಂದಾಗ ದೇಶಪ್ರೇಮಿ ಯುವಕರಿಗೆ ತಡೆಯಲಾರದ ನೋವು. ಪೂನಾದ ಸರ್ಕಾರಿ ಭವನದಲ್ಲಿ ಮೇಜುವಾನಿ ನಡೆಯುತ್ತಿತ್ತು ಚಾಫೇಕ್‌ರ ಸೋದರರು ಸಮಯ ಸಾಧಿಸಿ ಆಂಗ್ಲ ಅಧಿಕಾರಿಗಳನ್ನು ಗುಂಡಿಟ್ಟು ಕೊಂದರು.

'ಸ್ವಜನರ ಮೇಲಾದ ಅತ್ಯಾಚಾರದ ಸೇಡು ತೀರಿಸಿಕೊಂಡ' ಎಂದರು. ಈ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದ ಸಾವರಕರ್ ಮೈನವಿರೆದ್ದಿತು. ಹಲವಾರು ಬಾರಿ ಓದಿದರು. ಊಟ ಸೇರದೆ, ನಿದ್ರೆಹತ್ತದೆ, ಪತ್ರಿಕೆಯನ್ನು ಕಂಬನಿಯಿಂದ ತೋಯಿಸಿದರು. ಕುಲದೇವಿಯ ಮುಂದೆ ಹೋಗಿ "ದೇವಿ, ನೀನೆ ಸಾಕ್ಷಿ ನನಗೆ ಅನುಮತಿ ನೀಡು ಶಿವಾಜಿಯಂತೆ ವಿಜಯಿಯಾಗಿ ಭಾರತ ಮಾತೆಗೆ ಕಿರೀಟ ಇಡುತ್ತೇನೆ.ಇಲ್ಲವೇ ಚಾಫೇಕರನಂತೆ ಸಾಯುತ್ತೇನೆ. ಎಂದು ಕಣ್ಣೀರಿಟ್ಟರು. ತನ್ನ ಗೆಳೆಯರಿಗೆಲ್ಲ ಶಿವಾಜಿ, ತಾನಾಜಿ, ಬಳವಂತರ ಚರಿತ್ರೆಹೇಳಿ ಹುರಿದುಂಬಿಸಿದರು.

ಈ ಮಧ್ಯೆ ಪ್ಲೇಗಿನ ಹಾವಳಿ ಪ್ರಾರಂಭವಾಯಿತು. ತಂದೆ ಆ ಪ್ಲೇಗಿನಲ್ಲಿ ತೀರಿಕೊಂಡರು.ಇಂಗ್ಲೆಂಡ್ ನೀಡಿದ ಬಳುವಳಿ ಈ ರೋಗ. ಈ ಸಮಯದಲ್ಲಿ ಸಾವರ್‌ಕರ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಮಾಧ್ಯಮಿಕ ಶಾಲೆಯನಂತರ ಯಮುನೆಯೊಡನೆ ಇವರ ವಿವಾಹವಾಯಿತು.

ಶಾಲಾಕಾಲೇಜುಗಳಲ್ಲಿ ಇವರಿಗೆ ಸಿಕ್ಕ ಪ್ರೋತ್ಸಾಹ ಕಡಿಮೆ. ಮುಂದೆ ಫರ್ಗುಸನ್ ಕಾಲೇಜಿನಲ್ಲಿ ಓದುವಾಗಲೂ ವಸತಿ ಗೃಹದಲ್ಲಿ ಶಿವಾಜಿ ಪಟ ತಗುಲಿ ಹಾಕಿದ್ದರು. ಸಹಪಾಠಿಗಳನ್ನು ಸಂಘಟಿಸಿದರು. ಶಿವಾಜಿ ಜನ್ಮೋತ್ಸವ ಆಚರಿಸಿದರು. ಸಿಂಹಗಡ ದರ್ಶನ ಮಾಡಿದರು. ನಿತ್ಯದ ಪಾಠಗಳಲ್ಲಿ ಆಸಕ್ತಿ ಕಡಿಮೆ. ವರ್ತಮಾನ ಪತ್ರಿಕೆ, ಪಠ್ಯೇತರ ಗ್ರಂಥವಾಚನ, ರಾಷ್ಟ್ರೀಯ ವಿಚಾರ ಚರ್ಚೆ ಸಾರ್ವಜನಿಕ ಕಾರ್ಯಕ್ರಮ. ಇದರಲ್ಲಿ ಆಸಕ್ತಿ. ಆದರೂ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ ಅಣ್ಣನಿಂದ ಪ್ರಶಂಸೆ. ಅವರ 'ಮಿತ್ರಮೇಳ' ಶುದ್ಧರಾಜಕಾರಣಕ್ಕಾಗಿ ಶಿವಾಜಿ ಉತ್ಸವವನ್ನು ಆಚರಿಸಿತ್ತು. ರೋಗಿಗಳ ಆರೈಕೆ, ಗಣೇಶೋತ್ಸವ ಎಲ್ಲ ಕ್ಷೇತ್ರದಲ್ಲೂ ಇವರ ಮೇಲುಗೈ ಆಯಿತು. ವಿಕ್ಟೋರಿಯ ರಾಣಿ ಸತ್ತಾಗ ಶೋಕ ಪ್ರಕಟಿಸುವುದನ್ನು ಕೂಡ ಈ ಮಿತ್ರ ಮೇಳ ವಿರೋಧಿಸಿತು. ಮಿತ್ರ ಮೇಳದ ಗುಪ್ತನಾಮ 'ರಾಮಹರಿ', ಎಂದು.

ಪೂನಾದಲ್ಲಿ ಸಾಹಿತ್ಯಕೃಷಿ ಚೆನ್ನಾಗಿ ನಡೆಯಿತು. ಕಾಳ್ ಪತ್ರಿಕೆಯಲ್ಲಿ 'ಜಗತ್ತಿನಲ್ಲಿ ಇದುವರೆಗೆ ಯಾವುದು ಶಾಶ್ವತವಾಗಿದೆ' ಮತ್ತು 'ದುರ್ಲಭಂ ಭಾರತೀ ಜನ್ಮ ಮಾನುಷ್ಯಂ ತತ್ರ ದುರ್ಲಭಂ' ಲೇಖನ ಪ್ರಕಟವಾಯಿತು. ೧೯೦೫ರಲ್ಲಿ 'ಭಂಗ' ಚಳುವಳಿ ಆರಂಭವಾಯಿತು. ತಿಲಕರ 'ವಿದೇಶಿ ಬಹಿಷ್ಕಾರ' ಕೇಳಿ ಬರುತ್ತಿತ್ತು. ಮಹಾನವಮಿಯ ದಿನ 'ವಿದೇಶೀ ವಸ್ತ್ರದ ಹೋಳಿ' ಆಚರಿಸಿತು . ಸಾವರಕರರ ರಾಮಸೇನೆ, ಗಾಡಿಯ ಮೇಲೆ ಬಟ್ಟೆ ಹೇರಿ ಗುಲಾಲ್ ಸುರಿದು, ಬಲಿಹಾಕಿ, ವಾದ್ಯ ಸಮೇತ ಹೊರಟು ಹೋಳಿ ಆಚರಿಸಿದಾಗ ಜನಸಂದಣಿ ಕಿಕ್ಕಿರಿದಿತ್ತು. ಈ ಹೋಳಿ ಸರ್ಕಾರವನ್ನು ರೊಚ್ಚಿಗೆಬ್ಬಿಸಿತು. ಕಾಲೇಜಿನ ಅಧಿಕಾರಿಗಳು ಹತ್ತು ರೂ. ದಂಡ ಹಾಕಿದರು. ವಿದ್ಯಾರ್ಥಿ ಮುಖಂಡನೆಂಬ ಕೀರ್ತಿ ದೇಶಾದ್ಯಂತ ಹರಡಿತ್ತು. ಆದರೆ ಈ ಶಿಕ್ಷೆಯ ವಿರುದ್ಧ ತಿಲಕರೂ ಸೇರಿದಂತೆ ಪ್ರತಿಭಟನೆ ನಡೆಯಿತು. ಅಹಮದನಗರ, ನಾಸಿಕ, ಭಿವಂಡಿ, ಪೂನಾ ಇತ್ಯಾದಿ ಕಡೆಗಳಲ್ಲಿ ಪ್ರವಾಸ, ವ್ಯಾಖ್ಯಾನಗಳು ಏರ್ಪಟ್ಟವು. ಇಷ್ಟಾದರೂ ಉತ್ತಮ ರೀತಿಯಲ್ಲಿ ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರು.

ಪೂನಾದಲ್ಲಿ ಮೊದಲ ವರ್ಷದ ಬಿ.ಎ. ವಿದ್ಯಾರ್ಥಿಗಳು ಎಲ್.ಎಲ್.ಬಿ. ಓದಲು ಅವಕಾಶವಿದ್ದು ಸಾವರಕರ್ ಅಲ್ಲಿಗೂ ಸೇರಿದ್ದರು. ಜೊತೆಗೆ 'ಕ್ರಾಂತಿಸಂಸ್ಥೆ'ಗೆ ಸದಸ್ಯರನ್ನೂ ಸಂಪಾದಿಸಿದರು. ಪೂನಾದಲ್ಲಿನ ಇವರ ಸಂಘಟನೆಗೆ 'ಅಭಿನವ ಭಾರತ್' ಎಂದು ಹೆಸರಿಟ್ಟಿದ್ದರು.

೧೯೦೬ರಲ್ಲಿ ಪೂನಾದಿಂದ ಹಿಂತುರಿಗಿದ ಬಳಿಕ ಇವರಿಗೆ 'ಶಿವಾಜಿ ವಿದ್ಯಾರ್ಥಿ ವೇತನ'

ಾಗಿತು. ಯುರೋಪಿನಲ್ಲಿದ್ದು ರಾಜಕಾರಣ ತತ್ವಜ್ಞಾನ ಮತ್ತು ಆಚರಣೆ ಅಧ್ಯಯನ ಮಾಡುವ ದೇಶಭಕ್ತ ಭಾರತೀಯರಿಗೆ ಅದು ಮೀಸಲಾಗಿತ್ತು. ಸಾವರಕರರ ಇನ್ನರ್ಧ ಖರ್ಚನ್ನು ಭಾಪೂ ಚಿಪಳೂಣಕರ ವಹಿಸಿಕೊಂಡರು. ನಾಸಿಕದಲ್ಲಿ ಪ್ರಚಂಡ ಬೀಳ್ಕೊಡುಗೆ ನಡೆಯಿತು. 'ಅಭಿನವ ಭಾರತ'ದ ಭಾರ ಬಾಬಾನ ಮೇಲೆ ಬಿತ್ತು.

ಇಂಗ್ಲೆಂಡ್‌ನಲ್ಲಿ 'ಭಾರತಭವನ'ದಲ್ಲಿ ತಂಗಿದರು. ಇಟಲಿಯ ಮೆಜಿನಿ ಇವರ ಆದರ್ಶನಾಯಕ. ಮಜೆನಿಯ ಎಲ್ಲ ಪುಸ್ತಕಗಳನ್ನೂ ಓದಿದರು. ಆ ಕಾಲದಲ್ಲಿ ಲಂಡನ್ನಿಗೆ ಬಂದ ಭಾರತೀಯ ತರುಣರು ಇಂಗ್ಲೀಷರನ್ನು ಅನುಕರಣೆ ಮಾಡಿ ಸಾಹೇಬರಾಗಲು ಶ್ರಮಿಸುತ್ತಿದ್ದರು. ಎಳ್ಳಷ್ಟೂ ಸ್ವಾಭಿಮಾನ, ದೇಶಭಕ್ತಿ ಇರಲಿಲ್ಲ. ದಾದಾಬಾಯಿ, ಸುರೇಂದ್ರನಾಥ, ಶ್ಯಾಮಜಿ, ಗಾಂಧಿ ಎಲ್ಲರೂ ಹಾಗೇ ಇದ್ದರು. ಇದೆಲ್ಲವನ್ನೂ ಅವಲೋಕಿಸಿದ ಅವರು ಆ ತರುಣರ ಸಂಪರ್ಕ ಪಡೆದು ಅವರಿಗೆ ಸ್ವಾತಂತ್ರ್ಯ ಕಲ್ಪನೆ, ಕೊನೆಗೆ ಸಶಸ್ತ್ರ ಕ್ರಾಂತಿಯ ಪ್ರೇರಣೆ ಕೊಟ್ಟರು. ವ್ಯಕ್ತಿಗತ ಸಂಭಾಷಣೆ, ಸಾರ್ವಜನಿಕ ಭಾಷಣ, ಗ್ರಂಥರಚನೆ, ಪ್ರಚಾರ ಭಾಷಣ, ಬಾಂಬ್ ಶಸ್ತ್ರಾಸ್ತ್ರಗಳ ಶಿಕ್ಷಣ ಸಂಗ್ರಹ ಪ್ರಾರಂಭಿಸಿದರು. ಮೆಜಿನಿಯ ಪುಸ್ತಕಗಳನ್ನು ಮರಾಠಿಗೆ ಅನುವಾದಿಸಿದರು. ಭಾರತಕ್ಕೆ ಕಳಿಸಿದರು. ತಿಲಕರ ಭವಿಷ್ಯದಂತೆ ಆಂಗ್ಲ ಸರ್ಕಾರ ಅದನ್ನು ವಿರೋಧಿಸಿತು. '೧೮೫೭ರ ಕ್ರಾಂತಿಯ ಸಮಗ್ರ ಇತಿಹಾಸ 'ಬರೆದು 'ಮೊದಲ ಸ್ವಾತಂತ್ರ್ಯ ಸಂಗ್ರಾಮ' ಎಂದು ಹೆಸರಿಟ್ಟರು. ಸ್ವಾತಂತ್ರ್ಯ ಸಂಗ್ರಾಮದ ಐವತ್ತನೇ ವರ್ಷದ ನೆನಪಾಗಿ ಚಿನ್ನದ ಹಬ್ಬದ ಆಚರಣೆ ಮಾಡಿದರು. ಬ್ಯಾರಿಸ್ಟರ್ ರಾಣಾ, ಪಂಡಿತ್ ಶ್ಯಾಮಜಿ ಮೇಡಂ ಕಾಮಾ ಇತ್ಯಾದಿ ದೇಶಭಕ್ತರು ಗೌರವ ಚಿಹ್ನೆ ಧರಿಸಿದರು.

ಧಿಂಗ್ರಾ ವಾಯಲಿಯ ಹತ್ಯೆ ಮಾಡಿದ ನಂತರ ಸಾವರಕರ ಮೇಲೆ ಇಂಗ್ಲೆಂಡ್ ಸರ್ಕಾರ ಉರಿದೆದ್ದಿತು. ನಾಗರಿಕರ ಮುತ್ತಿಗೆ, ಅನಾಗರಿಕರ ಬೊಬ್ಬಾಟ, ಗುಪ್ತಚರರ ಕಾಟ ಹೆಚ್ಚಾಯಿತು. ಪದೇ ಪದೇ ಜಾಗ ಬದಲಾಯಿಸಬೇಕಾಯಿತು. ನಿರಂತರ ಓಡಾಟದಿಂದ ಸಾವರಕರ್‌ಗೆ ಅನಾರೋಗ್ಯ ಉಂಟಾಯಿತು. ಧಿಂಗ್ರಾನನ್ನು ಗಲ್ಲಿಗೇರಿಸಿದ ಅನಂತರವೂ ಚಟುವಟಿಕೆ ಕಡಿಮೆ ಆಗಲಿಲ್ಲ.

ಅತ್ತಿಗೆಯಿಂದ ಕಾಗದ ಬಂದಿತ್ತು ಸಾವರಕರ್ ಮನೆ ಮೇಲೆ ಧಾಳಿ ನಡೆದಿತ್ತು. ತಮ್ಮ ನಾರಾಯಣನನ್ನು ಬಂಧಿಸಿದ್ದರು. ಅಣ್ಣ ಬಾಬಾನಿಗೆ ಕರಿನೀರಿನ ಶಿಕ್ಷೆ ಆಗಿತ್ತು ಅತ್ತಿಗೆಗಾಗಿ ಅವರ ಮನಸ್ಸು ನೊಂದಿತು. ಈವೇಳೆಗೆ ಬಂಗಾಳದಲ್ಲಿ ಅನೇಕ ಕ್ರಾಂತಿ ಸಂಸ್ಥೆಗಳಾಗಿದ್ದವು.

ಲಂಡನ್ನಿನಿಂದ ಬಾಂಬ್ ತಯಾರಿಕೆ ವಿವರಗಳನ್ನು ಭಾರತಕ್ಕೆ ಕಳುಹಿಸುತ್ತಿದ್ದರು. ಮುಂಬೈಬಳಿ ರಹಸ್ಯ ಬಾಂಬ್ ಕಾರ್ಖಾನೆ ಪ್ರಾರಂಭವಾಯಿತು. ಪತ್ರವ್ಯವಹಾರಕ್ಕಾಗಿ ಗುಪ್ತ ಸಂಖ್ಯೆ ಉಪಯೋಗಿಸುತ್ತಿದ್ದರು. ಪ್ಯಾರಿಸ್, ಲಂಡನ್ನಿನಿಂದ ಪಿಸ್ತೂಲುಗಳನ್ನು ಕ್ರಾಂತಿಕಾರಿಗೆ ಕಳಿಸುತ್ತಿದ್ದರು.

ಸಾವರಕರ್ ಮೇಲೆ ಅನೇಕ ಆರೋಪಗಳನ್ನು ಹೊರಿಸಲಾಯಿತು. ೧. ಭಾರತದ ಚಕ್ರವರ್ತಿ ವಿರುದ್ಧ ಯುದ್ಧ ಹೂಡಿಕೆ ಅಥವಾ ಸಹಾಯ ೨. ಭಾರತ ಅಥವಾ ಅದರ ಒಂದು ಭಾಗದಲ್ಲಿ ಚಕ್ರವರ್ತಿ ವಿರುದ್ಧ ಸಂಚು ೩. ಶಸ್ತ್ರಾಸ್ತ್ರಗಳ ಶೇಖರಣೆ, ವಿತರಣೆ, ಜಾಕ್ಸನ್ ವಧೆಗೆ ನೆರವು ೪. ಲಂಡನ್ನಿನಲ್ಲಿ ಶಸ್ತ್ರಾಸ್ತ್ರ ಶೇಖರಣೆ ೫. ಭಾರತ ಮತ್ತು ಲಂಡನ್ನಿನಲ್ಲಿ ರಾಜದ್ರೋಹ. ಈ ಆರೋಪಗಳನ್ನು ಹೊರಿಸಿ

ಬಂಧಿಸಲಾಯಿತು. ತೀರ್ಪಿನ ಪ್ರಕಾರ ಅವರನ್ನು ಭಾರತಕ್ಕೆ ವಹಿಸಲಾಯಿತು. ಭಾರತದಲ್ಲಿ ವಿಶೇಷ ನ್ಯಾಯಾಲಯ ಏರ್ಪಾಟಾಗಿತ್ತು. ಇದೆಲ್ಲರ ಮಧ್ಯೆ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದರು. ಅವರು ಇಂಗ್ಲೆಂಡಿನಲ್ಲಿ ಅದರ ವಿಚಾರಣೆ ಆಗ ಬೇಕೆಂದರು. ಸರ್ಕಾರ ಒಪ್ಪಲಿಲ್ಲ.

ಮೋರಿಯಾ ಹಡಗಿನಲ್ಲಿ ಸೆರೆಯಾಳಾಗಿ ಹೋಗುತ್ತಿದ್ದಾಗ ಮೈಗೆ ಸರ್ಪಕಾವಲು. ಕಣ್ಣಿಗೆ ಮನಸ್ಸಿಗೆ ಏನೂ ಇರಲಿಲ್ಲ. ಕಣ್ಣು ಹಾಯಿಸಿದರು. ಗವಾಕ್ಷ ನೋಡಿದಾಗ ಆಸೆ ಚಿಗುರಿತು. ಶೌಚ ಸಾಧ್ಯವೇ ಎಂದಿತು. ರಾತ್ರಿ ನಿದ್ದೆ ಬರಲಿಲ್ಲ. ಅವರಿಗೆ ಹುಚ್ಚು ಹಿಡಿದಂತಾಗಿತ್ತು ಶಿವಾಜಿಯನ್ನು ನೆನಸಿಕೊಂಡರು. ಕೃಷ್ಣನನ್ನು ಜ್ಞಾಪಿಸಿಕೊಂಡರು. ಶೌಚಕ್ಕೆ ಹೋಗ ಬೇಕೆಂದರು. ಕಾವಲುಗಾರನೊಡನೆ ಶೌಚಾಲಯದ ಬಳಿಗೆ ಹೋದರು. ಗವಾಕ್ಷದೊಳಗೆ ತಲೆ ತೂರಿಸಿ ಶರೀರ ತೂರಿಸಿದಾಗ ಚರ್ಮ ಕಿತ್ತು ರಕ್ತ ಬಂತು. ಸಮುದ್ರದ ಉಪ್ಪು ನೀರಿಗೆ ದೊಪ್ಪನೆ ಶರೀರ ಬಿತ್ತು. ಉಪ್ಪು ನೀರಿಗೆ ಶರೀರ ಉರಿಯ ತೊಡಗಿತು.

ಕಾವಲುಗಾರರಿಗೆ ಸಂದೇಹ ಬಂತು. ದೋಣಿಯಲ್ಲಿ ಹಿಂಬಾಲಿಸಿದರು. ಸಾವರಕರ್ ಫ್ರಾನ್ಸ್ ದಡ ಮುಟ್ಟಿದರು. ಅಲ್ಲಿಯ ಪೊಲೀಸ್‌ನವನಿಗೆ ಹರಕು ಮುರುಕ ಫ್ರೆಂಚ್‌ನಲ್ಲಿ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗು, ಎಂದರು. ಅಷ್ಟರಲ್ಲಿ ಕಾವಲು ಗಾರರು ಅವನ ಕೈಬೆಚ್ಚಗೆ ಮಾಡಿ ಎಳೆದು ಕೊಂಡು ಹಡಗಿಗೆ ಹಾಕಿದರು. ರಾತ್ರಿಯೆಲ್ಲ ಕಾವಲುಗಾರರ ಕಾಟ ಸಹಿಸಲಸಾಧ್ಯ ವಾಗಿತ್ತು. ''ಫ್ರಾನ್ಸ್‌ನ ನೆಲದಲ್ಲಿ ನನ್ನನ್ನು ಹಿಡಿವ ಅಧಿಕಾರ ಇಲ್ಲ'' ಎಂದು ಗರ್ಜಿಸಿದರು. ಆದರೂ ಕೇಳಲಿಲ್ಲ.

ಯರವಾಡ ಜೈಲಿಗೆ ಸಾಗಿಸಿದರು. ತೀರ್ಪು ಹೊರಬಿತ್ತು. ಆಜನ್ಮ ಕರಿನೀರಿನ ಶಿಕ್ಷೆ ಮತ್ತು ಆಸ್ತಿಪಾಸ್ತಿಗಳ ಜಪ್ತಿ. ಇವರ ಜೊತೆ ಇನ್ನೂ ಅನೇಕರಿಗೆ ಕಠಿಣ ಶಿಕ್ಷೆ ವಿಧಿಸಲಾಯಿತು. ಎಲ್ಲರೂ ನಗುಮುಖದಿಂದ ಸ್ವೀಕರಿಸಿದರು. ನ್ಯಾಯವನ್ನು ಬದಿಗಿಟ್ಟ ನ್ಯಾಯಾಧೀಶ ದೇಶಭಕ್ತ ತರುಣ ಸೊಲ್ಲು ಅಡಗಿಸಿದ್ದೇನೆಂದು ತಿಳಿದ. ಆದಾದನಂತರ ಜಾಕ್ಸನ್ ಕೊಲೆ ಮೊಕದ್ದಮೆಗೆ ಮತ್ತೊಂದು ಕರಿನೀರಿನ ಶಿಕ್ಷೆ ವಿಧಿಸಲಾಯಿತು. ''ಓಹೋ, ಆಂಗ್ಲರಿಗೆ ಪುನರ್ಜನ್ಮದಲ್ಲಿ ವಿಶ್ವಾಸ ಇದೆ'' ಎಂದರು ಸಾವರಕರ್. ಸಾವರಕರರ ಧೈರ್ಯಕ್ಕೆ ಇದು ಸಾಕ್ಷಿ ಅಂಡಮಾನನಲ್ಲಿ ಕ್ರೂರ ಶಿಕ್ಷೆಗೆ ಒಳಗಾದರು ಗಾಣ ತಿರುಗಿಸುವುದು. ನಿಂತರೆ ಚೆತ್ತದೇಟು. ಹಗ್ಗ ಹೊಸೆಯುವುದು. ಆಗ ತೊಡೆಯ ಚರ್ಮ ಕಿತ್ತು ಬರುತಿತ್ತು. ಇದರ ಜೊತೆಗೆ ಮುಸ್ಲಿಂ ಅಧಿಕಾರಿಗಳು ಹಿಂದೂ ಕೈದಿಗಳಿಗೆ ತುಂಬ ತೊಂದರೆ ಕೊಡುತ್ತಿದ್ದರು. ಸಾವರಕರ್ ತಮ್ಮ ಪ್ರಯತ್ನದಿಂದ ಅದನ್ನು ತಡೆದರು. ಅಲ್ಲಿ ಅವರ ಅಣ್ಣನ ದರ್ಶನ ವಾಯಿತು, ಅವರಿಗೂ ಕರಿನೀರಿನ ಶಿಕ್ಷೆ.

ಅಧಿಕಾರಿಗಳು ಮುಸಲ್ಮಾನ ಕೈದಿಗಳಿಗೆ ವಿಶೇಷ ಸೌಲಭ್ಯಗಳನ್ನು ಕೊಟ್ಟಿದ್ದರು. ಅವರು ನಮಾಜ ಮಾಡಬಹುದು. ಹಿಂದೂ ಕೈದಿಗಳಿಗೆ ಸ್ತೋತ್ರ ಹೇಳಲು ಅವಕಾಶವಿರಲಿಲ್ಲ. ಸಾವರಕರ್ ಸತ್ಯಾಗ್ರಹ ಹೂಡಿ ಸಮಾನ ಅವಕಾಶ ದೊರಕಿಸಿ ಕೊಂಡರು. ಗೋಡೆಗಳ ಮೇಲೆ ಮೊಳೆಗಳಿಂದ ಕವನಗಳನ್ನು ರಚಿಸಿ ಅದನ್ನು ಬಾಯಿ ಪಾಠ ಮಾಡಿಕೊಳ್ಳುತ್ತಿದ್ದರು. ಆಗ ಅವರಿಗೆ ೨೭ ವರ್ಷ ಎಂಟು ತಿಂಗಳು

ಮೂರುದಿನ. ಕಮಲಾ, ಮಹಾಸಾಗರ, ಕವನಗಳು ಅಲ್ಲಿ ಸೃಷ್ಟಿಯಾದವು.

ಮೂರ್ಸೆಲ್ ಘಟನೆ ನಡೆದ ಮೇಲೆ ಪ॥ಶ್ಯಾಮಜಿ, ರಾಣಾ ಮತ್ತು ಶ್ರೀಮಂತಿ ಕಾಮಾಅವರ ಬಿಡುಗಡೆಗೆ ಬಹಳ ಪ್ರಯತ್ನ ನಡೆಸಿದರು. ಸಾವರಕರರನ್ನು ಫ್ರಾನ್ಸಿಗೆ ಒಪ್ಪಿಸಬೇಕೆಂದರು. ಅಥವಾ ಹೇಗ್‌ನ ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದರು. ಆದರೆ ಅದನ್ನು ಹೇಗ್ ನ್ಯಾಯಾಲಯ ಒಪ್ಪಲಿಲ್ಲ.

ಅವನ ತಮ್ಮ ಬಾಳಾನನ್ನು ಕೂಡಾ ಆ ಜೈಲಿನಲ್ಲಿಟ್ಟದು ತಿಳಿದು ಬಂತು. ಇಪ್ಪತ್ತು ತುಂಬದ ಅವನ ಬಾಯಿ ಬಿಡಿಸಲು ಚಿತ್ರಹಿಂಸೆಗೆ ಗುರಿಮಾಡಲಾಗಿತ್ತು. ವಾರ್ಡರ್‌ಗಳ ಅವಹೇಳನೆಗೆ ಗುರಿಯಾಗಬೇಕಾಗುತ್ತಿತ್ತು. ಅವರ ಕನ್ನಡಕ, ಭಗವದ್ಗೀತೆ ಕೈಚೀಲಗಳನ್ನು ಹರಾಜು ಹಾಕಿ ಹಣವನ್ನು ಸರ್ಕಾರಕ್ಕೆ ಸೇರಿಸಬೇಕೆಂದು ಆಜ್ಞೆ ಆಗಿತ್ತು. ಆ ಮೇಲೆ ಅವು ವಾಪಸ್ಸು ಬಂದವು.

೧೯೧೫ರ ತರುವಾಯ ಅವರ ಆರೋಗ್ಯ ಕೆಟ್ಟಿತು. ಜ್ವರ, ರಕ್ತ ಭೇದಿ ಎಂಟುವರ್ಷಗಳ ನಂತರ ಯಮುನಾ ಅವರನ್ನು ನೋಡಲು ಬಂದಾಗ ಅತ್ತಿಗೆ ಸಾವಿನ ಸುದ್ದಿ ತಿಳಿಸಿದರು.

ಅಂಡಮಾನ್‌ಗೆ ಬರುವ ಸರ್ಕಾರಿ ಪತ್ರ ರಹಸ್ಯವಾಗಿ ಇವರ ಕೈಸೇರುತ್ತಿತ್ತು. ಜೈಲಿನಲ್ಲಿ ದೀಪಾವಳಿಯನ್ನೂ ಆಚರಿಸುತ್ತಿದ್ದರು. ಬಾಬಾ ಮತ್ತು ಸಾವರಕರ್ ತೀರ ಕೃಶರಾದಾಗ ಒಮ್ಮೆ ನಾವಿಬ್ಬರೂ ಹೆಚ್ಚು ದಿನ ಬದುಕುವ ಸಂಭವ ಇಲ್ಲ, ಎಂದು ಹೇಳಿಕೊಂಡರು. ಒಂದು ಸಂಜೆ ಇದ್ದಕ್ಕಿದ್ದಂತೆ ಸಾವರಕರ್ ಸೋದರರ ಬಿಡುಗಡೆ ಆಜ್ಞೆ ಬಂತು. ಕೈದಿಗಳು ಹಾರ ಹಾಕಿ ಬೀಳ್ಕೊಟ್ಟರು. ಬಾಬಾ ನಿಶ್ಯಕ್ತರಾಗಿದ್ದರು.

ಮಹಾರಾಜ ಹಡಗಿನಲ್ಲಿ ಹೊರಟು ಕಲ್ಕತ್ತಾ ತಲಪಿದಾಗ, 'ಸ್ವಾತಂತ್ರ್ಯ ಲಕ್ಷ್ಮಿಗೆ ಜೈ' ಎಂದು ಕೂಗಿದರು. ಆಲಿಪುರ ಜೈಲಿನಲ್ಲಿ ಬೇರೆ ಬೇರೆ ಕೊಠಡಿಗಳಲ್ಲಿ ಇವರಿಬ್ಬರನ್ನೂ ಇಟ್ಟರು. ಅಲ್ಲಿಂದ ರತ್ನಾಗಿರಿ ಜೈಲಿಗೆ. ಇಲ್ಲಿ ಓದು ಬರಹ ನಿಷೇದ . ಹತ್ತಿನೂಲುವ ಕೆಲಸ. ಕೆಳದರ್ಜೆ ನೌಕರರಿಂದ ಮುಖಭಂಗ. ಭರ್ತ್ಸನೆ. ತೀರಬೇಸರವಾಗಿ ಆತ್ಮಹತ್ಯೆಯನ್ನೂ ಯೋಚಿಸಿದರು. ಕಸದ ಬುಟ್ಟಿಯ ಮೂಲಕ ಪತ್ರ ಸಿಗುತ್ತಿತ್ತು. ಇಲ್ಲೂ ಕೂಡ ಮುಸ್ಲಿಂರಿಂದ ನಡೆಯುತ್ತಿದ್ದ ಮತಾಂತರ ತಡೆಗಟ್ಟಿದರು. ಅನಕ್ಷರಸ್ಥ ಕೈದಿಗಳಿಗೆ ಶಿಕ್ಷಣ ನೀಡಿದರು. ಶುದ್ಧಿ ಚಳುವಳಿ ನಡೆಸಿ ಕ್ರಿಶ್ಚಿಯನ್ನರನ್ನು ಹಿಂದೂ ಧರ್ಮಕ್ಕೆ ಹಿಂದಿರಿಗಿಸಿದರು. ಪುನಃ ಯರವಾಡ ಜೈಲಿಗೆ ವರ್ಗಾವಣೆ. ಅಲ್ಲಿ ಅಂಡಮಾನಿನ ಮಿತ್ರರು ಭೇಟಿಯಾದರು.

ಒಂದು ದಿನ ಅವರ ಬಿಡುಗಡೆ ಆಯಿತು. ನಾಗರೀಕ ವೇಷ ಕಟ್ಟಿ ಕಾರಾಗೃಹಕ್ಕೆ ನಮಸ್ಕಾರ ಹಾಕಿ ಹೊರಟರು. ಮುಂಬೈನಲ್ಲಿ ಬಾಳಾನ ಮನೆಯಲ್ಲಿ ನೋಡಲು ಜನ ತಂಡೋಪತಂಡವಾಗಿ ಬರತೊಡಗಿದರು. ರತ್ನಾಗಿರಿಯಲ್ಲಿ ಮನೆ ಬಾಡಿಗೆಗೆ ಕೊಡಲು ಯಾರಿಗೂ ಧೈರ್ಯವಿರಲಿಲ್ಲ. ಪುನಃ ಸಂಘಟನೆ ಕಾರ್ಯ ಶುರು. ಮಹಿಳೆಯರಲ್ಲಿ ಅಸ್ಪೃಶ್ಯತಾ ನಿವಾರಣೆ ಯಮುನಾಪತ್ನಿಯಿಂದಲೇ ಪ್ರಾರಂಭಿಸಿದರು. ಸಾರ್ವಜನಿಕ ಶಾಲೆಯಲ್ಲಿ ಅಸ್ಪೃಶ್ಯತಾ ನಿವಾರಣೆ ಪ್ರಾರಂಭವಾಯಿತು. ೧೯೨೯ ರತ್ನಾಗಿರಿಯ ವಿಠೋಬ ಮಂದಿರಕ್ಕೆ ಅಸ್ಪೃಶ್ಯರ ಪ್ರವೇಶ ವಾಯಿತು. ಸಹಭೋಜನ ನಡೆಸಿದರು. ಗಾಂಧೀಜಿ ಇಲ್ಲಿ ಸಾವರಕರರನ್ನು ಭೇಟಿ ಮಾಡಿ ನಮ್ಮ ಗುರಿ ಒಂದೇ ಎಂದರು. ರತ್ನಾಗಿರಿಗೆ ಬಂದನಂತರ ಪ್ರಭಾ ಮತ್ತು ವಿಶ್ವಾಸರು ಹುಟ್ಟಿದರು.

ಸಾವರಕರ್ ಕಾಂಗ್ರೆಸ್‌ಗೆ ಸೇರುತ್ತಾರೆಂದು ಕೆಲವರು ತಿಳಿದಿದ್ದರು. ಆದರೆ ಇವರು ೧೯೩೭ ನಲ್ಲಿ ಹಿಂದೂ ಮಹಾಸಭೆಯ ಅಧ್ಯಕ್ಷರಾದರು. ನಾಸಿಕದ 'ಜಾಕ್ಸನ್ ಗಾರ್ಡನ್' ಕಾನ್ಹೇರಿ ಉದ್ಯಾನ್‌ವನ್ನಾಗಿ ಬದಲಿಸಿದರು. ಯುರೋಪಿನಲ್ಲಿದ್ದಾಗ ರಚಿಸಿದ ತ್ರಿವರ್ಣ ಧ್ವಜವನ್ನು ಪೂನಾದಲ್ಲಿ ಹಾರಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘವೊಂದೇ ಆಶಾಕೇಂದ್ರವಾಗಿತ್ತು. ಆಗಿನ ಕಾಲದಲ್ಲಿ ಕಾಂಗ್ರೆಸ್ ಸೇರದೆ ದೇಶಸೇವೆ ಸಾಧ್ಯವಿಲ್ಲ ಎಂಬ ಮಾತು ಪ್ರಚಾರದಲ್ಲಿತ್ತು. ಕುರ್ಚಿಯ ರಾಜಕಾರಣಿಗಳು ಮಹಾ ಪುರುಷರಾಗಿದ್ದರು. ಮುಸ್ಲಿಮರ ಹಿತಚಿಂತನೆ ಹಾಗೂ ಸೇವೆ ಧಾರ್ಮಿಕ ಕರ್ತವ್ಯ ಎನಿಸಿತು. ಹಿಂದೂಗಳಿಗೆ ಒಂದು ಮತ್ತು ಒಬ್ಬ ಮುಸ್ಲಿಂಗೆ ಮೂರು ಮತ. ಸ್ವಾತಂತ್ರ್ಯ ಹೋರಾಟದಲ್ಲಿ ಸಹಕರಿಸದೆ ಹೆಜ್ಜೆ ಹೆಜ್ಜೆಗೂ ಹಿಂದೂಗಳನ್ನು ಪೀಡಿಸುತ್ತಾ ಬ್ರಿಟಿಷ್ ಸರ್ಕಾರದೊಂದಿಗೆ ಒಳಸಂಚು ಹೂಡುತ್ತಾ ವಿಶೇಷ ಹಕ್ಕು ಬಾಧ್ಯತೆಗೆ ಒತ್ತಾಯಿಸುತ್ತಿದ್ದ ಮುಸ್ಲಿಮ ನಾಯಕರಿಗೆ ಉತ್ತರಿಸುವುದು ಅವರ ಕರ್ತವ್ಯವಾಗಿತ್ತು. ''ಅಖಂಡ ಭಾರತ ಜಿಂದಾಬಾದ್'' ಬದುಲು 'ಅಖಂಡ ಭಾರತ್ ಅಮರ ರಹೇ' ಎಂದು ಘೋಷಿಸುತ್ತಿದ್ದರು.

೧೯೪೩ರಲ್ಲಿ ಷಷ್ಟ್ಯಬ್ದಿ ಪೂರ್ತಿ ದಿನಾಚರಣೆ ಆಚರಿಸಿದರು. ೧೯೪೭ರ ಆಗಸ್ಟ್ ೧೫ರಂದು ಸಾವರಕರ್ ಸದನದ ಮೇಲೆ ಭಗವಾಧ್ವಜದ ಜೊತೆ ತ್ರಿವರ್ಣ ಧ್ವಜವೂ ಹಾರಾಡಿತು. ಪಾಕಿಸ್ತಾನದ ಬೇಡಿಕೆಯನ್ನು ಖಂಡಿಸಿದರು. ಕಾಂಗ್ರೆಸ್ಸಿಗರ ತಪ್ಪು ನೀತಿಗಳನ್ನು ಖಂಡಿಸಿ ಅವರ ಕೋಪಕ್ಕೆ ಪಾತ್ರರಾದರು. ಅಹಮದ್-ಮಹಮದ್ ಕೋಪಿಸುತ್ತಾರೆಂದು ಸಿಂಧುವನ್ನೇ ಮರೆಯಲು ಅವರಿಂದ ಸಾಧ್ಯವಾಗಲಿಲ್ಲ. ೧೯೪೭ರಲ್ಲಿ ಸ್ವತಂತ್ರವಾದ ಪಾಕಿಸ್ತಾನದಿಂದ ಅಟ್ಟಿಸಲ್ಪಟ್ಟ ಜನರನ್ನು ನೋಡಿ ಅವರ ಮನ ನೊಂದಿತು. ೧೯೪೫ರ ಮಾರ್ಚ್‌ನಲ್ಲಿ ಬಾಬಾ ತೀರಿಕೊಂಡರು. ೧೯೪೮ರಲ್ಲಿ ಒಂದು ಗುಂಪು ಬಾಳಾನ ಮನೆಯನ್ನು ಸುತ್ತುಗಟ್ಟಿ ಕಿಟಕಿಗಾಜುಗಳನ್ನು ಒಡೆಯಿತು. ಬಾಳಾನನ್ನು ನೆಲಕ್ಕೆ ಕೆಡವಿದರು. ರಕ್ತದ ಮಡುವಿನಲ್ಲಿ ಬಿದ್ದ ಹಿಂದಿನ ದಿನ ಮಹಾತ್ಮಾ ಗಾಂಧಿಯವರ ಹತ್ಯೆಯಾಗಿತ್ತು. ಆ ನಾಥೂರಾಂ ಗೋಡ್ಸೆ ಹಿಂದೂ ಮಹಾಸಭೆ ಸದಸ್ಯನಾಗಿದ್ದ. ಆದ್ದರಿಂದ ಮಹಾರಾಷ್ಟ್ರದ ಬ್ರಾಹ್ಮಣರಿಗೆಲ್ಲ ಆ ಶಿಕ್ಷೆ. ಗಾಂಧಿ ಹತ್ಯೆ 'ಸದವಕಾಶ' ಬಳಸಿಕೊಂಡು ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗರಲ್ಲದವರನ್ನು ತುಳಿದು ಹಾಕಲು ಹೊರಟಿತ್ತು. ವಿದ್ಯಾರ್ಥಿ ದೆಸೆಯಲ್ಲಿ ಬಾರಿಬಾರಿ ಸೆರೆಮನೆವಾಸ, ಚಿತ್ರಹಿಂಸೆ. ಅನುಭವಿಸಿದನೋ ಅಂಥವನನ್ನು ಹುಚ್ಚುನಾಯಿಯನ್ನು ಹೊಡೆಯುವಂತೆ ಹೊಡೆದರು. ಒಂದು ವರ್ಷದ ಅನಂತರ ಅವನು ತೀರಿಕೊಂಡ. ಸಾವರಕರ್ ಮನೆ ರಘುಡಿತೆಗೆ ಬಂದಾಗ ಮಗಳು ಪ್ರಭಾತ್‌ಳಿಗೆ ಬಂದಿದ್ದಳು. ಮನೆ ಮೇಲೆ ಕಲ್ಲು ತೂರಿದರು. ಗೋಖಲೆಯವರಿಗೆ ಅವಳ ರಕ್ಷಣೆಭಾರ ವಹಿಸಿದರು.

ಸಾವರಕರ್‌ಗೆ ಸ್ವತಂತ್ರ ಭಾರತದಲ್ಲಿ ಬ್ರಿಟಿಷರಿಗಿಂತಲೂ ಕ್ರೂರ ಶಿಕ್ಷೆ ದೊರೆತಿತ್ತು. ಆರೋಗ್ಯ ಇಲ್ಲದವರನ್ನು ಗಾಂಧಿಹತ್ಯೆಯ ಆರೋಪದ ಮೇಲೆ ಬಂಧಿಸಿ ಅನಂತರ ನಿರಪರಾಧಿ ಎಂದು ತೀರ್ಪಿತ್ತರು. ೧೯೫೭ರ ಸ್ವಾತಂತ್ರ್ಯ ಸಂಗ್ರಾಮದ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು. ೧೯೬೦ನ್ನು ''ಮೃತ್ಯುಂಜಯ ದಿನ''ವನ್ನಾಗಿ ಆಚರಿಸಿದ್ದರು. ಏಕೆಂದರೆ ಅವರನ್ನು ಅವಧಿ ಮುಂಚೆ ಬಿಡುಗಡೆ ಮಾಡದಿದ್ದರೆ ಇನ್ನೂ ಅವರು ಅಲ್ಲಿ ಕೊಳೆಯಬೇಕಾಗಿತ್ತು. ಮೃತ್ಯುವನ್ನು ಜಯಿಸಿದ್ದರು.

ಬ್ರಿಟಿಷರು ಸಾವರಕರ್ ಆಸ್ತಿ ಹಿಂದಿಗಿಸಿ

ದ್ದರು. ಆದರೆ ಮೊರಾರ್ಜಿಯವರು "ಅದರ ಯೋಚನೆ ಸರ್ಕಾರಕ್ಕಿಲ್ಲ" ಎಂದರು. ಪಾಕಿಸ್ತಾನದ ಪ್ರಧಾನಿ ಜೊತೆ ಮಾತುಕತೆ ಸಂದರ್ಭದಲ್ಲಿ ಮುಂಜಾಗ್ರತೆ ರೂಪದಲ್ಲಿ ಇವರನ್ನು ಬಂಧಿಸಿದ್ದರು. ಬಿಡುಗಡೆ ಆದ ಮೇಲೂ ರಾಜಕೀಯದಲ್ಲಿ ಭಾಗವಹಿಸದಂತೆ ತಡೆ ದಿದ್ದರು. 'ಅಂದು ಸಾವರಕರ ಸದನ'ದ ಮೇಲೆ ಬಾವುಟ ಹಾರಿಸಲು ಮಾತ್ರ ಅನುಮತಿ ನೀಡಿತ್ತು ಭಾಷಣ ಮಾಡಲು ಅನುಮತಿ ಇರಲಿಲ್ಲ.

ಸಾವರಕರ್‌ಗೆ ಅಧಿಕಾರದ ಆಸೆ ಇರಲಿಲ್ಲ. ಶತಮಾನೋತ್ಸವದ ಭಾಷಣದಲ್ಲಿ "ಕೆಲವರು ತಾವೇ ಸ್ವಾತಂತ್ರ್ಯವನ್ನು ತಂದು ಕೊಟ್ಟದ್ದಾಗಿ ಹೇಳುತ್ತಾರೆ. ಅಷ್ಟು ಸುಳ್ಳು ಹೇಳಬಾರದು. ಅದರಲ್ಲಿ ನಿರ್ಣಾಯಕ ಪಾತ್ರ ಯಾರು ವಹಿಸಿದ್ದರು ಎಂಬುದನ್ನು ಆ ತಾಯಿಯನ್ನು ಕೇಳಿ "ಎಂದು ವೇದಿಕೆ ಮೇಲೆ ಕುಳಿತಿದ್ದ ಭಗತ್‌ಸಿಂಗರ ತಾಯಿ ಕಡೆ ಕೈಮಾಡಿ ತೋರಿಸಿದರು. ಈ ಸಭೆಗೆ ನೆಹರೂರವರನ್ನು ಆಮಂತ್ರಿಸಿದ್ದರೂ ಅವರು ಬರಲಿಲ್ಲ. "ಸಾವರಕರ್ ಅಮೃತ ಮಹೋತ್ಸವ ಸಮಿತಿ" ಅನೇಕ ಕಡೆ ಸಮಾರಂಭ ಮಾಡಿತು. ಪೂನಾ ವಿಶ್ವವಿದ್ಯಾಲಯ ಇವರಿಗೆ ಗೌನು ಹೋದಿಸಿ ಪ್ರಶಸ್ತಿ ನೀಡಿದಾಗ ಸ್ವೀಕರಿಸುತ್ತಾ "ಶಾಲು ಹೊದಿಸಬಾರದೇಕೆ" ಎಂದು ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿದರು.

ಶಾಲಾ ಕಾಲೇಜುಗಳಲ್ಲಿ 'ಸೈನಿಕ ಶಿಕ್ಷಣ'ದ ಇವರ ಸಲಹೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿತು. ಅವರ ಹಿತೈಷಿಗಳು 'ಭಾರತರತ್ನ' ಕೊಡಲಿ ಎಂದಾಗ "ನನಗೆ ಅದು ಬೇಕಿಲ್ಲ.' 'ಸಿಂಹವನ್ನು ಸಿಂಹ ಎಂದು ವರ್ಣಿಸಬೇಕಿಲ್ಲ'. ಎಂದರು. ಧೀರ ಸಾವರಕರ್. ಜ||ಕಾರ್ಯಪ್ಪ ನವರು ಇವರ ಸಲಹೆಯನ್ನು ಅನುಮೋದಿಸಿದ್ದರು.

ನೆಹರೂರವರ 'ಪಂಚಶೀಲ' ತತ್ವವನ್ನು ವಿರೋಧಿಸಿದರು. ಮದ್ದು ಗುಂಡು, ಯುದ್ಧ ತಯಾರಿ ಇಲ್ಲದ ಭಾರತದ ಸೈನಿಕರು ಚೀನಾ ಯುದ್ಧದಲ್ಲಿ ಯಜ್ಞ ಪಶುವಾದಾಗ ಅದನ್ನು ನೋಡಲಾರದೆ "ಡಾಕ್ಟರ್, ದಯವಿಟ್ಟು ನನ್ನ ಜೀವ ಕೊನೆಗಾಣಿಸಿ. ನನಗೆ ಜೀವಿಸಲು ಇಚ್ಛೆ ಇಲ್ಲ " ಎಂದು ಜೋರಾಗಿ ಅತ್ತರು. ಲಾಲ್ ಬಹದ್ದೂರರ ಮರಣದ ಬಗ್ಗೆ ಇವರಿಗೆ ಸಂಶಯವಿತ್ತು.

ಪೂನಾ ವಿಶ್ವವಿದ್ಯಾಲಯ "ವೀರ ಸಾವರಕರ್ ಅಧ್ಯಯನ ಪೀಠ "ಸ್ಥಾಪಿಸಿತು. ಆವೇಳೆಯಲ್ಲಿ ಯಮುನಾ ತೀರಿಕೊಂಡು, ಆಕೆ ೪೦ ವರ್ಷನೆಮ್ಮದಿ ಜೀವನ ನಡೆಸಿ ಮಕ್ಕಳು ಮೊಮ್ಮಕ್ಕಳು ಕಂಡಳು.

ಸಾವರಕರರ ಜೀವನವೇ ಒಂದು ಸಂದೇಶ. ಚಿಕ್ಕಂದಿನಿಂದಲೂ ನಾಯಕತ್ವವಹಿಸಿ ಗುಂಪು ಕಟ್ಟುತ್ತಿದ್ದರು. ಅವರು ಸ್ವದೇಶಪ್ರೇಮಿ, ಕ್ರಾಂತಿ ಕಾರಿ, ಖಂಡಿತವಾದಿ, ಬ್ರಿಟಿಷರಿಗೂ ಮುಖ ಮುರಿ ದಂತೆ ಉತ್ತರಕೊಡುತ್ತಿದ್ದರು. ಅವರಲ್ಲಿ ವೀರರಕ್ತ ಹರಿಯುತ್ತಿತ್ತು. ಅಂಜುಪುರಕರಲ್ಲ. ಕಷ್ಟಸಹಿಷ್ಣು ಭಾರತೀಯರು ಯೋಧ ರಾಗಬೇಕು. ಹೇಡಿಗಳಂತೆ ಕೂರುವುದಲ್ಲ ಎಂದರು. ಸೋದರರಿಬ್ಬರು ಪರಸ್ಪರ ರಕ್ತ ತಿಲಕ ಹಚ್ಚಿಕೊಂಡು ಸಂಗ್ರಾಮಕ್ಕೆ ಇಳಿದವರು. ಅಖಂಡ ಭಾರತ ಅವರ ಕನಸು. ೧೯೬೫ ಪಾಕಿಸ್ತಾನದೊಂದಿಗೆ ಯುದ್ಧವಾದಾಗ ಈಗಲಾದರೂ ಸಿಂಧು ಮುಕ್ತವಾಗುವುದೆಂದು ಭಾವಿಸಿದರು. ಆರೋಗ್ಯ ಸುಧಾರಿಸ ತೊಡಗಿತು. ಆದರೆ ಯುದ್ಧ ನಿಂತಾಗ ನಿರಾಶರಾದರು. ಪಾಕಿಸ್ತಾನದ ವಿಭಜನೆಯನ್ನು ವಿರೋಧಿಸಿದ್ದರು. ಕಾಂಗ್ರೆಸ್ಸಿಗರ ಸ್ವಾರ್ಥವನ್ನು ಖಂಡಿಸಿದರು. ಯಂಗ್ ಇಟಲಿಯಂತೆ ಕ್ರಾಂತಿಯಿಂದ ಸ್ವಾತಂತ್ರ್ಯ ಸಿಗುವುದೆಂದು ಹೇಳುತ್ತಿದ್ದರು. ನುಡಿದಂತೆ ನಡೆದರು. ನಾಲ್ಕುಕೋಟಿ ಮುಸಲ್ಮಾನರು ಭಾರತದಲ್ಲಿ ಉಳಿಯುವುದು

ಸಾಮಾನ್ಯದ ವಿಷಯವಲ್ಲ ಎಂದರು. ''ಪಾಕಿಸ್ತಾನ ಬರಬಹುದು. ಹೋಗಬಹುದು. ಹಿಂದುಸ್ತಾನ ಎಂದೆಂದೂ ಇರುವುದು'' ಎಂದು ಜಿನ್ನಾಗೆ ಮುಖ ಮುರಿದಂತೆ ಉತ್ತರಿಸಿದ್ದರು. ಅವರದು ವೈಜ್ಞಾನಿಕ ದೃಷ್ಟಿ. ತಮ್ಮ ಅಂತ್ಯಕ್ರಿಯೆ ವಿದ್ಯುತ್ ಚಿತೆಯಲ್ಲಿ ಆಗಬೇಕೆಂದಿದ್ದರು. ಅರಬ್ಬಿಸಮುದ್ರ ಸಿಂಧು ಸಾಗರ ಅಹಮದಾಬಾದ್‌ಗೆ 'ಕರ್ಣಾವತಿ' ಎಂದು ಇಡುವಂತೆ ಸಲಹೆ ಮಾಡಿದ್ದರು.

ಅವರ 'ಹಿಂದುತ್ವ' ಇತಿಹಾಸದ ಸುವರ್ಣ ಸಂಪುಟಗಳ'' ಮಹತ್ವವಾದದ್ದು. ಸಾಹಿತ್ಯದಲ್ಲೂ ಅನೇಕ ಶಬ್ದಗಳನ್ನು ಸೃಷ್ಟಿಸಿ ಕ್ರಾಂತಿ ತಂದರು. ಹರತಾಳದಿಂದ ರಾಷ್ಟ್ರಕ್ಕೆ ಹಾನಿ ಎನ್ನುತ್ತಿದ್ದರು. ಅವರು ತಮ್ಮ ಮೃತ್ಯು ಪತ್ರದಲ್ಲೂ ಕೂಡ ತಮ್ಮ ನಿಧನದ ದಿನವೂ ಎಲ್ಲರೂ ದಿನನಿತ್ಯದ ಕಾರ್ಯಮಾಡಬೇಕೆಂದು ಬರೆದಿದ್ದರು.

ಆತ್ಮಚರಿತ್ರೆ ಮತ್ತು ಆತ್ಮಾರ್ಪಣೆ ಲೇಖನದ ಅನಂತರ ಸಮುದ್ರದಲ್ಲಿ ಲೀನವಾಗುವ ಯೋಚನೆ ಮಾಡಿದ್ದರು. ಆದರೆ ಏಕೋ ಸುಮ್ಮನಾಗಿ ಯಾರಿಗೂ ತಿಳಿಯದಂತೆ ಉಪವಾಸವಿದ್ದು ಪ್ರಾಯೋಪ್ರವೇಶ ಮಾಡಿದರು. ಹಾಗೇ ಶರೀರ ಬಿಟ್ಟ ಋಷಿ-ಮುನಿ-ಮಹಾತ್ಮರನು ನೆನಪಿಸಿಕೊಂಡರು. ಅದು ಮಗಳಿಗೆ ಮಾತ್ರ ತಿಳಿದಿತ್ತು. ಫೆಬ್ರವರಿ ೨೬ನೇ ತಾರೀಖು ೧೯೬೬ನೇ ಇಸ್ವಿಯಲ್ಲಿ ಹತ್ತಿರ ಬರಲೂ ಹೆದರುತ್ತಿದ್ದ ಮೃತ್ಯು ಬಂತು. ಅದರ ಕೈ ಹಿಡಿದು ''ಹೋಗೋಣ ನಮ್ಮ ಮೂಲ ನೆಲೆಗೆ'' ಎಂದು ಹೊರಟೇಬಿಟ್ಟರು. ಸಾವರಕರ್ ಹೆಸರು ಅವಿಸ್ಮರಣೀಯ

॥ ಜೈ ಭಾರತಮಾತಾಕೀ ॥ ಜೈ ಸ್ವಾತಂತ್ರ್ಯ ಲಕ್ಷ್ಮೀ ॥ ಧನ್ಯವೀರ ಸಾವರಕರ್ ॥



ಸುಧಾರಣೆಯು ಜೀವನದ ಮಾರ್ಗವನ್ನು ಸುಗಮಗೊಳಿಸುತ್ತದೆ.

-ವಿಲಿಯಮ್ ಬ್ಲ್ಯಾರ್

ನೋಡು !

ಡಾ|| ಟಿ. ಶ್ರೀವೆಂಕಟರಮಣ,
೧೪,೪ನೇ ಮೆಯಿನ್ ಕೊನೆ
ವೆಂಕಟಪ್ಪ ಲೇಔಟ್, ಸಂಜಯ ನಗರ
ಬೆಂಗಳೂರು-೫೬೦ ೦೯೪

'ನೋಡು' ಎನ್ನುವುದೊಂದು ವಿಶಿಷ್ಟ ಪದ. ಸಮಯ ಸಂದರ್ಭಗಳನ್ನು ಹೊಂದಿಕೊಂಡು ಬೇರೆ ಬೇರೆ ಅರ್ಥವನ್ನು ಸೂಸುವಂತಹದು. ಈ 'ನೋಡು' 'ಪದಬಳಕೆ'ಯ ವೈವಿಧ್ಯವನ್ನೀಗ ತುಸು ನೋಡೋಣ.

'ನೋಡು' ನೋಡು ಕಣ್ಣಾರೆ ನಿಂತಿಹಳು?' ಎಂದು ಚಾಮುಂಡಿದೇವಿಯ ಭಕ್ತರು ಹಾಡಿದರೆ, ''ನೋಡು' ನೋಡು ಗೋಪಿ ನಿನ್ನ ಮಗನ ಲೂಟಿಯಾ'' ಎನ್ನುವ ದೂರು ಲಲನೆಯರದ್ದು. ಸ್ಪಷ್ಟ ವಿಚಾರಗಳನ್ನು ಗಮನಿಸುವಂತೆ ತಿಳಿಸಲು ಇಲ್ಲಿ'ನೋಡು' ಪದವನ್ನು ಬಳಸಲಾಗಿದೆ. 'ನೋಡು' ಮಹಾರಾಯಾ ಸ್ವಲ್ಪ ಸಹಾಯ ಮಾಡು'' ಅಥವಾ 'ನೋಡು', ಎಲ್ಲ ನಿನಗೆ ಬಿಟ್ಟಿದ್ದು ಎನ್ನುವಾಗ ಯಾಚನೆಯ ಶರಣಾಗತಿಯ ಅರ್ಥ ಹುದುಗಿದೆ. 'ನೋಡುತ್ತ,ನೋಡುತ್ತ ಬಾಲಕ ಜವ್ವನನಾದ' ಎನ್ನುವಲ್ಲಿ ಕಾಲಗತಿಯಲ್ಲಿ ಹುಡುಗ ದೊಡ್ಡವನಾದ ಎನ್ನುವ ಭಾವವಿದೆ. ಅಂದರೆ ಅವನ ದೇಹ ಬೆಳೆಯಿತು ಎನ್ನುವ ತಾತ್ಪರ್ಯ. ಬುದ್ಧಿ ಬೆಳವಣಿಗೆಯ ಪ್ರಸ್ತಾಪ ಯಾ ಗ್ಯಾರಂಟಿ ಇಲ್ಲಿಲ್ಲ. 'ದೇಹದೊಂದಿಗೆ ಬುದ್ಧಿ ಕೂಡ ಬೆಳೆಯಬೇಕೆಂಬ ನಿಯಮವೇನೂ ಇಲ್ಲವಲ್ಲ ! 'ಸಾರ್, ಇಲ್ಲಿ ನೋಡಿ'ಎಂದು ಯಾರಾದರೂ ಹೇಳಿದರೆ ಈ ಮಾತು ಅವರು ಸೂಚಿಸಿದ ಜಾಗವನ್ನು (ಸುಂದರ ದೃಶ್ಯ, ಹಾವು ಮುಂತಾದವನ್ನು) ನಮ್ಮ ಭೌತಿಕ ಕಣ್ಣುಗಳಿಂದ ಪರಾಂಬರಿಸಲು ಸೂಚನೆ ಇರಬಹುದು ಯಾ ಬರಿಯ ನಮ್ಮ ಗಮನವನ್ನು ಅವರೆಡೆಗೆ (ಮಾತುಗಳಿಗೆ) ಸೆಳೆಯುವ ಪೀಠಿಕೆ ಆದಾಗಿರಬಹುದು. 'ಅಲ್ಲಿ ನೋಡು, ಆಗಸದ ಸೊಗಸು, ಇಲ್ಲಿ ನೋಡು ನೀರಿನ ವಿಸ್ತಾರ ಎನ್ನುವ ಪ್ರಸಂಗ ಕೂಡ ದೃಶ್ಯದ ವೈಶಿಷ್ಟ್ಯದ ಸೂಚಕ.

ಈಗ ನೋಡಿ, ಗಮನವನ್ನು ಇನ್ನೊಂದು ಕಡೆ ಹರಿಸೋಣ. 'ರೀ, ಇಲ್ಲಿ ನೋಡಿ' ಎಂದು ಅಡುಗೆಮನೆಯಿಂದ ವಯ್ಯಾರದ ಮಾತು ಕೇಳಿಸಿದರೆ ಅದು ಅಲ್ಲಿಯ ಕಾರ್ಯಭಾರವನ್ನು ಹಂಚಿಕೊಳ್ಳಲು ಗಂಡನಾದವನಿಗೆ ಸೂಚನೆ, ವಾಸ್ತವವಾಗಿ ಆಣತಿ. ಯಾಕೆಂದರೆ ಅದನ್ನು ಮೀರಿದರೆ ಫಲಿತಾಂಶ ನೆಟ್ಟಗಿರುವುದು ಅಪರೂಪ. ಇದಕ್ಕೆ ವಿರುದ್ಧವಾಗಿ ಯಜಮಾನನೆಂಬ ಆಜ್ಞಾಪರಿಪಾಲಕ ''ಇಲ್ಲಿ ನೋಡೇ'' ಎಂದು ಬಂಡ ಧೈರ್ಯವಹಿಸಿ ಹೇಳಿದರೆ ಅದು ಅಮ್ಮಾವ್ರಿಗೆ ಬರಿಯ ವಿನಂತಿ ಮಾತ್ರ. ಈ ಚಿರಪರಿಚಿತ ಸನ್ನಿವೇಶದಲ್ಲಿ ಬೇರೆ ಬೇರೆ ಅರ್ಥ ವಿಶೇಷಗಳೂ ''ನೋಡು'' ಯಾ ''ನೋಡಿ'' ಎನ್ನುವ ಪದಕ್ಕೆ ಉಂಟಾಗಬಹುದು. ಉದಾಹರಣೆಗೆ, ನಗರದಲ್ಲಿ ಸೀರೆಗಳ ಪ್ರದರ್ಶನದ ದಿನಗಳಲ್ಲಿ 'ಆಕೆ' ''ನೋಡ್ರೀ'' ಎಂದು ಸಂಭಾಷಣೆ ಆರಂಭಿಸಿದರೆ ಬಹುಶಃ ಭರ್ಜರಿ ಖರ್ಚಿನ ಬಾಬತ್ತಿಗೆ ನಾಂದಿಯದು.

ಸರ್ಕಾರಿ ಕಚೇರಿಗಳ ಪರಿಸರ ಇನ್ನೊಂದು ತೆರನದ್ದು. ''ನೀವೀಗ ಹೋಗಿ. ನೋಡೋಣ' ಎಂದು ಸಾಹೇಬ್ರು ಉಸುರಿದರೆ ನಿಮ್ಮ ಕೆಲಸವಾಗುವುದು ಸಂಶಯವೆಂಬ ಸೂಚನೆ. 'ನೋಡಿ, ಏನಾದರೂ

ಮಾಡಿ' ಎಂದು ಬಡಪಾಯಿ ಶ್ರೀಸಾಮಾನ್ಯನೆಂದರೆ ತಾನು ರುಶವತ್ತು ಕೊಡಲೂ ಸಿದ್ಧ, ಹೇಗಾದರೂ ಕಾರ್ಯವಾಗಬೇಕೆಂಬುದರ ಪರ್ಯಾಯ ವಾಚಕವದು. ''ಏನಾದರೂ ಆಗಲಿ, ಒಂದು ಕೈ ನೋಡಿಯೇ ಬಿಡೋಣ'' ಎನ್ನುವ ಮಾತು ಕದನ ಕುತೂಹಲ ರಾಗವೇ ಸರಿ 'ಮದುವೆ ಯಾಗಲಿ, ಆ ಮೇಲೆ ನೋಡಿ ಅವನ ಆಟ' ಎಂದಿದ್ದು ಕೇಳಿಸಿದರೆ ಭಾವೀ ಅಳಿಯ ವಿವಾಹದ ಬಳಿಕ ಅವತಾರ ಬದಲಿಸಲಿದ್ದಾನೆ ಎಂಬುದರ ಎಚ್ಚರಿಕೆ ಮಾತದು. ಅಳಿಯ ಎಂದಾಗ ಜ್ಞಾಪಕಕ್ಕೆ ಬರುತ್ತದೆ ನೋಡಿ ಒಂದು ಅನುಭವ ಜನ್ಯ ಮಾತು . 'ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು 'ಎಂಬುದದು, ಇಂಥ ಕೆಲಸಗಳನ್ನು ಮಾಡಿ ಬೆರಳು (ಬಹುಶಃ ಇಡಿಯ ಕೈ) ಸುಟ್ಟು ಕೊಂಡವರ ಅನಿಸಿಕೆ ಇದು! "Look before you leap" ಎನ್ನುವ ಆಂಗ್ಲ ಮಾತೊಂದಿದೆ. ಇದನ್ನು 'ನೋಡಿ, ಹಾರು'' ಎಂದು ಕನ್ನಡಿಸಬಹುದೇನೋ? ಅಥವಾ ಇದು 'ಹಾರಿ ನೋಡು' ಎಂದಾಗಬೇಕೇ? ಜಾಣರಾದ ನೀವೇ ನಿರ್ಧರಿಸಿ. ''ರವಿ ಕಾಣದ್ದನ್ನು, ಕವಿ ಕಂಡ'' ಎಂಬುದು ಪರಿಚಿತ ನುಡಿ. ಅಂದರೆ ಕವಿಯ ಕಲ್ಪನಾನೋಟದ ಶಕ್ತಿ ರವಿಯ ಪ್ರಖರತೆಯನ್ನು ಮೀರಿಸುತ್ತದೆ ಎಂಬ ಇಂಗಿತ. ಅಂತೂ 'ನೋಡುವುದು, ನೋಟ'' ಅದ್ಭುತವೇ ಸರಿ.

ಈಗ ಕನ್ನಡದ ಸರಳ, ಸುಂದರ 'ನೋಡು' ಎನ್ನುವ ಪದದಿಂದ ಅದೇ ಧ್ವನಿ ಹೊರಡಿಸುವ ಆಂಗ್ಲ "No Do" ಪದ ಪ್ರಯೋಗದತ್ತ ಗಮನ ಹರಿಸೋಣ. ಅಂದರೆ "No doing" "only Talking" ಎನ್ನುವ ಧ್ವನಿ ಇಲ್ಲಿದೆ. ಬರಿಯ ಮಾತು, ಮಾತು, ಸಾಧಿಸಿದ್ದು, ಸಾಧಿಸುವುದು ಶೂನ್ಯದ ಸನಿಹವೆಂಬ ನಿರಾಶಾದಾಯಕ ವಾತಾವರಣವಿದು. ಅಂದರೆ ಸಂಬಂಧಿಸಿದ ವ್ಯಕ್ತಿಗಳು NATO (No Action Talk Only) ಬಳಗದವರು. 'ನೋಡು' ಅನ್ನು 'Know, Do' ಎಂದು ಆಂಗ್ಲ ಭಾಷಾಂತರಿಸಿದರೆ ಪರಿಸರ ಪೂರ್ಣ ಬದಲಾಗುತ್ತದೆ. ಅದು ಆಳವಾದ ಮಾತು ಕೂಡ. ''ಅರಿತು, ಮಾಡು'', ವಿಚಾರದ ಪೂರ್ಣ ತಿಳುವಳಿಕೆ ಇರಲಿ? ಎನ್ನುವ ವಿಚಾರಧಾರೆಯಿದು. ಇಂದಿನ ದಿನಗಳಲ್ಲಿ ಈ ಧಾರೆಯನ್ನು ನಿರ್ಲಕ್ಷಿಸುವವರು ಸಾಕಷ್ಟು ಮಂದಿ. ''ಏನಾದರೂ ಮಾಡು, ಆಮೇಲೆ ನೋಡೋಣ'' ಎನ್ನುವ ಬಳಗದ ವಿಸ್ತಾರ ಸಾಕಷ್ಟು ;''ಅಷ್ಟು ಮಾತ್ರವಲ್ಲ ದಿನೇ ದಿನೇ ವಿಸ್ತರಿಸುತ್ತಿರುವ ಬಳಗವಿದು. ಈ ವಿಸ್ತರಣೆ ಹೀಗೆಯೇ ನಡೆಯುತ್ತ ಹೋದರೆ, ನೋಡಿ, ಮುಂದಿನ ಶತಮಾನದ ಆರಂಭದ ಹೊತ್ತಿಗೆ (ಅದೇನೂ ದೂರವಿಲ್ಲ, ಬಿಡಿ!)Don't Know, but Do" ಮತ್ತು "No Do" ಸುತ್ತಲೂ ಅನ್ವಯಿಸುವ ಮಾತಾಗಲಿದೆ. ಅಂತಹದಿನ ನಮಗೆ ಬರದಿರಲಿ, ನಮ್ಮ ಶತ್ರುಗಳಿಗೆ ಬರಲಿ, ನೋಡಿ.

ದೇಶವು ಆ ದೇಶದಲ್ಲಿ ವಾಸಿಸತಕ್ಕ ಜನರದು. ಅದನ್ನು ಆಳುವ ಸರಕಾರವನ್ನು ತಿದ್ದಲು ಅವರೇ ನಿಜವಾದ ಹಕ್ಕುಳ್ಳವರು.

ನೇತಾಜಿ

ಬಿಟ್ಟು ಹೋಗಿರುವ ಒಂದು ಪದಾರ್ಥ

ಭಾರತೀ ಭಟ್
೧೩೫೫, ೨೨ನೇ ಕ್ರಾಸ್, ೩ಎ ಮೈನ್,
ಡಿ. ಬ್ಲಾಕ್, ವಿಜಯನಗರ, ೩ನೇ ಹಂತ,
ಮೈಸೂರು-೫೭೦ ೦೧೭

ಅಡುಗೆಮನೆಯಲ್ಲಿ ಒಲವು ಇಲ್ಲವಾದರೆ ಊಟದ ಮೇಜಿನಲ್ಲಿ ರುಚಿ ಬರಲಾರದು.... ಪೀಟರ್ ಮೆಡಾವರ

ನಾನು ನನ್ನ ಅಮ್ಮನ ಹತ್ತಿರ ಒಮ್ಮೆ ಅವಳು ತಯಾರಿಸುವ ರುಚಿರುಚಿಯಾದ ತಿಂಡಿಗಳ ವಿಧಾನಗಳನ್ನೆಲ್ಲ ಒಂದು ಪುಸ್ತಕದಲ್ಲಿ ನನಗೆ ಬರೆದು ಕೊಡಬೇಕೆಂದು ಕೇಳಿದೆ. ಆದರೆ ಕೂಡಲೇ ಆಕೆ ಮನನೊಂದವಳಂತೆ ಹೇಳಿದಳು, ''ಯಾಕೆ ? ನಾನು ಇನ್ನೂ ಜೀವಂತ ಇದ್ದೇನಲ್ಲ ?''.

''ಅದು ನನಗೆ ಗೊತ್ತಿದೆ, ಆದರೆ ನೀನು ಮಾಡುವ ತಿಂಡಿಗಳನ್ನೆಲ್ಲ ನಾನು ಈಗಲೇ ಕಲಿತುಕೊಳ್ಳದಿದ್ದರೆ ಅನಂತರ ನನಗೆ ಬರುವ ಸಂಶಯಗಳನ್ನೆಲ್ಲಾ ನಿವಾರಿಸಲು ನೀನು ಯಾವಾಗಲೂ ನನ್ನೊಂದಿಗೇನೇ ಇರಬೇಕಾದೀತು, ಅಲ್ಲವೇ ?' ಎಂದು ನಾನು ಹೇಳಿದೆ.

ಅದಕ್ಕೆ ಅವಳು ಏನೋ ಗೊಣಗುತ್ತಾ ಕೊನೆಗೂ ಬರೆದು ಕೊಡಲು ಒಪ್ಪಿದಳು. ನಾನು ೩೫ ತಿಂಡಿಗಳ ಹೆಸರುಗಳನ್ನು ಅವಳಿಗೆ ಬರೆದು ಕೊಟ್ಟೆ. ಅವನ್ನು ತಯಾರಿಸುವ ವಿಧಾನವನ್ನು ಬರೆದುಕೊಡಲು ಆಕೆಗೆ ಒಂದು ವರ್ಷ ಬೇಕಾಯಿತು. ಕೊನೆಗೂ ಹಾಗೆ ಬರೆದುದನ್ನು ಆಕೆ ನನಗೆ ಕೊಟ್ಟಳು, ಆದರೆ ಅದರ ಜತೆ ಒಂದು ಪತ್ರವನ್ನೂ ಇರಿಸಿದ್ದಳು. ''ಇವನ್ನೆಲ್ಲ ಮಾಡಿ ನೋಡು. ಆದರೆ ಈ ತಿಂಡಿಗಳಿಗೆ ಸರಿಹೊಂದುವಂತೆ ಪದಾರ್ಥಗಳನ್ನು ರುಚಿಗೆ ಬೇಕಾಗುವ ಹಾಗೆ ಸೇರಿಸಿಕೊಳ್ಳಬೇಕಾದೀತು. ಮಾಡಲು ಸಾಧ್ಯವಾಗದಿದ್ದರೆ ನನಗೆ ತಿಳಿಸು,'' ಎಂಬುದಾಗಿ ಅದರಲ್ಲಿ ಬರೆದಿತ್ತು.

ಅವುಗಳಲ್ಲಿ ನಮ್ಮ ಬ್ರೆಜಿಲಿಯನ್ ಹೆಯರ್‌ಡ್ರೆಸರ್ ಅಮ್ಮನಿಗೆ ಹೇಳಿಕೊಟ್ಟಿದ್ದ ಒಂದು ಹಳೇ ತಿಂಡಿಯಾದ ''ಹುರಿದ ಟರ್ಕಿ'ಯನ್ನು ಮಾಡಬೇಕೆಂದು ನಾನು ಸಿದ್ಧತೆ ನಡೆಸಿದೆ. ಅಮ್ಮ ಬರೆದ ವಿಧಾನವನ್ನು ಓದಿ ನೋಡಿದೆ. ಮೊದಲು ಕೆಂಪು ವೈನಿನಲ್ಲಿ ೨೪ಗಂಟೆಗಳ ಕಾಲ ಟರ್ಕಿಯನ್ನು ಮುಳುಗಿಸಿಡಬೇಕು ಎಂದಿತ್ತು ಮತ್ತು ಅದನ್ನು ತಯಾರಿಸುವಲ್ಲಿ ಬಳಸಬೇಕಾಗಿರುವ ಹಲವಾರು ಮಸಾಲೆಗಳ ಒಂದು ಪಟ್ಟಿಯೂ ಅದರೊಂದಿಗಿತ್ತು.

ನಾನು ಅಮ್ಮನಿಗೆ ಫೋನ್ ಮಾಡಿ ''ಟರ್ಕಿಯನ್ನು ವೈನಿನಲ್ಲಿ ನೆನೆಸಿಡುವ ಮೊದಲು ನೀನು ಅದರೊಳಗೆ ಯಾವುದೋ ಮಸಾಲೆ ತುಂಬಿಸುತ್ತೀಯಲ್ಲವೇ'' ಎಂದು ಕೇಳಿದೆ.

ಅದಕ್ಕವಳು 'ಹೌದು, ಅದರೊಳಗೆ ನೀರುಳ್ಳಿ, ಏಪಲ್, ಪ್ರೂನ್ ಇಲ್ಲವೇ ಕಿತ್ತಳೆ ಹಣ್ಣನ್ನು ಬೇಕಿದ್ದರೆ ಸೇರಿಸಬಹುದು,' ಎಂದು ಹೇಳಿದಳು.

''ಆದರೆ ಅಮ್ಮಾ, ನೀನು ಟರ್ಕಿಯೊಳಗೆ ನೀರುಳ್ಳಿಯಲ್ಲದೆ ಬೇರೆ ಯಾವ ಪದಾರ್ಥವನ್ನೂ ಸೇರಿಸುತ್ತಿರಲಿಲ್ಲ ಅಲ್ಲವೇ ?''

ಅವಳು ನಗಾಡಿದಳು. ''ಅದು ನಿಜ, ಆದರೆ ಬೇರೆ ಪದಾರ್ಥಗಳನ್ನು ಬೇಕಿದ್ದರೂ ಸೇರಿಸಬಹುದು''.

೧೯೯೯ರ ಜುಲೈ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಎರಿಕ್ ವಿಚ್ಚೆಲ್ ಅವರ ''ವನ್ ಇಂಗ್ರೀಡಿಯಂಟ್ ಮಿಸ್ಸಿಂಗ್'' ಎಂಬ ಲೇಖನದ ಅನುವಾದ

"ಓ, ಹಾಗೋ, ಗೊತ್ತಾಯಿತು. ನಿನಗೆ ತಿಳಿದಿರುವ ಎಲ್ಲಾ ವಿಷಯಗಳನ್ನೂ ನನಗೆ ಬರೆದು ತಿಳಿಸಿಬಿಟ್ಟಲ್ಲಿ ಅಮ್ಮನ ಸ್ಥಾನದಲ್ಲಿರುವ ನಿನ್ನ ಪ್ರತಿಷ್ಠೆ ಹೋಗುತ್ತದೆ, ಅಲ್ಲವೇ?"

ಅವಳು ಇನ್ನಷ್ಟು ಗಟ್ಟಿಯಾಗಿ ನಗಾಡಿದಳು. "ಇನ್ನೊಂದು ವಿಷಯ. ಟರ್ಕಿಯನ್ನು ಹೊಲಿಯಲು ಸುರುಮಾಡುವ ಮೊದಲೇನೇ ಒಂದೆರಡು ನೀರುಳ್ಳಿಗಳನ್ನು ತುಂಡುಮಾಡಿ ಪಾತ್ರೆಯಲ್ಲಿಟ್ಟು ನೀರು ಹಾಕಿರಿಸಿದರೆ ಕೆಲಸ ಸುಲಭವಾಗುತ್ತದೆ," ಎಂದು ಹೇಳಿದಳು.

ನಾನು ಆಕೆ ಬರೆದು ಕೊಟ್ಟ ವಿಧಾನವನ್ನು ಪುನಃ ಓದಿ ನೋಡಿದೆ. ನೀರುಳ್ಳಿ ಎಂಬ ಶಬ್ದ ಅದರಲ್ಲಿ ಎರಡು ಬಾರಿ ಬರುವುದಿರಲಿ, ಒಮ್ಮೆಯೂ ಬಂದಿರಲಿಲ್ಲ. "ಚೆನ್ನಾಗಿದೆ," ಎಂದು ಮೆತ್ತಗೆ ಹೇಳಿಕೊಂಡೆ.

'ಪ್ರೀತಿಯಿಂದ ಕೂಡಿದ ಅವಳ ಸ್ವರ ಪುನಃ ಕೇಳಿಸಿತು. "ಇಲ್ಲಿ ಕೇಳು, ಮಗಳೇ, ತಿಂಡಿ ಮಾಡುವ ವಿಧಾನವನ್ನು ಕೇಳುವಾಗ ಲೆಲ್ಲಾ ನಾನು ಕೂಡ ನಿನ್ನಂತೆ ನನ್ನ ಅಮ್ಮನ ಮೇಲೆ ರೇಗುತ್ತಿದ್ದೆ. ಅವಳು ಯಾವುದಕ್ಕೂ ಅಳತೆ ಇಂತಿಷ್ಟೇ ಎಂದು ನನಗೆ ಹೇಳುತ್ತಿರಲಿಲ್ಲ. ನಾನು ನಿನಗೆ ಈಗ ಹೇಗೆ ಹೇಳುತ್ತಿದ್ದೇನೋ ಹಾಗೆಯೇ ಅವಳೂ ನನಗೆ ಹೇಳುತ್ತಿದ್ದಳು:' 'ನಾನು ಮಾಡುವುದನ್ನು ನೋಡು. ಎಷ್ಟೋ ಬಾರಿ ನಾವು ಈ ತಿಂಡಿಗಳನ್ನು ಮಾಡುತ್ತಿರುತ್ತೇವೆ, ಆದರೆ ಅವಕ್ಕೆ ಬೇರೆ ಬೇರೆ ಪದಾರ್ಥಗಳನ್ನು ಎಷ್ಟೆಷ್ಟು ಹಾಕಬೇಕು ಎಂಬ ವಿಷಯಕ್ಕೆ ಜಾಸ್ತಿ ಪ್ರಾಮುಖ್ಯ ಕೊಡುವುದಿಲ್ಲ, ಅವುಗಳ ಪರಿಮಳ ಹೇಗೆ ಬರುತ್ತಾ ಇದೆ, ಅವು ಹೇಗೆ ಕಾಣಿಸುತ್ತಾ ಇವೆ ಎಂಬುದಕ್ಕೇನೇ ಪ್ರಾಮುಖ್ಯ ಕೊಡುತ್ತೇವೆ. ಇದೆಲ್ಲ ಯಾವಾಗಲೂ ಒಂದೇ ತರವಾಗಿ ಇರುವುದಿಲ್ಲ' ಎನ್ನುತ್ತಿದ್ದಳು.

"ಆದರೆ ನನಗೆ ಅದು ಒಂದೇ ತರ ಇರಬೇಕು. ರಜಾದಿನಗಳಲ್ಲಿ ನಿನ್ನ ಮನೆಯಲ್ಲಿ ಹೇಗೆ ಪರಿಮಳ ಬರುತ್ತಿತ್ತೋ ಹಾಗೆಯೇ ನನ್ನ ಮನೆಯಲ್ಲೂ ಬರಬೇಕು. ಎಲ್ಲವೂ ರುಚಿಯಾಗಿದ್ದರೆ, ಅಲ್ಲಿಗೆ ಬಂದವರಿಗೆಲ್ಲಾ ತಾವು ಇಲ್ಲಿಗೆ ಬಂದುದು ಸಾರ್ಥಕವಾಯಿತು ಎಂದು ಅನಿಸುತ್ತದೆ" ಎಂದು ನಾನು ಹೇಳಿದೆ.

"ಸರಿ. ಹಾಗೇ ಆಗಲಿ. ನಿನಗೆ ಏನಾದರೂ ತೊಂದರೆಯಾದರೆ ನನ್ನನ್ನು ಪುನಃ ಕೇಳು" ಎಂದು ಅವಳು ಹೇಳುತ್ತಿದ್ದಂತೆ ಅವಳ ಮನೆಯಲ್ಲಿ ಕರೆಗಂಟೆ ಕೇಳಿಸಿತು. ಅವಳು ಫೋನನ್ನು ಕೆಳಗಿರಿಸಿದಳು.

ಟರ್ಕಿಯನ್ನು ಬೇಯಲು ಇಟ್ಟನಂತರ ನಾನು ಬೇಯಿಸಿದ ಆಲೂಗಡ್ಡೆಯನ್ನು ಮುದ್ದೆ ಮಾಡಿದೆ. ಸಂಪ್ರದಾಯಬದ್ಧವಾದ ಜ್ಯೂಯಿಶ್ ಕುಟುಂಬದಲ್ಲಿ ಹುಟ್ಟಿ ಬೆಳೆದ ನನಗೆ ಮುದ್ದೆ ಮಾಡಿದ ಆಲೂಗಡ್ಡೆ ಇಷ್ಟವಾಗಿತ್ತು. ಆದರೆ ಅದನ್ನು ಮೀನಿನ ಜತೆ ಮಾತ್ರ ಉಪಯೋಗಿಸುತ್ತಿದ್ದೆವು. ಬೆಣ್ಣೆ, ಕ್ರೀಮ್ ಅಥವಾ ಹಾಲು ಮಾಂಸದ ಜತೆ ಅದು ಸರಿಯಾಗಿ ಹೊಂದಿಕೊಳ್ಳುವುದಿಲ್ಲ. ನಮ್ಮ ಮನೆಯಲ್ಲಿ ಸಾಮಾನ್ಯವಾಗಿ ಆಲೂಗಡ್ಡೆಯ ಮುದ್ದೆಗೆ ಉಪ್ಪು ಮತ್ತು ಮಾರ್ಗರಿನ್ ಸೇರಿಸುತ್ತಿದ್ದೆವು. ಆದರೆ ಈಗೆ ಕೆಲವು ವರ್ಷಗಳಿಂದ ಬೇರೆ ಬೇರೆ ರೀತಿಯ ಅಡುಗೆ ವಿಧಾನವನ್ನು ಓದಿ ಕಲಿತನಂತರ ನಾನು ನನಗೆ ಬೇಕಾದ ಹಾಗೆ ಮಾಡುತ್ತಿದ್ದೆ.

ಅಮ್ಮ ಹೇಳಿದುದಕ್ಕಿಂತಲೂ ಬೇಗನೆ ಟರ್ಕಿ ಬೆಂದಿತು. ನಾನು ನನ್ನ ಪತಿ ಮತ್ತು ಮಲಮಗ ಸೈಮನ್‌ನನ್ನು ಊಟಕ್ಕೆ ಬರಲು ಹೇಳಿದೆ. "ಇದೇನು? ಯಾವ ಕಾರಣವೂ ಇಲ್ಲದೆ ನೀನು ಟರ್ಕಿಯನ್ನು ಮಾಡಿರುವೆಯಲ್ಲ?" ಎಂದು ಸೈಮನ್ ಕೇಳಿದ.

"ಹೌದು, ನನಗೆ ಈ ತಿಂಡಿಯನ್ನು ಮಾಡಲು ಕಲಿಯಬೇಕಾಗಿದೆ," ಎಂದು ನಾನು ಹೇಳಿದೆ.

ಅವನ ತಂದೆ ಅದನ್ನು ತುಂಡು ಮಾಡಲು ತೊಡಗಿದಾಗ ಅವನು ಹೇಳಿದ "ಹಾಗೇನು?"

ಆದರೆ ಆ ಟರ್ಕಿ ನನ್ನ ಅಮ್ಮ ಮಾಡಿದ ಹಾಗೇನೇ ರುಚಿರುಚಿಯಾಗಿತ್ತು! ತುಂಬಾ ದಿವಸದಿಂದ ಅವಳು ಮಾಡುವುದನ್ನು ನೋಡುತ್ತಿದ್ದುದರಿಂದ ನನಗೆ ಅದನ್ನು ಅಷ್ಟು

ಚೆನ್ನಾಗಿ ತಯಾರಿಸಲು ಸಾಧ್ಯವಾಯಿತೆಂದು ತೋರುತ್ತದೆ. ನಾವು ತಿಂಡಿಯನ್ನು ನಮ್ಮ ಪ್ಲೇಟಿಗೆ ಹಾಕಿಕೊಂಡು ಸಂತೋಷದಿಂದ ಮಾತನಾಡುತ್ತಾ ನಗುತ್ತಾ ತಿಂದೆವು. ಎರಡನೆಯ ಬಾರಿಯೂ ಪ್ಲೇಟಿಗೆ ಹಾಕಿಕೊಂಡೆವು.

ಸೈಮನ್ ನನ್ನ ಕಡೆಗೆ ನೋಡಿದ. ಅವನ ಮುಖ ಆಶ್ಚರ್ಯದಿಂದ ಕೂಡಿತ್ತು. ನಾನು ಸಂತೋಷದಿಂದ ಅವನನ್ನು ನೋಡಿದೆ. ನಾನೇ ಅದನ್ನು ತಯಾರಿಸಿದ್ದೆ. ಇತರರು ಮಾಡಿದಂತೆಯೇ ನಾನೂ ಅದನ್ನು ಮನೆ ಯಲ್ಲಿಯೇ ತಯಾರಿಸಿದ್ದೆ.

''ಇಷ್ಟು ರುಚಿಯಾದ ಮುದ್ದೆ ಮಾಡಿದ ಆಲೂಗಡ್ಡೆಯನ್ನು ನಾನು ಒಮ್ಮೆಯೂ ತಿಂದಿರಲಿಲ್ಲ'', ಎಂದು ಅವನು ಉತ್ಸಾಹದಿಂದ ಹೇಳಿದ.

ಓಹ್, ''ನನಗೆ ತುಂಬಾ ಆನಂದವಾಯಿತು,'' ಎಂದು ನಾನು ಹೇಳಿದೆ.

''ಇದನ್ನು ನೀನು ಹೇಗೆ ಮಾಡಿದೆ?'' ಅವನು ಕೇಳಿದ.

ನಾನು ನಿರುತ್ತರಳಾದೆ. ''ಬೆಣ್ಣೆ, ಕ್ರೀಮ್,'' ಎಂದೇನೋ ಹೇಳತೊಡಗಿದೆ. ಅವನು ತಲೆ ಅಲ್ಲಾಡಿಸಿದ. ನಮ್ಮ ಪ್ಲೇಟು ಖಾಲಿಯಾಗಿತ್ತು. ಅನಂತರ ಅವನು ಟಿ.ವಿ.ನೋಡಲು ಹೊರಟು ಹೋದ.

ನಾನು ಅಡುಗೆ ಕೋಣೆಗೆ ಹೋಗಿ ಉಳಿದಿರುವ ಬೆಣ್ಣೆ ಮತ್ತು ಕ್ರೀಮನ್ನು ನೋಡಿದೆ. ನಾನು ಎಷ್ಟು ಬೆಣ್ಣೆ ಉಪಯೋಗಿಸಿದ್ದೆ, ಎಷ್ಟು ಕ್ರೀಮ್ ಉಪಯೋಗಿಸಿದ್ದೆ? ನನಗೆ ಜ್ಞಾಪಕ ವಿರಲಿಲ್ಲ. ತೆರೆದ ಕಣ್ಣಿನಿಂದ ಸೈಮನ್ ನನ್ನನ್ನು ನೋಡಿದ್ದು ನೆನಪಾಯಿತು. ಈ ತಿಂಡಿ ಮಾಡುವ ಕ್ರಮವನ್ನು ಸರಿಯಾದ ಅಳತೆಯಂತೆ ಬರೆಯಲು ನನ್ನ ಅಮ್ಮನಿಗೆ ಯಾಕೆ ಅಷ್ಟು ಕಷ್ಟವಾಯಿತೆಂಬ ವಿಷಯ ನನಗಾಗ ಅರ್ಥವಾಯಿತು. ಅವಳ ಅಮ್ಮನಿಗೂ ಹೀಗೇನೇ ಆಗಿದ್ದಿರಬಹುದು.

ತಿಂಡಿ ಮಾಡುವ ವಿಧಾನದಲ್ಲಿ ಬರೆಯಲು ಸಾಧ್ಯವಿಲ್ಲದಂಥ ಪದಾರ್ಥಗಳೂ ಕೆಲವಿವೆಯೆಂಬ ವಿಷಯ ನನಗಾಗ ಮನದಟ್ಟಾಯಿತು. ನೀವು ನಿಮ್ಮ ಮನೆಯವರನ್ನು ಎಷ್ಟು ಪ್ರೀತಿಸುತ್ತೀರಿ, ನೀವು ಮಾಡಿದ ತಿಂಡಿಯನ್ನು ತಿನ್ನುವಾಗ ಅವರ ಮುಖದಲ್ಲಾಗುವ ಆನಂದ ನಿಮಗೆ ಎಷ್ಟು ಇಷ್ಟವಾಗುತ್ತದೆ, ನೀನು ಅವರನ್ನು ಯಾವ ರೀತಿಯಲ್ಲಿ ನೋಡಿಕೊಂಡು ಉಪಚಾರ ಮಾಡುತ್ತೀರಿ ಮತ್ತು ಅವರ ಸುರಕ್ಷಿತತೆ ನಿಮಗೆ ಎಷ್ಟು ಮುಖ್ಯ ಇವೆಲ್ಲವೂ ನೀವು ಮಾಡುವ ತಿಂಡಿಗೆ ನಿಜವಾದ ರುಚಿ ಬರುವಂತೆ ಮಾಡುತ್ತವೆ. ಅವನ್ನೆಲ್ಲ ತಿಂಡಿ ಮಾಡುವ ವಿಧಾನದಲ್ಲಿ ಬರೆಯಲು ಸಾಧ್ಯವೇ?

''ಟರ್ಕಿ ಹೇಗಿತ್ತು?'' ಎಂದು ಅಮ್ಮ ಮಾರನೆಯ ದಿವಸ ಕೇಳಿದಳು''.

''ಚೆನ್ನಾಗಿತ್ತು, ಇದೊಂದು ದೊಡ್ಡ ಜಯ''.

''ಅದರೊಳಗೆ ಏನು ಇರಿಸಿದ್ದೆ?''

ಹೇಳಲೋ ಬೇಡವೋ ಎಂದು ಆಲೋಚಿಸುತ್ತಾ ಕೊನೆಗೂ ಹೇಳಿದೆ. ''ಮುದ್ದೆ ಮಾಡಿದೆ ಆಲೂಗಡ್ಡೆ''

''ಹೋ, ಹಾಗಾದರೆ ನಿನ್ನ ಬಳಿ ಅದನ್ನು ಸರಿಯಾಗಿ ತಯಾರಿಸುವ ವಿಧಾನ ಇದೆ ಅಲ್ಲವೇ?'' ಎಂದು ಅವಳು ಕೇಳಿದಳು.

ನಾನು ನಗಾಡಿದೆ. ''ನಿಜವಾಗಿಯೂ ಈಗ ಅಂಥ ವಿಧಾನ ನನ್ನ ಬಳಿ ಇದೆ,'' ಎಂದು ನಾನು ಹೇಳಿದೆ.

ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ.
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

-ಸ್ವಾಮಿವಿವೇಕಾನಂದ

ವಿಜ್ಞಾನ ಯೋಗಿ ಮಾನ್ಯ ಕೆ.ಎಸ್.ನರಗುಂದ

ಡಾ|| ಸರ್ವೋತ್ತಮ ಅಂಬೇಕರ
೪೪, ೧೫ನೇ ಅಡ್ಡರಸ್ತೆ, ವಿ.ವಿ.ಪುರಂ,
ಮೈಸೂರು-೫೭೦ ೦೦೨

೧೯೩೦ರ ದಶಕ ಹಾಲೆಂಡಿನಲ್ಲಿ ನಡೆದ ಘಟನೆ. ಅಲ್ಲಿಯ ಕಟ್‌ವೈಕ್ ನಗರದ ಹತ್ತಿರದಲ್ಲಿದ್ದ ಕೆರೆಯೊಂದರಲ್ಲಿ ಭಾರತೀಯನೊಬ್ಬ ಈಜಲು ಹೋಗಿದ್ದಾಗ, ನೀರಿನಲ್ಲಿ ಮುಳುಗುತ್ತಿದ್ದ ಡಚ್ ಮಹಿಳೆಯೊಬ್ಬಳು ಸಹಾಯಕ್ಕೆ ಅರಚುತ್ತಿದ್ದಳು. ನೆರೆಯವರಾರೂ ಹೋಗದಿದ್ದುದನ್ನು ಕಂಡು ಈ ಭಾರತೀಯ ನೀರಿಗೆ ಧುಮುಕಿ ಆ ಮಹಿಳೆಯ ಜೀವ ರಕ್ಷಿಸಿದ. ಮರುದಿನ ಡಚ್ ಪತ್ರಿಕೆಗಳು ಈ ಭಾರತೀಯ ವೀರನ ಸಾಹಸಕಥೆಯನ್ನು ದಪ್ಪ ಅಕ್ಷರಗಳಲ್ಲಿ ಫೋಟೋ ಸಹಿತ ಪ್ರಕಟಿಸಿದ್ದವು.

ಅಹಮ್ಮದಾಬಾದಿನ ಗುಜರಾತ್ ಕಾಲೇಜಿನ ವಿದ್ಯಾರ್ಥಿಗಳು ಕರ್ನಾಟಕದ ಶಿಕ್ಷಕನೊಬ್ಬನಿಗೆ ಆದರ ಹಾಗೂ ಗೌರವ ಸೂಚಿಸುವುದಕ್ಕಾಗಿ ಕಾಲೇಜ್ ಆವರಣದಲ್ಲಿ ಪ್ರತಿಮೆಯನ್ನು ಸ್ಥಾಪಿಸಿ ಗುರುವಿನ ಹೆಸರನ್ನು ಹಸುರಾಗಿಸಿದ್ದಾರೆ.

ಈ ಭಾರತೀಯ ವೀರ, ಕರ್ನಾಟಕದ ಶಿಕ್ಷಕ ಮತ್ತಾರೂ ಅಲ್ಲ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರ ಶಿಷ್ಯರು 'ಮಾಸ್ತರ' ಎಂದೇ ಗುರುತಿಸಿಕೊಂಡಿದ್ದ ಕೆ.ಎಸ್.ನರಗುಂದ (೧೮೯೮-೧೯೮೪).

ನರಗುಂದ ಅವರು ಭಾರತದ ರಾಸಾಯನಿಕ ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿ ಪ್ರಸಿದ್ಧರಾಗಿದ್ದರು. ಅವರ ಮಾರ್ಗದರ್ಶನದಲ್ಲಿ ೬೦ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪಿಎಚ್‌ಡಿಯನ್ನೂ ೧೦೮ ವಿದ್ಯಾರ್ಥಿಗಳು ಎಂಎಸ್‌ಸಿಯನ್ನೂ (ಸಂಶೋಧನೆ ಮೂಲಕ) ಪಡೆದು ದೇಶ ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ. ಬಹುಶಃ ಇದು ಇಡೀ ಭಾರತದಲ್ಲಿಯೇ ಯಾರೂ ಮುರಿಯದಂತಹ ದಾಖಲೆ. ಇಷ್ಟೇ ಅಲ್ಲ, ಇವುಗಳ ಪೈಕಿ ೩೦ ಪಿಎಚ್‌ಡಿ ಮತ್ತು ೫೪ ಎಂಎಸ್‌ಸಿ, ವಿದ್ಯಾರ್ಥಿಗಳಿಗೆ ಅವರು ಮಾರ್ಗದರ್ಶನ ಮಾಡಿದ್ದು ನಿವೃತ್ತಿ ಅನಂತರದ ೨೫ ವರುಷಗಳ ಅವಧಿಯಲ್ಲಿ ಅಂದರೆ, ಪ್ರಪಂಚದ ದಾಖಲೆಗಳನ್ನು ಪ್ರಕಟಿಸುವ ಗಿನ್ನೆಸ್ ಪುಸ್ತಕದ ಪುಟವೊಂದನ್ನು ಓದಿದಂತೆ ಅನ್ನಿಸಿದರೆ ಆಶ್ಚರ್ಯವಿಲ್ಲ.

ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ೧೮೯೫ರಲ್ಲಿ ಜನಿಸಿದ ಕೃಷ್ಣ ಶ್ರೀನಿವಾಸ ನರಗುಂದ ಅವರು ಪುಣೆಯ ಫರ್ಗೂಸನ್ ಕಾಲೇಜಿನಿಂದ ಬಿಎಸ್‌ಸಿಯನ್ನು ಪ್ರಥಮ ಶ್ರೇಣಿಯಲ್ಲಿ ಗಳಿಸಿ ಅನಂತರ ಪ್ರೊ. ವ್ಯಾಟ್ಸನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡು ಮುಂಬೈ ವಿಶ್ವವಿದ್ಯಾಲಯದ ಎಂಎಸ್‌ಸಿ ಪಡೆದರು. ಉನ್ನತ ವ್ಯಾಸಂಗಕ್ಕಾಗಿ ಶಿಷ್ಯವೇತನ ದೊರೆತಾಗ(೧೯೨೭) ಇಂಗ್ಲೆಂಡಿಗೆ ತೆರಳಿ ಅಲ್ಲಿಯ ರಾಯಲ್ ಕಾಲೇಜಿನಲ್ಲಿ ಪ್ರವೇಶ ಪಡೆದು Thrope's Dictionary of chemistry ಖ್ಯಾತಿಯ ಪ್ರೊ. ತಾರ್ಪ್ ಅವರ ನೇತೃತ್ವದಲ್ಲಿ "Three carbon tautomerism" ಎಂಬ ವಿಷಯ ವಾಗಿ ಸಾದರ ಪಡಿಸಿದ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ಬಂದಿತು.

ಭಾರತಕ್ಕೆ ಮರಳಿದ ಅನಂತರ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ೫೦ ವರುಷ ರಸಾಯನಶಾಸ್ತ್ರ ಕಲಿಸಿದರು ಮತ್ತು ಅದರಲ್ಲಿ ಸಂಶೋಧನೆ ಕೈಕೊಂಡರು. ಕರ್ನಾಟಕ ಹಾಗೂ

ಗುಜರಾತ್ ವಿಶ್ವವಿದ್ಯಾಲಯಗಳಲ್ಲಿ ರಸಾಯನ ಶಾಸ್ತ್ರದ ವಿಭಾಗವನ್ನು ಸ್ಥಾಪಿಸಿದ ಹೆಗ್ಗಳಿಕೆ ಇವರದು. ೧೯೫೯ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯದಿಂದ ನಿವೃತ್ತಿ ಹೊಂದಿದ ಅನಂತರ ಆಮಂತ್ರಣದ ಮೇರೆಗೆ ಮುಂಬೈಯ ಪಾರ್ಲೆ ಕಾಲೇಜ ಸೇರಿದರು. ಅಲ್ಲಿ ೨೫ ವರ್ಷ ರಸಾಯನಶಾಸ್ತ್ರದಲ್ಲಿ ಸಂಶೋಧನೆ ಮಾಡಿದರು.

ಅವರ ಐದು ದಶಕಗಳ ದೀರ್ಘ ಸಂಶೋಧನಾ ಕಾರ್ಯದಲ್ಲಿ ಅಚ್ಚಳಿಯದ ಸಂಶೋಧನೆ ಮಾಡಿದ ವಿಷಯ ಅಂದರೆ ಔಷಧೀಯ ರಸಾಯನಶಾಸ್ತ್ರ. ಕ್ಷಯರೋಗ, ಕುಷ್ಠರೋಗ, ಮಧುಮೇಹ ,ಮಲೇರಿಯಾ ರೋಗಗಳಿಗೆ ಪ್ರತಿಬಂಧಕ ಔಷಧಗಳನ್ನು ಶೋಧಿಸುವಲ್ಲಿ ಇವರು ಕೈಕೊಂಡ ಸಂಶೋಧನೆ ಬಹುಮುಖ್ಯವಾದದ್ದು. ಕುಷ್ಠರೋಗ ಚಿಕಿತ್ಸೆಗೆ ಉತ್ತಮ ಔಷಧವಾದ ಓಡ್ನೊಕಾರ್ಪಿಕ್ ಆಮ್ಲವನ್ನು ತಯಾರಿಸುವ ಹೊಸ ವಿಧಾನವನ್ನು ಶೋಧಿಸಿದರು. ರಾಸಾಯನಿಕ ಉದ್ದಿಮೆಗೆ, ವಿಶೇಷತಃ ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿಯ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಇವರ ಕೊಡುಗೆ ಅಪಾರ. ಇವರಿಂದ ತಮ್ಮ ಸಮಸ್ಯೆಗಳಿಗೆ ಸಮಾಧಾನ ಪಡೆದು ಉದ್ಧಾರವಾದ ರಾಸಾಯನಿಕ ಉದ್ದಿಮೆದಾರರ ಸಂಖ್ಯೆ ಊಹಿಸುವುದು ಕಷ್ಟ. ಆದರೆ ಯಾವುದಕ್ಕೂ ಹಣ ತೆಗೆದುಕೊಳ್ಳುತ್ತಿರಲಿಲ್ಲ. ಎಲ್ಲವೂ ಪುಕ್ಕಟೆ ಸಹಾಯ. ಇವರು ಅನೇಕ ಬಡವಿದ್ಯಾರ್ಥಿಗಳಿಗೆ ಹಣ, ಶುಲ್ಕ ಕೊಟ್ಟು ಸಹಾಯ ಮಾಡಿದ್ದೇ ಅಲ್ಲದೆ ಮನೆಯಲ್ಲಿ ಇಟ್ಟುಕೊಂಡು ಬಡವಿದ್ಯಾರ್ಥಿಗಳನ್ನು ಓದಿಸುತ್ತಿದ್ದುದುಂಟು.

ಹೆಚ್ಚಿನ ವ್ಯಾಸಂಗಕ್ಕಾಗಿಯೇ ಆಗಲಿ, ಕೆಲಸಕ್ಕಾಗಿಯೇ ಆಗಲಿ ನರಗುಂದ ಅವರನ್ನು ಕಂಡ ಆಸಕ್ತಿಯುಳ್ಳ ವಿದ್ಯಾರ್ಥಿಗಳು ಬರಿಗೈಯಿಂದ ಎಂದೂ ಬಂದಿಲ್ಲ. ವಿದ್ಯಾರ್ಥಿಯ ಕೆಲಸಕ್ಕಾಗಿ ಅವರು ಕಾಗದವನ್ನು ಯಾರಿಗೇ ಬರೆಯಲಿ ಅದು ಮಾನ್ಯವಾಗದೇ ಇದ್ದದ್ದು ಇಲ್ಲವೇ ಇಲ್ಲ. ನಾನು ಎಂಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾದ ಬಳಿಕ ಪಿಎಚ್‌ಡಿ ಮಾಡಬೇಕೆಂಬ ಇಚ್ಛೆಯಿಂದ ಅವರನ್ನು ಭೆಟ್ಟಿಯಾದೆ. ಮುಂಬೈ ವಿಶ್ವವಿದ್ಯಾಲಯದ ಕೆಮಿಕಲ್ ಟೆಕ್ನಾಲಜಿ ವಿಭಾಗದ ಆಗಿನ ಡೈರೆಕ್ಟರ್ ಆಗಿದ್ದ ಸುಪ್ರಸಿದ್ಧ ವಿಜ್ಞಾನಿ ಡಾ॥ ಬಿ.ಡಿ.ಟಿಳಕ ಅವರನ್ನು ಕಾಣಲು ಹೇಳಿ ಒಂದು ಕಾಗದ ಕೊಟ್ಟರು. ಇದನ್ನು ಓದಿದವರೇ ಡಾ॥ಟಿಳಕ ಅಂದರು: ''ಪ್ರೊ॥ ನರಗುಂದ ಅವರ ಶಿಫಾರಸು ತಂದಿರುವ ನಿನ್ನಂಥ ಯುವಕನಿಗೆ ನಾನು ಸಹಾಯ ಮಾಡಲೇಬೇಕು. ವಿದ್ಯಾರ್ಥಿವೇತನ ಸಿಗುವವರೆಗೆ Microanalytical Assistant ಕೆಲಸ ಖಾಲಿ ಇದೆ. ಸೇರಿಕೊ. ವಿದ್ಯಾರ್ಥಿವೇತನ ಸಿಕ್ಕನಂತರ ಪಿಎಚ್‌ಡಿ ಮಾಡುವಿಯಂತೆ''. ಕಾರಣಾಂತರಗಳಿಂದ ನನಗೆ ಅಲ್ಲಿ ಸೇರಿಕೊಳ್ಳಲಾಗಲಿಲ್ಲ. ಆದರೆ ಈ ಘಟನೆ ಡಾ॥ ನರಗುಂದ ಅವರ ವ್ಯಕ್ತಿತ್ವದ ಬಗ್ಗೆ ಭಾರತೀಯ ರಸಾಯನ ಶಾಸ್ತ್ರಜ್ಞರಿಗೆ ಇದ್ದ ಗೌರವಕ್ಕೊಂದು ನಿದರ್ಶನ.

ವಿದ್ಯಾರ್ಥಿಗೆ ಆಸಕ್ತಿ ಇಲ್ಲ ಎಂದು ಕಂಡು ಬಂದರೆ ಅಂಥವರ ಬಗ್ಗೆ ಅಷ್ಟೇ ನಿಷ್ಠುರವಾಗಿರುತ್ತಿದ್ದರು. ಐವತ್ತರ ದಶಕದಲ್ಲಿ ಧಾರವಾಡದಲ್ಲಿ ನರಗುಂದ ಅವರ ಮಾರ್ಗದರ್ಶನದಲ್ಲಿ ಎಂಎಸ್‌ಸಿ. (ಸಂಶೋಧನೆ) ವ್ಯಾಸಂಗ ಮಾಡಿ ಮೈಸೂರಿನ ಕಾಲೇಜೊಂದರಲ್ಲಿ ಪ್ರಾಧ್ಯಾಪಕಿಯಾಗಿದ್ದ ಮತ್ತು ಕೆಲಕಾಲ ಮೈಸೂರು ವಿಶ್ವ ವಿದ್ಯಾಲಯದ ಸೆನೇಟ ಸದಸ್ಯೆಯಾಗಿದ್ದವರೊಬ್ಬರು, ೧೯೭೭ರಲ್ಲಿ ಮುಂಬೈಗೆ ಹೋದಾಗ ನರಗುಂದ ಅವರನ್ನು ಭೆಟ್ಟಿಯಾಗಿ ಪಿಎಚ್‌ಡಿ ವ್ಯಾಸಂಗ ಮಾಡುವ

ಇಚ್ಛೆಯನ್ನು ವ್ಯಕ್ತಪಡಿಸಿದರು. ನರಗುಂದರಿಂದ ನನಗೆ ಕಾಗದ ಬಂತು. ಅದರಲ್ಲಿ ''ನನಗೆ ಪಿಎಚ್‌ಡಿ ಮಾರ್ಗದರ್ಶನ ಮಾಡಲು ಮಾನ್ಯತೆ ಇದೆಯಾ? ಈ ವ್ಯಾಸಂಗಕ್ಕೆ ನನ್ನ ಹತ್ತಿರ ವಿಷಯ ಇದೆಯೊ? ಬೇಕೊ? ಪ್ರಾಧ್ಯಾಪಕೆಗೆ ಸಹಾಯ ಮಾಡುವ ಮನಸ್ಸು ಇದೆಯೋ ಇಲ್ಲವೋ?'' ಇತ್ಯಾದಿ ನಾಲ್ಕಾರು ಪ್ರಶ್ನೆಗಳನ್ನು ಕೇಳಿದ್ದರು. ಒಡನೆ ಉತ್ತರ ಬರೆದೆ. ಕೆಲದಿನಗಳ ಅನಂತರ ಅವರಿಂದ ಕಾಗದ ಬಂತು. ''ಪ್ರಾಧ್ಯಾಪಕಿ ಬಂದು ನಿನ್ನನ್ನು ಭೆಟ್ಟಿಯಾಗಿದ್ದಾರೆಯೋ ಇಲ್ಲವೊ? ಬರದೇ ಇದ್ದರೆ ಅವರ ಬಗ್ಗೆ ಯೋಚನೆ ಮಾಡಬೇಡ ಏಕೆಂದರೆ ನೀನು ಕುದುರೆಯನ್ನು ನೀರಿಗೆ ಒಯ್ಯಬಹುದು, ಆದರೆ ಅದನ್ನೆಂದೂ ನೀರು ಕುಡಿಯಲು ಬಲವಂತಪಡಿಸಲಾರೇ'' ಎಂದು ಬರೆದಿದ್ದರು.

ನರಗುಂದರು ಹಣಕ್ಕಾಗಿ ಎಂದೂ ಹಂಬಲಿಸಿದವರಲ್ಲ. ಕರ್ನಾಟಕ ಕಾಲೇಜಿನಿಂದ ನಿವೃತ್ತಿ ಹೊಂದಿದ ಬಳಿಕ ಕರ್ನಾಟಕ ವಿಶ್ವ ವಿದ್ಯಾಲಯದ ರಸಾಯನಶಾಸ್ತ್ರ ವಿಭಾಗಕ್ಕೆ ಪ್ರಪ್ರಥಮ ಪ್ರಾಧ್ಯಾಪಕರನ್ನಾಗಿ ಇವರನ್ನು ಆಗಿನ ಕುಲಪತಿಗಳು ಆಗಿದ್ದ ಹುಲಕೋಟಿ ಅವರು ನೇಮಿಸಿದರು. ನೇಮಕಾತಿ ಮಾಡುವಾಗ ''ನಿಮಗೆ ಎಷ್ಟು ಸಂಬಳಬೇಕು?'' ಎಂದು ಕೇಳಿದರೆ ಅವರು ''ನನಗೆ ಅಜಮಾಸು ರೂ ೨೦೦ಪೆನ್ಷನ್ ಬರುತ್ತದೆ ನೀವು ರೂ ೨೦೦ ಕೊಟ್ಟರೆ ಸಾಕು'' ಎಂದು ಹೇಳಿದರಂತೆ. ''ನರಗುಂದ ಮಾಸ್ತರರು ವ್ಯಾವಹಾರಿಕರಲ್ಲ, ಪ್ರಾಧ್ಯಾಪಕನಿಗೆ ಕೇವಲ ೨೦೦ ಸಂಬಳ ಕೊಟ್ಟರೆ ನಮ್ಮ ವಿಶ್ವವಿದ್ಯಾಲಯದ ಮಾನ ಹೋಗುತ್ತದೆ'' ಎಂದು ನಗುತ್ತ ಅವರೇ ಸಂಬಳ ಹೆಚ್ಚಿಸಿದರಂತೆ. ಅವರು ತಮ್ಮ ಪ್ರತಿ ತಿಂಗಳ ಸಂಬಳವನ್ನು ವಿಭಾಗದ ತಮ್ಮ ಮೇಜಿನ ಕೀಲಿ ಇಲ್ಲದ ಡ್ರಾದಲ್ಲಿ ಇಡುತ್ತಿದ್ದರಂತೆ. ಅದರ ವ್ಯವಹಾರವನ್ನೆಲ್ಲ ವಿಭಾಗದ ಕಾರಕೂನ ಕಾಳೆ ಎನ್ನುವವರೆ ಮಾಡುತ್ತಿದ್ದರು ''ಪರಊರಿನಲ್ಲಿ ಕಾಲೇಜ ವ್ಯಾಸಂಗ ಮಾಡುತ್ತಿದ್ದ ಅವರ ಮಕ್ಕಳು ಹೆಚ್ಚಿಗೆ ಹಣ ಬೇಕಾದರೆ ನನಗೇ ಬರೆಯುತ್ತಿದ್ದರು'' ಎಂದು ಕಾಳೆ ನಮಗೆ ಹೇಳುತ್ತಿದ್ದರು. ಧಾರವಾಡಕ್ಕೆ ಬಂದಾಗ ವಾಸಕ್ಕೆಂದು ಮನೆಯನ್ನು ಕೊಂಡು ಕೊಂಡಿದ್ದರು. ಮುಂಬೈಗೆ ಹೋಗುವಾಗ ಹಳೆಯ ಮಾಲೀಕನನ್ನು ಕರೆಯಿಸಿ ''ಆಗ ಏನು ತಾಪತ್ರಯ ಇತ್ತೊ ಮನೆ ಮಾರಿದಿರಿ. ಈಗ ನಾನು ನಿಮಗೆ ಕೊಟ್ಟಷ್ಟು ಹಣ ಮಾತ್ರಕೊಟ್ಟು ಈ ಮನೆಯನ್ನು ಪರತ್ ಕೊಂಡುಕೊಳ್ಳಿರಿ'' ಎಂದು ಹೇಳಿದರಂತೆ! ಡಿ.ಸಿ. ಪಾವಟೆಯವರು ಕುಲಪತಿಗಳಾಗಿದ್ದ ದಿನಗಳು ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣಕಾಲ. ರಸಾಯನಶಾಸ್ತ್ರ ವಿಭಾಗದಲ್ಲಿ ಒಂದು ಕೆಲಸಕ್ಕಾಗಿ ನರಗುಂದ ಅವರ ಇಬ್ಬರು ವಿದ್ಯಾರ್ಥಿಗಳು ಅರ್ಜಿಸಲ್ಲಿಸಿದ್ದರು. ಇಬ್ಬರೂ ಅಷ್ಟೇ ಪ್ರತಿಭಾವಂತ ವಿದ್ಯಾರ್ಥಿಗಳು ಇಬ್ಬರಲ್ಲಿ ಯಾರೊಬ್ಬರನ್ನು ಆಯ್ಕೆ ಮಾಡಿದರೂ ಸರಿ, ಯಾರೊಬ್ಬರನ್ನು ಆಯ್ಕೆ ಮಾಡದಿದ್ದರೆ ತಪ್ಪು ಅನ್ನುವಂತಹ ಪರಿಸ್ಥಿತಿ. ಪಾವಟೆ ಅವರು ಒಬ್ಬನ ಹೆಸರನ್ನು ತೆಗೆದುಕೊಂಡು ''ಇವನನ್ನು ಆಯ್ಕೆ ಮಾಡೋಣವೆ?'' ಎಂದು ಕೇಳಿದರಂತೆ. ಆಗ ನರಗುಂದರು ''ಯಾರನ್ನು ಆಯ್ಕೆ ಮಾಡಬೇಕು ಅನ್ನುವ ಅಧಿಕಾರ ಇರುವುದು ಇಲ್ಲಿರುವ ವಿಷಯ ತಜ್ಞರಿಗೆ ಅಂದರೆ ನನಗೆ. ನಾನು ಆಯ್ಕೆ ಮಾಡಿದವನನ್ನು ನೇಮಿಸುವುದೂ ಅಥವಾ ಬಿಡುವುದು ಕುಲಪತಿಗಳಾದ ನಿಮ್ಮ ಅಧಿಕಾರ. ನಿಮ್ಮ ಅಧಿಕಾರವನ್ನು ಉಪಯೋಗಿಸಿ ಇಬ್ಬರನ್ನೂ ನೇಮಿಸಿರಿ'' ಎಂದು ಹೇಳಿದಾಗ ಪಾವಟೆಯವರು ನಗುತ್ತಾ ಒಪ್ಪಿಕೊಂಡರಂತೆ. ಇಬ್ಬರು ಮಹಾನ್ ವ್ಯಕ್ತಿಗಳು ತಮ್ಮ ಘನತೆಯನ್ನು ಕಾಪಾಡಿಕೊಂಡು ಪರಸ್ಪರರ ಘನತೆಯನ್ನು ಹೇಗೆ ಆಧರಿಸುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ನರಗುಂದರು ಅತಿಸರಳ ಜೀವಿಯಾಗಿದ್ದರು. ಮನೆಯಲ್ಲಿ ಟಿ.ವಿ., ರೇಡಿಯೊ,

ಆಧುನಿಕ ಆಸನ ಯಾವುವೂ ಇರಲಿಲ್ಲ. ಅವರು ಧರಿಸುತ್ತಿದ್ದುದು ಖಾದಿ ಬಟ್ಟೆ, ಇಸ್ತ್ರಿ ಇದ್ದರಾಯಿತು ಇರದಿದ್ದರೂ ಆಯಿತು, ಬಟ್ಟೆಗಳನ್ನು ದರ್ಜಿ ಅಂಗಡಿಯಲ್ಲೇ ಹೊಲಿಸಬೇಕೆಂದಿಲ್ಲ. ರಸ್ತೆಯ ಅಂಚಿನ ಸಿಂಪಿಗ ಆದರೂ ಆಯಿತು. ಕರ್ನಾಟಕ ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ ಡಾ॥ ಬಡಿಗೇರರು ನಾವು ಇವರ ವಿದ್ಯಾರ್ಥಿಯಾಗಿದ್ದಾಗ ಹೇಳಿದ ಘಟನೆ. ಒಂದು ಸಾರೆ ನರಗುಂದ ಕಾರ್ಯನಿಮಿತ್ತ ವಾಗಿ ಪುಣೆಗೆ ಹೋಗಬೇಕಾಗಿತ್ತು. ಧಾರವಾಡದ ರೇಲ್ವೆ ನಿಲ್ದಾಣದಲ್ಲಿ, ಅವರ ಶಿಷ್ಯ ಹಾಗೂ ಕಿರಿಯ ಅಧ್ಯಾಪಕರಾದ ಬಡಿಗೇರರು, ನರಗುಂದರನ್ನು ಬೀಳ್ಕೊಡಲು ಬಂದಿದ್ದರು. ನರಗುಂದರು ಮೊದಲನೆಯ ದರ್ಜೆ ಬೋಗಿಯನ್ನು ಹತ್ತುವಾಗ, ಹಮಾಲನೊಬ್ಬ ಅವರನ್ನು ತಡೆದು ''ಏ ಮುದುಕಾ ಇಳಿ ತಳಗ, ಬ್ಯಾರೆ ಡಬ್ಬಿಗೆ ಹೋಗು'' ಎಂದು ಹೇಳಿ ''ಬರ್ರಿ ಸಾಹೇಬ್ರ ನೀವು ಹತ್ತಬರ್ರಿ'' ಎಂದು ಸೂಟು ಬೂಟು ಧರಿಸಿದ್ದ ಬಡಿಗೇರರನ್ನು ಕರೆದನಂತೆ.

''ಅತಿಸಾಮಾನ್ಯನಂತೆ ತೋರುವ ಅಸಾಮಾನ್ಯ ವ್ಯಕ್ತಿ'' ಎಂದು ಮುಂಬೈ ವಿಶ್ವವಿದ್ಯಾಲಯದ ಪ್ರೊ॥ ಹಾಲಕರ ಅವರು ಡಾ॥ನರಗುಂದ ಅವರ ವ್ಯಕ್ತಿತ್ವದ ಬಗ್ಗೆ ಸಾರ ರೂಪದಲ್ಲಿ ಹೇಳಿದ್ದು ಅಕ್ಷರಶಃ ಸತ್ಯ. ಇಂಥ ಪ್ರಾತಃಸ್ಮರಣೀಯ ವ್ಯಕ್ತಿಯ ಅಗಾಧ ಸಾಧನೆಯನ್ನು ಗುರುತಿಸಿ ಅನೇಕ ಸತ್ಕಾರ ಸಮಾರಂಭಗಳು ಜರಗಿವೆ. ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ತನ್ನ ರಜತ ಮಹೋತ್ಸವದ ಸಮಾರಂಭದಲ್ಲಿ ವಿಶೇಷ ಮಾನಪತ್ರವನ್ನು ನೀಡಿ ತನ್ನನ್ನು ತಾನೇ ಗೌರವಿಸಿಕೊಂಡಿದೆ. ಸಂಶೋಧನಾ ಕ್ಷೇತ್ರದಲ್ಲಿ ಸಾಧಿಸಿದ ಅಸಾಧಾರಣ ಪ್ರತಿಭೆಯನ್ನು ಗುರುತಿಸಿ ೧೯೭೮ರಲ್ಲಿ ಮಹಾರಾಷ್ಟ್ರ ವಿಜ್ಞಾನ ಪರಿಷತ್ತು ಮತ್ತು ಮುಂಬೈ ವಿಶ್ವವಿದ್ಯಾಲಯ ಹಾಗೂ ಕಾಲೇಜು ಶಿಕ್ಷಕರ ಒಕ್ಕೂಟ ಅವರನ್ನು ಅಭಿನಂದಿಸಿ ಮಾನಪತ್ರವನ್ನು ನೀಡಿವೆ. ೧೯೮೧ರಲ್ಲಿ ಗುಜರಾತದ ಸರ್ದಾರ್ ವಲ್ಲಭಭಾಯಿ ಪಟೇಲ ವಿಶ್ವವಿದ್ಯಾಲಯ ವಿಶೇಷ ಘಟಿಕೋತ್ಸವವನ್ನು ಏರ್ಪಡಿಸಿ ನರಗುಂದರಿಗೆ ಡಾಕ್ಟರ್ ಆಫ್ ಸೈನ್ಸ್ ಎಂಬ ಪದವಿಯನ್ನು ಕೊಟ್ಟು ಸತ್ಕರಿಸಿತು. ೧೯೮೩ರಲ್ಲಿ ಮುಂಬೈ ಮಹಾನಗರಪಾಲಿಕೆ ಸಾರ್ವಜನಿಕ ಸತ್ಕಾರ ಸಮಾರಂಭ ಏರ್ಪಡಿಸಿ ''ಆದರ್ಶ ಶಿಕ್ಷಕ ಸಂಶೋಧಕ'' ಎಂಬ ಬಿರುದನ್ನು ನರಗುಂದರಿಗೆ ಪ್ರಧಾನಿಸಿತು. ಅದೇ ವರ್ಷ ಧಾರವಾಡದಲ್ಲಿಯೂ ಸಾರ್ವಜನಿಕ ಸನ್ಮಾನ ಆಯಿತು. ನರಗುಂದರು ಎಂದೂ ಪ್ರಚಾರ ಬಯಸಿದವರಲ್ಲ. ಅವರ ಹೆಸರಿನಲ್ಲಿ ಜರುಗಿದ ಅನೇಕ ಸಮಾರಂಭಗಳಲ್ಲಿ ಅವರು ಉಪಸ್ಥಿತರೇ ಇರುತ್ತಿರಲಿಲ್ಲವಂತೆ.

ಅವರು ನನಗೆ ಬರೆದ ಕೊನೆಯ ಕಾಗದದಲ್ಲಿ ''ಈಗ ನಾನು ಕಾಲೇಜಿಗೆ ಹೋಗುವುದು ಆಗುತ್ತಿಲ್ಲ. ಬಿಡಿಸಬೇಕಾದ ರಾಸಾಯನಿಕ ಸಮಸ್ಯೆಗಳು ಅನೇಕ ಇವೆ. ಕೈಗೆತ್ತಿಕೊಳ್ಳಬಲ್ಲ ನನ್ನ ವಿದ್ಯಾರ್ಥಿಗಳಿಗೆ ತಿಳಿಸುತ್ತಲಿದ್ದೇನೆ. ನೀನೂ ಮುಂಬೈಗೆ ಬಂದರೆ ಭೆಟ್ಟಿಯಾಗು'' ಎಂದು ಬರೆದಿದ್ದರು. ಅವರನ್ನು ಭೆಟ್ಟಿಯಾಗಬೇಕು ಅಂದುಕೊಂಡೇ ತಿಂಗಳುಗಳು ಕಳೆದುವು. ಅಷ್ಟರಲ್ಲಿ ಅವರು ನಮ್ಮನ್ನಗಲಿದ್ದರು. ಕೊನೆಯ ಉಸಿರಿನವರೆಗೂ ಸಂಶೋಧನಾ ಚಿಂತನೆಯನ್ನು ಮಾಡಿದ ನರಗುಂದ ಅವರು ನಿಜವಾಗಿಯೂ ವಿಜ್ಞಾನ ಯೋಗಿ ಆಗಿದ್ದರು.

ಗಣ್ಯನಾಗಿರುವುದತಿ ಮುಖ್ಯ ನಿಜ ಪೇಳುವೊಡೆ
ಮಾನ್ಯನಾಗಿರುವುದತಿಶಯ ಮುಖ್ಯ ಸಿದ್ಧಾರ್ಥ
ಗಣ್ಯದಲ್ ಬುದ್ಧನೋ ಬಹುಮಾನ್ಯ, ಮೀರುತ್ತ
ಗಣ್ಯತೆಯ ಮಾನ್ಯತೆಯನೇರೆಲೋ 'ಅತ್ರಿಸೂನು'

ಲಾರೆನ್‌ಳ ಕೊನೆಯ ಪ್ರಯತ್ನ

ಜಿ.ವೈದೇಹಿ
೩೫೭ 'ಪುನರ್ವಸು' ನವಿಲು ಮುಖ್ಯರಸ್ತೆ,
ಕುವೆಂಪು ನಗರ, ಮೈಸೂರು-೫೭೦೦೨೩

ಇಡೀ ಮಿದುಳು ಎರಡು ಭಾಗವಾಗಿದೆ. ಎಡ ಗೋಳಾರ್ಧ ಮತ್ತು ಬಲ ಗೋಳಾರ್ಧ. ಎಡ ಮಿದುಳು ಶರೀರದ ಬಲಭಾಗದ ಕ್ರಿಯೆಗಳನ್ನು ಬಲ ಮಿದುಳು ಎಡಭಾಗದ ಕ್ರಿಯೆಗಳನ್ನೂ ನಿಯಂತ್ರಿಸುತ್ತವೆ. ದುರದೃಷ್ಟವಶಾತ್ ಒಂದು ಗೋಳಾರ್ಧವು ದೋಷ ಪೂರಿತವಾದಲ್ಲಿ ಏನಾಗಬಹುದು? ಪ್ರಕೃತಿಯ ಚಮತ್ಕಾರಕ್ಕೆ ಸಾಕ್ಷಿಯಾಗಿ ಇಲ್ಲದೆ ಒಂದು ನೈಜ ಘಟನೆ

ಪ್ರಕಾಶಮಾನವಾದ ಬೆಳಕಿದ್ದ ಆಸ್ಪತ್ರೆಯ ಒಂದು ಕೊಠಡಿಯಲ್ಲಿ ಲಾರೆನ್ ಟೇಲರ್ ಮಲಗಿದ್ದ ಮಂಚದ ಬಳಿ ಡಾ|| ರೊನಾಲ್ಡ್ ಜಾಕೊಬ್‌ಸನ್ ಚಿಂತಾಕ್ರಾಂತನಾಗಿ ನಿಂತಿದ್ದ. ನಾಲ್ಕು ವರ್ಷದ ಲಾರೆನ್‌ಳಿಗೆ ಅಪಸ್ಮಾರ ಉಂಟಾಗಿ ಬಹಳ ಹೊತ್ತಿನಿಂದ ಅವಳ ಎಡಭಾಗ ಅದಿರುತ್ತಿತ್ತು. ಸೂಕ್ಷ್ಮ ವಿದ್ಯುತ್ ಸ್ಫೋಟಗಳನ್ನು ಉಂಟುಮಾಡುವ ಯಂತ್ರವನ್ನು ಅವಳ ಬಲ ಮಿದುಳಿಗೆ ಜೋಡಿಸಿದ್ದು ಅದರಿಂದ ಅಪಸ್ಮಾರದ ಪ್ರಮಾಣ ತಿಳಿಯುತ್ತಿತ್ತು. ಆದಿನ ಮೇ ೧೯೯೫ ರಂದು ನ್ಯೂಯಾರ್ಕ್ ರಾಜ್ಯದ ವೆಸ್ಟ್ ಚೆಸ್ಟರ್ ಕೌಂಟಿ ವೈದ್ಯಕೀಯ ಕ್ಷೇತ್ರದಲ್ಲಿ ದಾಖಲಾಗಿದ್ದ ಲಾರೆನ್ ಟೇಲರ್ ಬಳಿ ಅವಳ ತಾಯಿ ಡೊರೀನ್ ಕೂಡ ನಿಂತಿದ್ದಳು.

"ನಾನು ಇವಳಿಗೆ ಇನ್ನೇನನ್ನೂ ಮಾಡಲಾರೆ. ಇವಳಾಗಲೀ ಇವಳ ಕುಟುಂಬದವರಾಗಲೀ ಈ ರೀತಿ ಇರುವುದು ಬಲು ಶೋಚನೀಯ. ಶಸ್ತ್ರ ಚಿಕಿತ್ಸೆಯೇ ಅಂತಿಮ ಉಪಾಯ" ಎಂದು ಮಕ್ಕಳ ನರತಜ್ಞ ಜಾಕೊಬ್‌ಸನ್ ಹೇಳಿದ.

ಡೊರೀನ್ ನಡುಗಿದಳು. ಶಸ್ತ್ರ ಚಿಕಿತ್ಸೆಯ ಫಲಿತಾಂಶದ ಬಗ್ಗೆ ಆಕೆ ಮತ್ತು ಆಕೆಯ ಪತಿ ಜೋಸೆಫ್ ಆತಂಕಗೊಂಡರು. ಏಕೆಂದರೆ ಶಸ್ತ್ರಕ್ರಿಯಾ ವಿಧಾನ ಜೀವನಕ್ಕೆ ಅನುಚಿತವೂ ಅಸಮಂಜಸವೂ ಆದುದಾಗಿತ್ತು. ಆ ಶಸ್ತ್ರಚಿಕಿತ್ಸೆ 'ಮಿದುಳಿನ ಗೋಳಾರ್ಧದ ಕೊಯ್ತ' (Hemispherectomy) ಆಗಿತ್ತು. ಲಾರೆನ್‌ಳ ಅಪಸ್ಮಾರವನ್ನು ಪ್ರಚೋದಿಸುತ್ತಿದ್ದ ಆಕೆಯ ಬಲ ಗೋಳಾರ್ಧವನ್ನು ತೆಗೆದು ಹಾಕುವ ಶಸ್ತ್ರಕ್ರಿಯೆಯಾಗಿತ್ತು.

ಡೊರೀನ್ ಸ್ನೇಹಿತೆಯೊಬ್ಬಳ ನಾಲ್ಕು ವರ್ಷದ ಹೆಣ್ಣು ಮಗುವಿಗೆ 'ಮಿದುಳಿನ ಗೋಳಾರ್ಧ ಕೊಯ್ತ'ದ ಶಸ್ತ್ರಕ್ರಿಯೆಯಾಗಿ ಮರಣದಲ್ಲಿ ಕೊನೆಗೊಂಡಿತ್ತು. ಲಾರೆನ್‌ಳಿಗೆ ಶಸ್ತ್ರಕ್ರಿಯೆ ಯಶಸ್ವಿಯಾದರೂ ಇತರ ಪರಿಣಾಮಗಳ ಸಂಭವನೀಯತೆ ಬಲವಾಗಿತ್ತು. ಸೋಂಕು ತಗಲುವ ಸಾಧ್ಯತೆ, ರಕ್ತ ಹೆಪ್ಪುಗಟ್ಟುವಿಕೆ ಅಥವಾ ಪಾರ್ಶ್ವವಾಯು ಉಂಟಾಗುವ ಅಪಾಯವಿತ್ತು. ಅವಳ ಶರೀರದ ಎಡಭಾಗಕ್ಕೆ ಪಾರ್ಶ್ವವಾಯುವಾಗಿ ಅವಳ ವ್ಯಕ್ತಿತ್ವವೇ ಬದಲಾಗುವ ಅಥವಾ ಆಕೆಯಲ್ಲಿ ಮಾನಸಿಕ ದೌರ್ಬಲ್ಯವಾಗುವ ಸಂಭವವೂ ಇತ್ತು.

ಜಾಕೊಬ್‌ಸನ್ ಕೊಠಡಿಯಿಂದ ಹೊರ ಹೋದನಂತರ ಮೂವತ್ತರ ಡೊರೀನ್ ತನ್ನ ಪತಿ ಜೋನೊಂದಿಗೆ ದೂರವಾಣಿ ಮೂಲಕ ಮಾತಾಡಲು ಹೋದಳು. ತಮ್ಮ ಜೀವನದ ಕಠಿಣತಮ ನಿರ್ಧಾರವನ್ನು ಅವರು ಕೈಗೊಳ್ಳಬೇಕಿತ್ತು.

ನಾಲ್ಕು ವರ್ಷಗಳ ಹಿಂದೆ ಮೊದಲ ಮಗುವಿನ ಸ್ವಾಗತಕ್ಕಾಗಿ ನ್ಯೂಯಾರ್ಕ್

ಜೂನ್ ೯೮ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜಾನ್ ಪೆಕ್ಕನೆನ್‌ರವರ 'ಲಾರೆನ್ಸ್ ಲಾಸ್ಟ್ ಚಾನ್ಸ್' ಲೇಖನದ ಕನ್ನಡದ ಭಾವಾನುವಾದ.

ರಾಜ್ಯದ ಕಾರ್ಮೆಲ್ ಪಟ್ಟಣದಲ್ಲಿ ಟೇಲರ್ ಕುಟುಂಬದ ಮನೆಯನ್ನು ಸಜ್ಜುಗೊಳಿಸಲಾಗಿತ್ತು. ಹಣೆಯಮೇಲೆ ಕೆಂಪು ಮಿಶ್ರಿತ ನೇರಿಳೆ ಬಣ್ಣದ ಹುಟ್ಟುಮಚ್ಚೆಯ ಹೊರತಾಗಿ ಲಾರೆನ್ ಉಳಿದ ಮಕ್ಕಳಂತೆ ಆರೋಗ್ಯವಂತ ಮಗುವಾಗಿದ್ದಳು. ಆ ಮಚ್ಚೆಯು ಬಲಗಣ್ಣು ರೆಪ್ಪೆಯಿಂದ ಪ್ರಾರಂಭವಾಗಿ ಹಣೆಯ ಅಡ್ಡಗಲಕ್ಕೂ ಹರಡಿ ತಲೆಯ ಓಂಭಾಗದವರೆಗೂ ಇತ್ತು.

''ಅದನ್ನು ಪೋರ್ಟ್‌ವೈನ್ ಕಲೆ ಎನ್ನುವರು'' ಎಂದು ವೈದ್ಯ ''ಅದನ್ನು ಸೌಂದರ್ಯ ವರ್ಧಕ ಚಿಕಿತ್ಸೆಯ ಮೂಲಕ ಸುಲಭವಾಗಿ ತೆಗೆದುಹಾಕಬಹುದಾದರೂ ಒಮ್ಮೆ ನರತಜ್ಞರ ಸಲಹೆಯನ್ನು ಪಡೆಯುವುದು ಉಚಿತವೆಂದು ತಿಳಿಸಿದ.

ಟೇಲರ್ ದಂಪತಿಗಳು ಲಾರೆನ್‌ಳನ್ನು ನ್ಯೂಯಾರ್ಕಿನ ಲೇಸರ್ ಮತ್ತು ಚರ್ಮ ಚಿಕಿತ್ಸಾ ಕೇಂದ್ರದ ನಿರ್ದೇಶಕ ಡಾ॥ರಾಯ ಜೆರೊನಿಮಸ್ ಬಳಿ ಕರೆದುಕೊಂಡು ಹೋದರು. ಆ ಕಲೆಯನ್ನು ಹೋಗಲಾಡಿಸಬಹುದಾದರೂ ಅವಳ ಸೌಂದರ್ಯದ ಬಗ್ಗೆಗಿಂತ ಅವಳಿಗೆ ಬರಬಹುದಾದ ಕಣ್ಣು ಮತ್ತು ನರಗಳ ತೊಂದರೆ ಬಗ್ಗೆ ಆತಂಕವಾಗಬಹುದೆಂದು ತಿಳಿಸಿದ.

ಲಾರೆನ್‌ಗೆ ಬಹುಶಃ 'ಸ್ಟರ್ಜ್-ವೆಬರ್ ಸಿಂಡ್ರೋಮ್' ಎಂಬ , ಕಾರಣ ತಿಳಿಯದ, ಹುಟ್ಟಿನಿಂದ ಬರುವ ಕಾಯಿಲೆ ಇರಬಹುದೆಂದು ಜೆರೊನಿಮಸ್ ವಿವರಿಸಿದಾಗ ಡೊರೀನ್ ಮತ್ತು ಜೊ ದಿಗ್ಭ್ರಾಂತರಾದರು. ಸುಮಾರಾಗಿ ಇನ್ನೂರು ಮಕ್ಕಳಲ್ಲಿ ಒಂದು ಮಗುವಿಗೆ 'ಪೋರ್ಟ್ ವೈನ್ ಕಲೆ' ಇದ್ದು ಅವುಗಳಲ್ಲಿ ಮೂರನೇ ಒಂದು ಭಾಗದ ಮಕ್ಕಳಿಗೆ ಸ್ಟರ್ಜ್ ವೆಬರ್ ಸಿಂಡ್ರೋಮ್ ಬರುವ ಸಾಧ್ಯತೆ ಇದೆ.

ಮಿದುಳಿನ ಮೇಲ್ಪೈಯಲ್ಲಿ ಕಂಡುಬರುವ ಆಂಜಿಯೊಮಾಸ್ ಎಂಬ ಅಸಾಮಾನ್ಯ ರಕ್ತನಾಳಗಳು ಸ್ಟರ್ಜ್-ವೆಬರ್ ಸಿಂಡ್ರೋಮ್‌ಗೆ ಕಾರಣವಾಗಿವೆ. ಈ ರಕ್ತನಾಳಗಳು ಚರ್ಮದ ಮೇಲಿನ ಕಲೆಗೆ ಸಂಬಂಧಿಸಿವೆ. ದುರದೃಷ್ಟವೆಂದರೆ ಇಂತಹ ರಕ್ತನಾಳಗಳು ಆಕ್ಸಿಜನ್ ಮತ್ತು ಇತರ ಪೋಷಕಗಳಿರುವ ರಕ್ತಚಲನೆಗೆ ತಡೆಯುಂಟು ಮಾಡುತ್ತವೆ. ತತ್ಪರಿಣಾಮವಾಗಿ ಲಾರೆನ್‌ಗೆ ಅಪಸ್ಮಾರ ಕಾಣಿಸಿಕೊಂಡು ಮಾನಸಿಕ ಅಂಗವೈಕಲ್ಯವಾಗುತ್ತದೆ.

ಮುಂದಿನ ದಿನಗಳಲ್ಲಿ ಲಾರೆನ್ ವೈದ್ಯಕೀಯ ತಪಾಸಣೆಗೆ ಒಳಗಾದಳು. ಯಾವ ಪರೀಕ್ಷೆಯಲ್ಲೂ ಯಾವ ದೋಷವೂ ಕಾಣಲಿಲ್ಲ. ಆಗಿನಿಂದ ಟೇಲರ್ ದಂಪತಿಗಳು ಲಾರೆನ್‌ಳ ಚರ್ಮದ ಅಡಿಯಲ್ಲಿ ಹೆಪ್ಪುಗಟ್ಟಿದ್ದ ರಕ್ತನಾಳಗಳನ್ನು ನಾಶಮಾಡಿ ಕಲೆಯನ್ನು ಹೋಗಲಾಡಿಸುವ ಲೇಸರ್ ಚಿಕಿತ್ಸೆಯನ್ನು ಕೊಡಿಸಲು ಅವಳನ್ನು ತಿಂಗಳಿಗೊಂದು ಸಲ ಕರೆದುಕೊಂಡು ಹೋಗತೊಡಗಿದರು. ಕ್ರಮೇಣ ಕಲೆಯ ಬಣ್ಣ ತಿಳಿಯಾಯಿತು.

ಇದರಿಂದ ಡೊರೀನ್ ಮತ್ತು ಜೊ ಉತ್ತೇಜಿತರಾದರು. ಲಾರೆನ್‌ಗೆ ಸ್ಟರ್ಜ್-ವೆಬರ್ ಕಾಯಿಲೆ ಇಲ್ಲವೆಂದೇ ತಿಳಿದರು. ಒಂದು ಸಂಜೆ ಡೊರೀನ್ ತನ್ನ ಮಗುವನ್ನು ತನ್ನ ಕಾಲುಗಳ ಮೇಲೆ ಕುಣಿಸುತ್ತಾ ''ಈ ಪುಟ್ಟ ಹುಡುಗಿಗೆ ಏನಾದರೂ ದೋಷವಿರಲು ಹೇಗೆ ತಾನೇ ಸಾಧ್ಯ? ನನಗೇನೋ ಅವಳು ಸಂಪೂರ್ಣ ಆರೋಗ್ಯವಂತಳಾಗಿ ಕಾಣುತ್ತಾಳೆ'' ಎಂದಳು.

೧೯೯೧ ಆಗಸ್ಟ್ ೧೯ರಂದು ಡೊರೀನ್ ತನ್ನ ನಾಲ್ಕು ತಿಂಗಳ ಮಗುವನ್ನು ಅದೇ ತಾನೇ ಹಾಸಿಗೆಯ ಮೇಲೆ ಮಲಗಿಸಿದಳು. ಮಧ್ಯಾಹ್ನದ ಹೊತ್ತಿಗೆ ಮಗುವು ಅಳುವುದು

ಡೊರೀನ್‌ಗೆ ಕೇಳಿಸಿತು. ಮಲಗುವ ಕೋಣೆಗೆ ಧಾವಿಸಿ ಹೋದಾಗ ಲಾರೆನ್‌ಳ ಎಡಭಾಗ ಶಕ್ತಿಹೀನವಾಗಿ ಅವಳ ಕಣ್ಣುಗಳು ನಿಸ್ತೇಜವಾದಂತೆ ಕಂಡಿತು. 'ಲಾರೆನ್ ನಾನು ನಿನ್ನ ಅಮ್ಮ ನೋಡು' ಎಂದು ಡೊರೀನ್ ಆತಂಕದಿಂದ ಪಿಸುಗುಟ್ಟಿದಳು.

ಲಾರೆನ್ ತನ್ನ ಅಮ್ಮನನ್ನು ಗುರುತಿಸಿದ ಯಾವ ಸೂಚನೆಯೂ ಕಂಡು ಬರಲಿಲ್ಲ. ಅವಳ ಎಡಗೈ ಮತ್ತು ಎಡಗಾಲು ಅದಿರಲಾರಂಭಿಸಿತು. 'ಲಾರೆನ್‌ಗೆ ವಾಯು ಬಂದಿದೆ' ಎಂದು ಡೊರೀನ್ ಜೊನನ್ನು ಕೂಗಿಕೊಂಡಳು. ಲಾರೆನ್‌ಳನ್ನು ಕಾರಿನಲ್ಲಿ ಕರೆದುಕೊಂಡು ಆಸ್ಪತ್ರೆಗೆ ಹೊರಟಳು. ಅಲ್ಲಿ ವೈದ್ಯರು ಮಗುವಿನ ಅಪಸ್ಮಾರವನ್ನು ತಹಬಂದಿಗೆ ತಂದರು.

ಲಾರೆನ್ ಆಸ್ಪತ್ರೆಯಲ್ಲಿ ಎರಡು ವಾರಗಳಿದ್ದಳು. ಅವಳ ಮಿದುಳಿನಲ್ಲಿ ಬಿಳಿಪಟ್ಟೆಗಳಿರುವುದು ಕ್ಯಾಟ್ ಸ್ಕ್ಯಾನ್‌ನಿಂದ ಕಂಡು ಬಂತು. ಕ್ಯಾಲ್ಸಿಯಂ ಸಂಗ್ರಹಗೊಂಡಿದ್ದರಿಂದ ಈ ಬಿಳಿಪಟ್ಟೆಗಳಿದ್ದುವು. ಬಲ ಮಿದುಳಿನಲ್ಲಿ ಸ್ಟರ್ಜ್ ವೆಬರ್‌ನಿಂದಾದ ಗಾಯದ ಪರಿಣಾಮವೇ ಈ ಬಿಳಿಪಟ್ಟೆಗಳು.

ವೈದ್ಯರು ಅಪಸ್ಮಾರ ತಡೆಯುವ ಔಷಧ ಚಿಕಿತ್ಸೆಯನ್ನು ಅವಳಿಗೆ ಕೊಡಲಾರಂಭಿಸಿದರು. ಮುಂದಿನ ಹನ್ನೊಂದು ತಿಂಗಳಿನಲ್ಲಿ ಒಂದು ಸಲವೂ ಅವಳಿಗೆ ಅಪಸ್ಮಾರ ಉಂಟಾಗಲಿಲ್ಲ. ಅವಳು ಉತ್ಸಾಹ ತುಂಬಿದ ಮುದ್ದಾದ ಮಗುವಾಗಿದ್ದಳು. ಹದಿನಾರು ತಿಂಗಳಿಗೆ ನಡೆದು ಮಾತನಾಡತೊಡಗಿದಳು.

೧೯೯೨ರ ನವೆಂಬರ್‌ನಲ್ಲಿ ಲಾರೆನ್‌ಗೆ ಎರಡನೇ ಸಲ ಅಪಸ್ಮಾರ ಬಂದು ಉಸಿರಾಟವೇ ನಿಲ್ಲುವಂತಾಯಿತು. ಅಪಘಾತ ಮತ್ತು ತುರ್ತುವಿಭಾಗದ ವೈದ್ಯರಿಂದ ಅವಳ ಜೀವ ಉಳಿಯಿತು. ಮಿದುಳಿನಲ್ಲಿ ಕ್ಯಾಲ್ಸಿಯಮ್ ಇನ್ನೂ ಹೆಚ್ಚು ಸಂಗ್ರಹವಾಗಿರುವುದು ಹೊಸ ಕ್ಯಾಟ್ ಸ್ಕ್ಯಾನ್‌ಗಳಿಂದ ತಿಳಿಯಿತು.

ಒಂದೂವರೆ ವರ್ಷದ ಲಾರೆನ್‌ಳಿಗೆ ಕೆಲವು ತಿಂಗಳಿಗೊಮ್ಮೆ ಅಪಸ್ಮಾರ ಬರುತ್ತಿತ್ತು. "ಒಂದು ಕ್ಷಣ ನಾನು ಮತ್ತು ಜೊ ಅವಳ ಮೇಲಿನ ಭರವಸೆಯನ್ನು ಕಳೆದುಕೊಳ್ಳುತ್ತೇವೆ ಮರುಕ್ಷಣವೇ ನಮಗೆ ಹಿಂದಿರುಗಿ ಬರುತ್ತಾಳೆ. ಆಗ ಅವಳಿಗೆ ಏನೂ ಆಗಿಯೇ ಇಲ್ಲ ಎನ್ನುವಂತಿರುತ್ತದೆ.

ಅವಳ ಮೂರನೇ ಹುಟ್ಟು ಹಬ್ಬದ ದಿನ ಆ ಪುಟ್ಟ ಹುಡುಗಿಯು ತನ್ನ ತಲೆಯನ್ನು ತೋರಿಸುತ್ತಾ 'ನೋವು...ನೋವು.. ಎಂದು ಚೀತ್ಕರಿಸುತ್ತಾ ಹಣೆಯನ್ನು ನೆಲದಮೇಲೆ ಚಚ್ಚಿಕೊಂಡಳು. ತತ್‌ಕ್ಷಣವೇ ಅವಳನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಆಗಿನಿಂದ ಅಪಸ್ಮಾರ ಮೇಲೆ ಮೇಲೆ ಬರತೊಡಗಿತು. ಕೆಲವು ಸಲ ಕೆಲವೇ ದಿನಗಳ ಅಂತರದಲ್ಲಿ ಬರುತ್ತಿತ್ತು. ಮಕ್ಕಳ ತುರ್ತು ವಿಭಾಗದಲ್ಲಿ ಲಾರೆನ್ ಅನೇಕ ವಾರಗಳು ಕಳೆದಳು. ಕ್ರಮೇಣ ಈ ಅಪಸ್ಮಾರ ಲಾರೆನ್‌ಳ ಶರೀರದ ಮೇಲೆ ಪ್ರಭಾವ ಬೀರಿತು. "ಅವಳ ಬೆಳವಣಿಗೆ ಪ್ರತಿಗಾಮಿಸತೊಡಗಿದೆ. ನಿಲ್ಲಲೂ ಅವಳಿಗೆ ಕಷ್ಟವಾಗುತ್ತಿದೆ" ಡೊರೀನ್ ಜೋಗೆ ಹೇಳಿದಳು.

೧೯೯೫ರ ವಸಂತಋತುವಿಗೆ ಲಾರೆನ್‌ಗೆ ನಾಲ್ಕು ವರ್ಷಗಳು. ಅವಳ ಬೆಳವಣಿಗೆ ೧೮ ತಿಂಗಳ ಮಗುವಿನದರಷ್ಟು ಹಿಂದಕ್ಕೆ ಜಾರಿತ್ತು. ಮಾತನಾಡಲು ಆಗುತ್ತಿರಲಿಲ್ಲ. ಹಾಗೆ ಪ್ರಯತ್ನಪಟ್ಟರೂ ಒಂದೊಂದೇ ಅಕ್ಷರ ಹೊರ ಬರುತ್ತಿತ್ತು. ತನ್ನ ತಲೆ ಕಡೆ ತೋರಿಸುತ್ತಾ, "ನೋ.. ನೋ.." ಎಂದು ಹೇಳುತ್ತಿದ್ದಳು. "ಇನ್ನು ಮುಂದೆ ನನ್ನನ್ನು ಮಮ್ಮ ಎಂದು ಕೂಡ ಕರೆಯಲಾರಳು" ಡೊರೀನ್ ಸಂಕಟದಿಂದ ಡಾ॥ಜಾಕೊಬ್‌ಸನ್‌ಗೆ ಹೇಳಿದಳು.

ನಾಲ್ಕನೇ ವರ್ಷದ ಹುಟ್ಟು ಹಬ್ಬವಾದ ಒಂದು ತಿಂಗಳೊಳಗಾಗಿ ಮತ್ತೊಂದು ಸಲ ಅಪಸ್ಮಾರ ಬಂದು ಬಹಳ ಹೊತ್ತು ಬಾಧಿಸಿತು. ಆಗ ಅವಳನ್ನು ವೆಸ್ಟ್ ಚೆಸ್ಟರ್ ಕೌಂಟಿ ವೈದ್ಯಕೀಯ ಕ್ಷೇತ್ರಕ್ಕೆ ೧೯೯೩ರ ಮೇ ೧೩ರಂದು ಶನಿವಾರ ಸೇರಿಸಲಾಯಿತು. ಶಸ್ತ್ರಚಿಕಿತ್ಸೆಯ ಸಾಧ್ಯತೆ ಬಗ್ಗೆ ಡಾ॥ಜಾಕೊಬ್‌ಸನ್‌ನೊಂದಿಗೆ ಚರ್ಚಿಸಿದ ನಂತರ ಡೊರೀನ್‌ಗೆ ತನ್ನ ಆತಂಕವನ್ನು ಹಿಡಿದಿಟ್ಟುಕೊಳ್ಳಲಾಗದೆ ಜೋನನ್ನು ಕೂಗಿ ಕರೆದಳು. ''ಶಸ್ತ್ರಕ್ರಿಯೆ ಲಾರೆನ್‌ಳಿಗೆ ಏನಾದರೂ ಉಪಯೋಗವಾಗುತ್ತದೆಯೇ ಎಂದು ನೋಡಬೇಕಾಗಿದೆ'' ಎಂದಳು.

''ನನಗೆ ಅವಳನ್ನು ಕಳೆದುಕೊಳ್ಳಲು ಇಷ್ಟವಿಲ್ಲ ಹಾಗೂ ಅವಳು ಜೀವಂತವಿದ್ದೂ ನಿರ್ಜೀವದಂತಿರುವುದೂ ಸರಿಯಲ್ಲ'' ಎಂದು ಜೊ ಹೇಳಿದ.

''ನನಗೂ ಇಷ್ಟವಿಲ್ಲ ಆದರೆ ಈ ಕಾಯಿಲೆಯು ಅವಳನ್ನು ಕ್ಷಯಿಸುತ್ತಿದೆ'' ಡೊರೀನ್ ಹೇಳಿದಳು.

ಕೆಲವು ಕ್ಷಣಗಳು ಜೊ ಮೌನವಾಗಿದ್ದು, ''ಸರಿ ನೀನು ಹೇಳುವ ಹಾಗೆ ಶಸ್ತ್ರಕ್ರಿಯೆ ಮಾಡಿಸೋಣ'' ಎಂದು ಒಪ್ಪಿಗೆ ಕೊಟ್ಟ.

ಎರಡು ದಿನಗಳ ಅನಂತರ ದಂಪತಿಗಳು ವೆಸ್ಟ್ ಚೆಸ್ಟರ್ ವೈದ್ಯಕೀಯ ಕ್ಷೇತ್ರದ ಮಕ್ಕಳ ಮುಖ್ಯ ನರತಜ್ಞ ಡಾ॥ಆರ್ನೊ ಫ್ರೈಡ್‌ನನ್ನು ಭೇಟಿಯಾದರು. ಆ ವೈದ್ಯ ಈ ರೀತಿಯ 'ಮಿದುಳಿನ ಗೋಲಾರ್ಧ ಕೊಯ್ತ'ದ ಶಸ್ತ್ರಕ್ರಿಯೆಯನ್ನು ೧೪ ಮಕ್ಕಳಿಗೆ ಯಶಸ್ವಿಯಾಗಿ ಮಾಡಿದ್ದನಲ್ಲದೆ ಅವರೆಲ್ಲರೂ ಬದುಕುಳಿದಿದ್ದರು.

''ಮಿದುಳಿನ ಬಲಾರ್ಧವು ಲಲಿತಕಲೆಗಳ ಅಭಿರುಚಿಯ ಕೇಂದ್ರ. ಶಸ್ತ್ರಕ್ರಿಯೆಯ ಅನಂತರ ಲಾರೆನ್ ಸಂಗೀತ ಮತ್ತು ಇತರ ಕಲೆಗಳಲ್ಲಿ ಅಭಿರುಚಿಯನ್ನು ಕಳೆದುಕೊಳ್ಳುವಳೇ?'' ಅವಳು ಕೇವಲ ಯಂತ್ರಮಾನವನಂತಿರ ಬೇಕಾಗುವುದೇ?'' ಡೊರೀನ್ ತನ್ನ ಸಂಶಯಗಳೆಲ್ಲವನ್ನೂ ಡಾ॥ಫ್ರೈಡ್ ಮುಂದಿಟ್ಟಳು.

''ಹಾಗಾಗಲಾರದು. ಅವಳ ಬಲ ಮಿದುಳಿನಿಂದಾಗಿ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಅದನ್ನು ತೆಗೆದುಹಾಕಿದ ನಂತರ ಅವಳಲ್ಲಿ ಅಸಾಧಾರಣ ಪ್ರಗತಿಯನ್ನು ಕಾಣಬಹುದು. ಮಿದುಳಿನ ಕೋಟ್ಯಂತರ ನರಕೋಶಗಳು ಅದರಲ್ಲೂ ಮಕ್ಕಳಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಹೊಂದಿಕೊಳ್ಳುತ್ತವೆ ಮತ್ತು ಬದಲಿಸುತ್ತವೆ'' ಎಂದು ಫ್ರೈಡ್ ಭರವಸೆ ಕೊಟ್ಟನು.

''ಅಪಾಯದ ಮಟ್ಟವೇನು ?'' ಜೊ ಕೇಳಿದನು.

''ಅನಿಯಂತ್ರಿತ ಅಪಸ್ಮಾರ ಕಾಣಿಸಿಕೊಳ್ಳಬಹುದು. ಅರಿವಳಿಕೆ ಮತ್ತು ಸಾವು ಕೊನೆಯ ಅಪಾಯಗಳು''.

ಜೊನ ಕೊನೆಯ ಪ್ರಶ್ನೆ''ಲಾರೆನ್ ನಿಮ್ಮ ಮಗಳೇ ಆಗಿದ್ದರೆ ಈ ಶಸ್ತ್ರಕ್ರಿಯೆಗೆ ಅವಳನ್ನು ಒಳಪಡಿಸುತ್ತಿದ್ದಿರಾ ?''

''ಹೌದು ಖಂಡಿತವಾಗಿ'' ಫ್ರೈಡ್ ಉತ್ತರಿಸಿದ.

ಮೇ ೩೧ರ ಬೆಳಿಗ್ಗೆ ೭.೩೦ಕ್ಕೆ ಡೊರೀನ್ ಲಾರೆನ್‌ಳನ್ನು ಶಸ್ತ್ರಕ್ರಿಯಾ ಕೊಠಡಿಯ ಪಕ್ಕದ ಕೋಣೆಗೆ ಎತ್ತಿಕೊಂಡು ಹೋದಳು. ಅವಳನ್ನು ಒಂದು ಟ್ರಾಲಿಯಲ್ಲಿ ಮಲಗಿಸಲಾಯಿತು. ಡೊರೀನ್ ಅವಳನ್ನು ಬಾಗಿಲವರೆಗೆ ಹಿಂಬಾಲಿಸಿದಳು. ಮೃದುವಾಗಿ ಅವಳಿಗೆ ಒಂದು ಮುತ್ತುಕೊಟ್ಟು ''ನಾನು ನಿನ್ನನ್ನು ಅತಿಯಾಗಿ ಪ್ರೀತಿಸುತ್ತೇನೆ'' ಎನ್ನುತ್ತಾ ಅವಳನ್ನು ಬೀಳ್ಕೊಟ್ಟಳು. ಆಸ್ಪತ್ರೆಯ ಆ ವಾರದಲ್ಲಿ ನಿಂತಿದ್ದ ಜೊನ ಕಣ್ಣುಗಳು

ಒದ್ದೆಯಾಗಿದ್ದನ್ನು ಡೋರೀನ್ ಗಮನಿಸಿದಳು. ನಿರೀಕ್ಷಣಾ ಕೊಠಡಿಯೊಳಗೆ ಹೋಗುತ್ತಾ ''ಎಲ್ಲಾ ಸರಿಹೋಗಬಹುದು'' ಎಂದು ಸಾಂತ್ವನ ನೀಡಿದಳು.

ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ವೈದ್ಯರ ತಂಡ ಲಾರೆನ್‌ಳ ತಲೆಯ ಚರ್ಮವನ್ನು ಸುಲಿಯಲಾರಂಭಿಸಿತು. ಶಸ್ತ್ರಕ್ರಿಯಾ ಬೈರಿಗೆಯಿಂದ ಡಾ||ಫ್ರೈಡ್ ತಲೆಬುರುಡೆಯಲ್ಲಿ ಹಲವಾರು ರಂಧ್ರಗಳನ್ನು ಕೊರೆದನು. ಬುರುಡೆಯ ಮೇಲೆ ಬಲಭಾಗದಲ್ಲಿ ಹತ್ತು ಸೆಂಟಿಮೀಟರ್ ಅಗಲಕ್ಕೆ ಮೊಟ್ಟೆಯಾಕಾರವಾಗಿ ಒಂದು ಚೂರನ್ನು ಕತ್ತರಿಸಿ ತೆಗೆದನು.

ಅಗಾದ ಪ್ರಮಾಣದಲ್ಲಿ ಘಾಸಿಗೊಂಡ ಮೆದುಳಿನ ಅಂಗಾಂಶವನ್ನು ನೋಡಿ ದಿಗ್ಭ್ರಾಂತನಾದ. ಸಾಮಾನ್ಯವಾಗಿ ಬೂದು ಮತ್ತು ಬಿಳಿ ಬಣ್ಣದಲ್ಲಿರಬೇಕಾದ ಲಾರೆನ್‌ಳ ಬಲ ಮಿದುಳು ಸ್ಟ್ರಾಬೆರಿ ಹಣ್ಣಿನ ತಿರುಳಿನಂತೆ ಕೆಂಪಗಿತ್ತು. ಅಸಾಧಾರಣ ರಕ್ತನಾಳಗಳು ಸುಳಿಗಳಂತೆ ಮಿದುಳಿನ ಮೇಲ್ಮೈಯನ್ನು ಆವರಿಸಿದ್ದುವು. ಅಂಗಾಂಶ ಕ್ಯಾಲ್ಸಿಯಮ್ ಸಂಗ್ರಹದಿಂದ ಮೃದುವಾಗಿ ಕಲಸಿದ ಹಿಟ್ಟಿನಂತಿತ್ತು. ಪ್ರತಿಧ್ವನಿತ ತರಂಗಗಳ ತಪಾಸಣೆಯು ತೋರಿಸಿದ್ದಕ್ಕಿಂತಲೂ ಸ್ಥಿತಿಯು ಹೆಚ್ಚು ಬಿಗಡಾಯಿಸಿತ್ತು.

ಒಂದೊಂದು ಗೋಳಾರ್ಧವೂ ನಾಲ್ಕು ಹಾಲೆಗಳಾಗಿ ವಿಭಜಿಸಿದೆ. ಡಾ||ಫ್ರೈಡ್ ಲಾರೆನ್‌ಳ ಮಿದುಳನ್ನು ಒಂದರನಂತರ ಮತ್ತೊಂದು ಹಾಲೆಯಾಗಿ ಕತ್ತರಿಸಿ ತೆಗೆಯಬೇಕಿತ್ತು. ಆಲೋಚನೆ, ಜ್ಞಾಪಕ ಮತ್ತು ಕಲ್ಪನಾಶಕ್ತಿಗಳ ಕೇಂದ್ರವಾದ ಕಿವಿಯ ಹಿಂಭಾಗದ ಟೆಂಪೊರಲ್ ಹಾಲೆಯನ್ನು ಮೊತ್ತಮೊದಲು ತೆಗೆಯಬೇಕು.

ಶಸ್ತ್ರಕ್ರಿಯಾ ಸೂಕ್ಷ್ಮದರ್ಶಕದಿಂದ ಫ್ರೈಡನ ನೋಟವನ್ನು ಹದಿನೈದು ಮಡಿ ಹೆಚ್ಚಿಸಲಾಗಿತ್ತು. ಒಂದಕ್ಕೊಂದು ಹಾಲೆಗಳನ್ನು ಸೇರಿಸಿರುವ ನರತಂತುಗಳನ್ನು ಕತ್ತರಿಸಲು ಸೆಕೆಂಡಿಗೆ ಸಾವಿರಾರು ಸಲ ಕಂಪಿಸುವ ಚಾಕುವನು ಬಳಸಲಾಯಿತು. ಎಲೆಕ್ಟ್ರಾನ್‌ಗಳಿಂದ ಒಂದು ಗಣಕಯಂತ್ರಕ್ಕೆ ಜೋಡಿಸಲ್ಪಟ್ಟ ಗಾಯದ ಆಳ ನೋಡುವ ಶಸ್ತ್ರದಿಂದ ಫ್ರೈಡ್ ಲಾರೆನ್‌ಳ ಟೆಂಪೊರಲ್ ಹಾಲೆಯನ್ನು ಕೊರೆದ. ಮಿದುಳಿನ ಕಾಂಡ ಮತ್ತು ಬಲ ಕ್ಯಾರೊಟಿಡ್ ಅಪಧಮನಿ (artery)ಯನ್ನು ತಲುಪಿದ. ಒಂದೇ ಒಂದು ತಪ್ಪು ನಡೆಯೂ ಲಾರೆನ್‌ಳ ಜೀವಕ್ಕೆ ಗಂಡಾಂತರ ಒದಗಿಸುವುದಾಗಿತ್ತು.

ಕಂಪಿಸುವ ಚಾಕುವಿನಿಂದ ಒಂದೊಂದೇ ಮಿಲಿಮೀಟರ್‌ನಷ್ಟು ಮಿದುಳಿನ ಅಂಗಾಂಶವನ್ನು ನಾಶಗೊಳಿಸುತ್ತಾ ಹೋದ. ಅನಂತರ ಟೆಂಪೊರಲ್ ಹಾಲೆಯನ್ನು ಚಿಮುಟದಿಂದ ಎಚ್ಚರಿಕೆಯಿಂದ ಹೊರತೆಗೆದ. ಎದೆಬಡಿತದಲ್ಲಾಗುವ ಬದಲಾವಣೆ ಮಿದುಳಿನ ಕಾಂಡಕ್ಕೆ ಆಗುವ ಆಘಾತವನ್ನು ಸೂಚಿಸುವುದರಿಂದ ಫ್ರೈಡ್ ಆಗಾಗ ಲಾರೆನ್‌ಳ ಎದೆಬಡಿತವನ್ನೂ ಗಮನಿಸುತ್ತಿದ್ದ. ಅದು ಒಂದೇ ಸಮವಾಗಿತ್ತು. 'ಹಾಗೆಯೇ ಇರು ಲಾರೆನ್'' ಎಂದು ಮನಸ್ಸಿನಲ್ಲೇ ಹೇಳಿಕೊಂಡ.

ಜೊತೆ ಜೊತೆಗೇ ಕ್ಯಾರೊಟಿಡ್ ರಕ್ತನಾಳವನ್ನೂ ಮುಚ್ಚಿ ಮೊಹರು ಮಾಡಬೇಕಿತ್ತು. ಅದನ್ನು ಮುಂಚೆಯೇ ಕತ್ತರಿಸಿದಲ್ಲಿ ಮಿದುಳಿನಲ್ಲಿ ರಕ್ತಸ್ರಾವವಾಗಿ ಲಾರೆನ್ ಸಾಯುವ ಸಂಭವವಿತ್ತು. ''ಬಹಳ ನಿಧಾನ ವಾಗಿ ನಾವು ಅದನ್ನು ಹಾಲೆಯಿಂದ ಪ್ರತ್ಯೇಕಿಸಬೇಕು'' ಎಂದು ಫ್ರೈಡ್ ತಂಡಕ್ಕೆ ಹೇಳಿದ.

ಒಂದು ಗಂಟೆಯ ಕಾಲ ಶ್ರಮ ತೆಗೆದುಕೊಂಡ ಬಳಿಕ ಟೆಂಪೊರಲ್ ಹಾಲೆ ಯಿಂದ ಕ್ಯಾರೊಟಿಡ ರಕ್ತನಾಳವನ್ನು ಪೂರ್ತಿಯಾಗಿ ಬೇರ್ಪಡಿಸಿದ.

ಎರಡು ವಿದ್ಯುದ್ದ್ವಾರಗಳ ನಡುವೆ ಕಿಡಿಯುಂಟು ಮಾಡುವ ಆಯುಧದಿಂದ ಡಾ||ಫ್ರೈಡ್ ರಕ್ತನಾಳವನ್ನು ಬಂಧಿಸಿ ಮುಚ್ಚಿದ.

ಅನಂತರ ಅರಿವು ಮತ್ತು ಕಲ್ಪನಾ ಶಕ್ತಿಯ ಕೇಂದ್ರವಾದ ಪೆರೈಟಲ್ ಹಾಲೆಯನ್ನು ತೆಗೆದುಹಾಕಿ, 'ಎರಡಾಯಿತು. ಮತ್ತೆರಡು' ಎಂದ.

ಲಾರೆನ್‌ಳ ಹಿಂಭಾಗದ ಮಿದುಳಿನ ಫ್ರಾಂಟಲ್ ಹಾಲೆ ಮತ್ತು ಆಕ್ಸಿಪಿಟಲ್ ಹಾಲೆಗಳನ್ನು ತೆಗೆದುಹಾಕಿ ''ಬಲಗೋಳಾರ್ಧದ ಕೊಯ್ತ''ವನ್ನು ಮುಗಿಸಿದ.

ತಪಾಸಣೆ ಮತ್ತು ಮರುತಪಾಸಣೆಗಳಿಂದ ತನ್ನ ಕೆಲಸವನ್ನು ಪರಿಶೀಲಿಸಿಕೊಂಡ. ಸಾವಿರಾರು ರಕ್ತನಾಳಗಳನ್ನು ಕತ್ತರಿಸಿ ಮುಚ್ಚಿದ್ದ. ಅವುಗಳಲ್ಲಿ ಯಾವುದೊಂದು ಚಿಕ್ಕ ರಕ್ತನಾಳವನ್ನು ಕತ್ತರಿಸಿ ಹಾಗೆಯೇ ಬಿಟ್ಟಿದ್ದರೂ ಲಾರೆನ್‌ಳ ತಲೆಗೆ ರಕ್ತ ಸೋರಿ ಸಾವು ಉಂಟಾಗುತ್ತಿತ್ತು.

ಡೊರೀನ್ ತನ್ನ ಮಗಳನ್ನು ಶಸ್ತ್ರಕ್ರಿಯಾ ಕೋಣೆಗೆ ಬಿಟ್ಟುಬಂದ ಎಂಟು ಗಂಟೆಯ ತರುವಾಯ ಅಂದರೆ ಅಪರಾಹ್ನ ೩-೩೫ಕ್ಕೆ ಲಾರೆನ್‌ಳ ತಲೆಬುರುಡೆಯನ್ನು ಮುಚ್ಚಿ ಚರ್ಮವನ್ನು ಹೊಲಿದು ಶಸ್ತ್ರಚಿಕಿತ್ಸೆಯನ್ನು ಮುಗಿಸಲಾಯಿತು.

ನಿರೀಕ್ಷಣಾ ಕೊಠಡಿಯಲ್ಲಿದ್ದ ಟೇಲರ್ ದಂಪತಿಗಳನ್ನು ನೋಡಿ, ''ಶಸ್ತ್ರಕ್ರಿಯೆ ಚೆನ್ನಾಗಿ ನಡೆಯಿತು'' ಎಂದು ಫ್ರೆಡ್ ಹೇಳಿದ.

ಡೊರೀನ್ ಕಣ್ಣುಮುಚ್ಚಿ ಮನಸ್ಸಿನಲ್ಲಿಯೇ ದೇವರಿಗೆ ವಂದನೆ ಸಲ್ಲಿಸಿದಳು.

ಮರುದಿನ ಮಿದುಳಿನ ಸ್ಕ್ಯಾನ್‌ನಿಂದ ಬಲಭಾಗದಲ್ಲಿ ರಕ್ತ ಸೋರಿಲ್ಲದಿರುವುದು ತಿಳಿಯಿತು. ನಿರೀಕ್ಷಿಸಿದಂತೆಯೇ ಮಿದುಳಿನ ಬಲಗೋಳಾರ್ಧವಿದ್ದ ಜಾಗದಲ್ಲಿ ಮಿದುಳು ಬಳ್ಳಿದ್ರವ (Spinal fluid) ತುಂಬಿಕೊಳ್ಳತೊಡಗಿತ್ತು.

ಅದೇ ಸಂಜೆ ಫ್ರೆಡ್ ಮಕ್ಕಳ ತುರ್ತು ವಿಭಾಗದಲ್ಲಿದ್ದ ಲಾರೆನ್‌ಳನ್ನು ನೋಡಲು ಹೋದ. ಅವಳಿನ್ನೂ ಅರಿವಳಿಕೆಯ ಮಂಪರಿನಲ್ಲಿದ್ದರೂ ಅವಳ ಎಡಗೈ ಮತ್ತು ಎಡಗಾಲನ್ನು ಸ್ವಲ್ಪ ಅಲುಗಾಡಿಸಿದಳು. 'ಎಂತಹ ಅದ್ಭುತ !' ಫ್ರೆಡ್ ಮನಸ್ಸಿನಲ್ಲಿಯೇ ಉದ್ಗರಿಸಿದ. ''ಅವಳ ಎಡ ಶರೀರ ಕ್ರಿಯೆಗಳು ಎಡಭಾಗದ ಮಿದುಳಿಗೆ ಸ್ಥಳಾಂತರಗೊಳ್ಳುತ್ತಿವೆ. ಅವಳು ಚಲನೆಯನ್ನು ಬಹುಬೇಗ ಪಡೆಯುತ್ತಾಳೆ'' ಫ್ರೆಡ್ ಹೇಳಿಕೊಂಡ.

ಕೆಲವು ದಿನಗಳಾದ ಮೇಲೆ ಡೊರೀನ್ ತನ್ನ ಮಗಳ ಹಾಸಿಗೆ ಬಳಿ ಕುಳಿತು ಅವಳ ಕೈಯನ್ನು ಮೃದುವಾಗಿ ಹಿಡಿದುಕೊಂಡಳು. ಹೆಚ್ಚಿನ ಚುರುಕುತನ ಬೆಳೆಸಿಕೊಂಡಿದ್ದ ಲಾರೆನ್ ಬಾಯಿಂದ ಹೊರಬಂತು ''ಮಮ್ಮ''.

ತಾನು ತನ್ನ ಮಗಳಿಂದ ಏನೆಲ್ಲಾ ನಿರೀಕ್ಷಿಸಿದ್ದಳೋ ಅದನ್ನೆಲ್ಲಾ ಒಟ್ಟಾಗಿ ಆ ಒಂದೇ ಪದದಲ್ಲಿ ಡೊರೀನ್ ಕಂಡು ಕೊಂಡಳು. ಲಾರೆನ್‌ಳ ಮುಖವನ್ನು ತನ್ನ ಬೊಗಸೆಯಲ್ಲಿ ಹಿಡಿದು ಹರ್ಷದ ಕಂಬನಿಗರೆದಳು.

ಮುಂದಿನ ಕೆಲವೇ ವಾರಗಳಲ್ಲಿ ಲಾರೆನ್ ಅಪಸ್ಮಾರ ಬರುವ ಮುಂಚೆ ಇದ್ದಂತೆಯೇ ಲವಲವಿಕೆಯಿಂದ ಕೂಡಿದ ಉತ್ಸಾಹದ ಚಿಲುಮೆಯಾದಳು. ಅವಳ ಎಡ ಮಿದುಳು ಬಲಗೋಳಾರ್ಧದ ಕ್ರಿಯೆಗಳನ್ನು ಹೀರಿಕೊಂಡಂತೆಲ್ಲಾ ಅವಳ ಬುದ್ಧಿಮಟ್ಟ ತ್ವರಿತ ಗತಿಯಲ್ಲಿ ಏರಿತು. ಶಸ್ತ್ರಕ್ರಿಯೆಯಾದ ಮೂರು ವಾರಗಳ ನಂತರ ಲಾರೆನ್ ಇದುವರೆಗೆ ಆಡಿದ್ದಕ್ಕಿಂತ ಹೆಚ್ಚು ಮಾತನಾಡತೊಡಗಿದಳು.

ಈಗ ಲಾರೆನ್‌ಗೆ ಆರುವರ್ಷ. ಅವಳಲ್ಲಿ ಪವಾಡ ಸದೃಶ ಬೆಳವಣಿಗೆಯಾಗಿದೆ. ವಾಕ್ಯಗಳಲ್ಲಿ ಮಾತನಾಡುತ್ತಾಳೆ ಸ್ವತಃ ನಡೆಯುತ್ತಾಳೆ. ಅವಳ ಎಡಭಾಗ ಇನ್ನೂ ದುರ್ಬಲವಾಗಿದೆ. ಆದರೆ ಆಕೆಯ ವೈದ್ಯರು ಸತತವಾದ ಚಿಕಿತ್ಸೆಯಿಂದ ಅವಳ ಎಡಕೈಕಾಲುಗಳು ಸಬಲವಾಗುತ್ತವೆ ಎಂದು ನಂಬಿದ್ದಾರೆ. ಈ ಬೇಸಿಗೆಯ ತರುವಾಯ ಅವಳನ್ನು ನರ್ಸರಿ ಶಾಲೆಗೆ ಸೇರಿಸಬೇಕೆಂದು ಅವಳ ತಂದೆತಾಯಿಯರು ಯೋಚಿಸಿದ್ದಾರೆ.

ಅದ್ವಿತೀಯ ಕಥೆಗಾರ ಓ. ಹೆನ್ರಿ

ಎಚ್. ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೦, ಚಾಮುಂಡಿಪುರಂ
ಮೈಸೂರು-೫೭೦೦ ೦೪

ನೀವು ಓ.ಹೆನ್ರಿಯ ಹೆಸರನ್ನು ಕೇಳಿರಬಹುದು. ಅವನ ಕಥೆಗಳನ್ನು ಓದಿರಬಹುದು. 'ದಿ ಗಿಫ್ಟ್ ಆಫ್ ದಿ ಮೆಂಜೈ,' 'ಎನ್ ಅನ್‌ಫಿನಿಶ್ಡ್ ಸ್ಟೋರಿ, 'ಜಿಮ್ಮಿ ವೇಲಂಟೈನ್' ಮುಂತಾದ ಕಥೆಗಳನ್ನು ಓದಿ, 'ಎಷ್ಟು ಸೊಗಸಾದ ಕಥೆಗಳು ; ಕಥೆ ಹೇಳುವುದರಲ್ಲಿ ಎಂತಹ ಕೌಶಲ !' ಎಂದು ಉದ್ಗಾರ ಎತ್ತಿರಬಹುದು. ಅವನನ್ನು ಫ್ರಾನ್ಸಿನ ಮೊಪಾಸ, ರಷ್ಯಾದ ಚೆಕೋಫ್‌ರೊಂದಿಗೆ ಹೋಲಿಸಿರಬಹುದು. ಆದರೆ ಎಲ್ಲರಿಗೂ ಅವನ ಬಗ್ಗೆ ಹೆಚ್ಚು ತಿಳಿದಿಲ್ಲ, ಕೆಲವರಿಗಂತೂ ಅವನ ನಿಜವಾದ ಹೆಸರೂ ಗೊತ್ತಿಲ್ಲದೆ ಇರಬಹುದು. ಆದುದರಿಂದ ಈ ಲೇಖನ.

ಓ.ಹೆನ್ರಿ. ಅದು ಅವನ ನಿಜನಾಮಧೇಯವಲ್ಲ. ಅವನ ಹುಟ್ಟು ಹೆಸರು ವಿಲಿಯಂ ಸಿಡ್ನಿ ಪೋರ್ಟರ್. ಹುಟ್ಟಿದ್ದು-ನಾರ್ತ್ ಕೆರೋಲಿನಾದ ಗ್ರೀನ್ಸ್ ಬೊರೊವಿನಲ್ಲಿ, ಸೆಪ್ಟೆಂಬರ್ ೧೧,೧೮೬೨ ರಂದು. ಅವನ ತಾಯಿ ಕ್ಷಯದಿಂದ ಮಡಿದಾಗ ಅವನಿಗೆ ಕೇವಲ ಮೂರು ವರ್ಷ ತೆಳ್ಳಗೆ, ರಕ್ತ ಹೀನತೆಯಿಂದ ಬಳಲುತ್ತಿದ್ದ ಅವನು ಟೆಕ್ಸಾಸ್‌ನಲ್ಲಿ ಬೆಳೆದ. ಅಲ್ಲಿ ಅವನಿಗೆ ಕುರುಬರ, ದನಗಾಹಿಗಳ, ದನಗಳ್ಳರ ಪರಿಚಯವಾಯಿತು. ಅವನ ವಿದ್ಯಾಭ್ಯಾಸ ಹದಿನೈದನೇ ವರ್ಷಕ್ಕೇ ಕೊನೆಗೊಂಡರೂ, ಸ್ವಂತ ಶಾಲೆ ನಡೆಸುತ್ತಿದ್ದ ಅವನ ಅತ್ತೆ ಅವನಿಗೆ ಓದುವ, ಕಥೆ ಹೇಳುವ ಚಟ ಬೆಳೆಸಿಕೊಳ್ಳಲು ಉತ್ತೇಜನ ಕೊಟ್ಟಳು. ೧೮೮೪ರಲ್ಲಿ ಅವನು ಆಸ್ಟಿನ್‌ಗೆ ಹೋಗಿ, ಅಲ್ಲಿ ರಿಯಲ್ ಎಸ್ಟೇಟ್ ಏಜೆಂಟ್‌ನ ಬಳಿ ಕೆಲಸ ಮಾಡುತ್ತಾ, ಚರ್ಚಿನಲ್ಲಾಗುವ ಸಂಗೀತದಲ್ಲಿ ಪಾಲ್ಗೊಳ್ಳುತ್ತಿದ್ದ. ನಂತರ ಜನರಲ್ ಲ್ಯಾಂಡ್ ಆಫೀಸಿನಲ್ಲಿ ಡ್ರಾಫ್ಟ್ಸ್‌ಮನ್ ಆಗಿ ನಾಲ್ಕು ವರ್ಷ ಕೆಲಸ ಮಾಡಿದ. ಚಿತ್ರ ಬಿಡಿಸುವುದರಲ್ಲಿ ಆಸಕ್ತಿ ಇದ್ದ ಅವನನ್ನು ಕಂಡು ಅವನ ಸಹೋದ್ಯೋಗಿಗಳು ಬಿಲ್ ಪೋರ್ಟರ್ ಒಬ್ಬ ವ್ಯಂಗ್ಯ ಚಿತ್ರಗಾರನಾಗುತ್ತಾನೆ ಎಂದು ಭಾವಿಸಿದ್ದರು. ಆಸ್ಟಿನ್‌ನಲ್ಲಿದ್ದಾಗ, ತಾಯಿ ತಂದೆ ಕ್ಷಯದಿಂದ ಸತ್ತುಹೋಗಿದ್ದ ಒಬ್ಬಳನ್ನು ಬಿಲ್ ಪೋರ್ಟರ್ ಮದುವೆಯಾದ. ಅವರ ಚೊಚ್ಚಲು ಮಗು ಕೆಲವು ಕಾಲದಲ್ಲೇ ಅಸುನೀಗಿತು. ಆದರೆ ಎರಡನೇ ಮಗು, ಮಾರ್ಗರೆಟ್ ,ತಂದೆ ಬದುಕಿದ್ದಕ್ಕಿಂತಲೂ ಹೆಚ್ಚು ಕಾಲ ಬದುಕಿದ್ದಳು.

ಪೋರ್ಟರ್ ಹಾಸ್ಯಕ್ಕೆ ಮೀಸಲಾದ ಪತ್ರಿಕೆಯೊಂದನ್ನು ನಡೆಸಲು ಯತ್ನಿಸಿ ವಿಫಲನಾಗಿ ಬ್ಯಾಂಕೊಂದರಲ್ಲಿ 'ಟೆಲ್ಲರ್' ಆಗಿ ಕೆಲಸಕ್ಕೆ ಸೇರಿದ. ಅಲ್ಲಿದ್ದಾಗ ಲೆಕ್ಕದಲ್ಲಿ ಸಾವಿರ ಡಾಲರ್ ವ್ಯತ್ಯಾಸ ಕಂಡುಬಂದು ಅವನ ಕೆಲಸ ಹೋಯಿತು. ಪೋರ್ಟರ್ ಹ್ಯೂಸ್ಟನ್‌ಗೆ ಪಲಾಯನ ಮಾಡಿ ಅಲ್ಲಿ 'ಹ್ಯೂಸ್ಟನ್ ಪೋಸ್ಟ್' ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದ. ಸರ್ಕಾರ, ಬ್ಯಾಂಕಿನ ಹಣದ ದುರುಪಯೋಗದ ಬಗ್ಗೆ ಇವನ ವಿರುದ್ಧ ಕಟ್ಲೆ ಪ್ರಾರಂಭಿಸಿತು. ಪೋರ್ಟರ್ ನ್ಯೂ ಆರ್ಲಿಯನ್ಸ್ ಮೂಲಕ ಹೋಂಡುರಸ್‌ಗೆ ಹೊರಟು ಹೋದ. ಹೆಂಡತಿ ಕಾಯಿಲೆ ಬಿದ್ದಾಗ ಅವಳನ್ನು ನೋಡಲು ಆಸ್ಟಿನ್‌ಗೆ ಬಂದಾಗ ಅವನ ದಸ್ತಗಿರಿಯಾಯಿತು. ಅವನು ಪೊಲೀಸರ ಕಣ್ಣು ತಪ್ಪಿಸಿ ಹೋಂಡುರಸ್‌ಗೆ ಪಲಾಯನ ಮಾಡಿದನೆಂದೂ ಅವನ ವಿರುದ್ಧ ಆರೋಪ ಹೊರಿಸಲಾಯಿತು. ಕೊಲಂಬಸ್(ಓ ಹೈವೊ) ನಲ್ಲಿರುವ ಪ್ರಾಯಶ್ಚಿತ್ತ ಕಾರಾಗೃಹದ ಕಾವಲುಗಾರನ ಹೆಸರು ಆರಿನ್ ಹೆನ್ರಿ. ಅದನ್ನೇ ತನ್ನ

ಕಾವ್ಯನಾಮವನ್ನಾಗಿ ಅವನು ಮಾಡಿಕೊಂಡಿರಬಹುದು. ಕೊಲಂಬಸ್ ಜೈಲಿನಲ್ಲಿದ್ದಾಗ ಹೆನ್ರಿಗೆ ಓಡಾಡಲು, ಊರಿನಲ್ಲಿ ಅಡ್ಡಾಡಿ ಬರಲು ಸ್ವಾತಂತ್ರ್ಯವಿತ್ತು. ಜೈಲಿನಲ್ಲಿ ಅವನು ಔಷಧಿ ಅಂಗಡಿಯ ಗುಮಾಸ್ತನಾಗಿಯೂ ಕೆಲಸಮಾಡುತ್ತಿದ್ದ.

ಸೆರೆಮನೆ ಸೇರುವ ಮೊದಲೇ ಕಥೆಗಳನ್ನು ಬರೆಯುವುದಕ್ಕೆ ಆರಂಭಿಸಿದ್ದರೂ, ಅವನು ಮನಃಪೂರ್ವಕವಾಗಿ ಕಥೆಗಳನ್ನು ಬರೆಯಲು ತೊಡಗಿಸಿಕೊಂಡಿದ್ದು ಜೈಲಿನಲ್ಲಿದ್ದಾಗ. 'ಎಬ್ಲ್ಯಾಕ್‌ಜ್ಯಾಕ್ ಬಾರ್ಗೇನರ್', 'ದಿ ಎನ್ ಚಾಂಟೆಡ್ ಕಿಸ್' 'ದಿ ಡೂಪ್ಲಿಸಿಟಿ ಆಫ್ ಹಾರ್‌ಗ್ರೇವ್ಸ್' ಕಥೆಗಳನ್ನೊಳಗೊಂಡಂತೆ ಹತ್ತು ಕಥೆಗಳನ್ನು ಆತ ಜೈಲಿನಲ್ಲಿದ್ದಾಗ ಬರೆದ.

ಜೈಲಿನಿಂದ ಈಚೆ ಬಂದ ಮೇಲೆ ಓ ಹೆನ್ರಿ ಸುಮಾರು ಮೂರು ತಿಂಗಳು ಪಿಟ್ಸ್‌ಬರ್ಗ್‌ನಲ್ಲಿ ಒಂದು ಕೊಳಕು ಕೊಠಡಿಯಲ್ಲಿ ವಾಸಿಸುತ್ತಾ ನ್ಯೂಯಾರ್ಕ್‌ನ ಪತ್ರಿಕೆಗಳಿಗೆ ಕಥೆಗಳನ್ನು ಕಳುಹಿಸುತ್ತಿದ್ದ. ನ್ಯೂಯಾರ್ಕ್‌ಗೆ ತನ್ನ ಬಿಡಾರವನ್ನು ಬದಲಾಯಿಸಿದ್ದೇ ಆದರೆ ಸ್ಥಿರವಾದ ವರಮಾನ ಕೊಡುತ್ತೇವೆಂದು 'ಏನ್‌ಸ್ಲೀಸ್ ಮ್ಯಾಗಜೀನ್' ಸಂಪಾದಕರು ಹೇಳಿದಾಗ ಓ. ಹೆನ್ರಿ ೧೯೦೨ರಲ್ಲಿ ನ್ಯೂಯಾರ್ಕ್‌ಗೆ ಬಂದು ಕೇವಲ ಎಂಟು ವರ್ಷದಲ್ಲಿ ಕಥೆಗಾರನಾಗಿ ಅಪಾರ ಯಶಸ್ಸು ಗಳಿಸಿದ; ದೇಶದಲ್ಲೇ ಅತ್ಯಂತ ಹೆಚ್ಚು ಜನಪ್ರಿಯ ಕಥೆಗಾರನೆನಸಿಕೊಂಡ. ಅವನು ೧೯೦೪ರಲ್ಲಿ ಪ್ರಕಟಿಸಿದ 'ಕ್ಯಾಬೇಜಸ್ ಅಂಡ್ ಕಿಂಗ್ಸ್' ಕಥಾಸಂಕಲನದಲ್ಲಿ ೧೯ ಕಥೆಗಳೂ, ಎರಡನೇ ಪುಸ್ತಕ 'ದಿ ಫೋರ್ ಮಿಲಿಯನ್'' ನಲ್ಲಿ ೨೫ ಕಥೆಗಳೂ ಇವೆ. ಅವನ ಚಿರ ನೂತನ ಕಥೆಗಳಾದ 'ದಿ ಗಿಫ್ಟ್ ಆಫ್ ದಿ ಮೆಜೈ', 'ಎನ್ ಅನ್‌ಫಿನಿಷ್ಡ್ ಸ್ಟೋರಿ' 'ದಿ ಲವ್-ಫಿಲ್ಟರ್ ಆಪ್ ಇಕುಎನ್‌ಸ್ಟೀನ್', 'ದಿರೊಮಾನ್ಸ್ ಆಫ್ ಎ ಬಿಜಿ ಬ್ರೋಕರ್'. 'ದಿ ಫರ್ನಿಷ್ಡ್ ರೂಂ' ಮುಂತಾದ ಕಥೆಗಳಿವೆ. ಓ. ಹೆನ್ರಿ ಜಗತ್ಪ್ರಸಿದ್ಧ ಕಥಾಗಾರನೆನೆಸಿ ಕೊಂಡಿರುವುದು ಈ ಕಥೆಗಳಿಂದಲೇ 'ಹಾರ್ಟ್ ಆಫ್ ದಿ ವೆಸ್ಟ್' 'ದಿ ಜಂಟಲ್ ಗ್ರಾಫ್ಟರ್', 'ರೋಡ್ಸ್ ಆಫ್ ಡೆಸ್ಟಿನಿ' ಮತ್ತು 'ಆಪ್ಶನ್ಸ್' ಅವನ ಇತರ ಕಥಾ ಸಂಕಲನಗಳು.

ಓ. ಹೆನ್ರಿಯ ಕಥೆಗಳು ಅಷ್ಟು ಜನಪ್ರಿಯವಾಗಿರುವುದಕ್ಕೆ ಕಾರಣವೇನು? ಕಥಾವಸ್ತುವೇ? ಕಥೆ ಹೇಳುವ ಕಲೆಯಲ್ಲಿ ತೋರಿಸಿರುವ ಅತಿಶಯ ಕೌಶಲವೇ? ಜೀವನದಲ್ಲಿ ನಡೆಯಬಹುದಾದ ಸರಳ ಘಟನೆ, ಅದರ ಸುತ್ತ ಹೆಣೆದಿರುವ ವಿವರಣೆಯೇ ಅವನ ಕಥೆಗಳಲ್ಲಿನ ಕಥಾವಸ್ತು; ಮೂರು, ನಾಲ್ಕು ಪಾತ್ರಗಳು ಮಾತ್ರ. ಅವರೇನೂ ಅಸಾಧಾರಣ, ಅಸಾಮಾನ್ಯ ಜನರಲ್ಲ, ನಮ್ಮಂತೆ, ನಿಮ್ಮಂತೆ ಬಡವರು, ಮಧ್ಯಮ ವರ್ಗದವರು. ಅನಿರೀಕ್ಷಿತ ಮುದಕೊಡುವ ಅಂತ್ಯ ಅವನ ಕಥೆಗಳಲ್ಲಿ ಕಂಡು ಬರುವ ಹೆಗ್ಗಳಿಕೆ. ಅವನ ಬಹಳಷ್ಟು ಕಥೆಗಳಲ್ಲಿ ೧೯೧೦-೩೦ರವರೆಗಿನ ನ್ಯೂಯಾರ್ಕ್‌ಅನ್ನು ನೋಡಬಹುದು. ಹೌದು, ಈಗ ಅಂದಿನ ಗ್ರೀನ್‌ವಿಚ್ ವಿಲೇಜ್ ಇಲ್ಲ, ವಾಲ್ಡಾರ್ಫ್ ಆಸ್ಟೋರಿಯಾ ಹೋಟೆಲ್ ಇಲ್ಲ. ಆದರೆ ಅವನ ಪಾತ್ರಗಳು ಚಿರನೂತನ. ಮಾನವ ಸ್ವಭಾವ ತೀರ ಬದಲಾಯಿಸುವುದಿಲ್ಲವಷ್ಟೆ! ಬಡವರ ಬಗ್ಗೆ ಸಹಾನುಭೂತಿಯುಳ್ಳ, ಮಗುವಿನಂತಹ ಮನುಷ್ಯ ಅವನು.

ಅಮೆರಿಕನ್ ಸಾಹಿತ್ಯ ಅವನ ಕಥೆಗಳಿಂದ ಶ್ರೀಮಂತಗೊಂಡಿದೆ. ಸಣ್ಣಕಥೆಗಳ ಸಾಮ್ರಾಟ್ ಅವನು. ೧೯೩೦ರಲ್ಲಿ ಓ. ಹೆನ್ರಿ ದಿವಂಗತನಾದ. ಆದರೆ ಸಾಹಿತ್ಯ ಲೋಕದಲ್ಲಿ ಅವನ ಹೆಸರು ನಿತ್ಯ ಹಸುರು. ಎಲ್ಲಿಯವರೆಗೆ ಕ್ರಿಸ್‌ಮಸ್ ಹಬ್ಬ ಆಚರಣೆಯಲ್ಲಿರತ್ತದೋ ಅಲ್ಲಿಯವರೆಗೆ ಜನರು ಅವನ 'ದಿ ಗಿಫ್ಟ್ ಆಫ್ ದಿ ಮೆಜೈ' ಕಥೆಯನ್ನು ಓದಿ ಆನಂದಿಸುತ್ತಾರೆ.

ಈಸಬೇಕು ಇದ್ದು ಜೈಸಬೇಕು

ಜಯಂತಿ ಅಮೃತೇಶ್
೪೦ ಕೃತ್ತಿಕಾ, ಆರನೆಯ ಮುಖ್ಯ ರಸ್ತೆ
ಸರಸ್ವತೀಪುರ, ಮೈಸೂರು-೫೭೦ ೦೦೯

''ಪ್ರಪಂಚದಲ್ಲಿ ಎಲ್ಲದಕ್ಕೂ ನಿರೀಕ್ಷೆಯೂ, ಅಭಿಲಾಷೆಯೂ ಕೂಡಿದ ಭರವಸೆಯೇ ಕಾರಣ''-ಹೀಗೆ ಹೇಳಿದವರು ಮಾರ್ಟಿನ್ ಲ್ಯೂಥರ್. ''ಭರವಸೆಯೇ ನಮಗೆ ಈ ಪ್ರಪಂಚ ನೀಡಿರುವ ಅತ್ಯಂತ ಸಂತಸದಾಯಕ ಕೊಡುಗೆ'' ಹೀಗೆಂದವರು ಸಾಮ್ಯುಯಲ್ ಜಾನ್‌ಸನ್.

ಒಂದು ವಿಷಯವಂತೂ ಖಂಡಿತ. ಭರವಸೆಯಿಲ್ಲದೆ ಯಾವ ಸಮಾಜವೇ ಆಗಲಿ, ವ್ಯಕ್ತಿತ್ವವೇ ಆಗಲಿ ಜೀವಿಸಿರಲು ಸಾಧ್ಯವಿಲ್ಲ. ಭರವಸೆ ಎನ್ನುವ ಮಂತ್ರ ಮಾನವ ಜನಾಂಗ ಭದ್ರವಾಗಿ ಉಳಿಯಲು ಮತ್ತು ಕನಸುಗಳನ್ನು ನನಸು ಮಾಡಿಕೊಂಡು ಮುನ್ನಡೆಯಲು ಸಹಕರಿಸಿದೆ. ಭರವಸೆಯು ಸತ್ಯಕ್ಕೆ ವಿರುದ್ಧವೇನಲ್ಲ. ಆದರೆ ಇದು ತಿರಸ್ಕಾರ ಮತ್ತು ನಿರಾಶೆಗೆ ವಿರುದ್ಧ. ಯಾವ ದಾರಿಯೂ ಕಾಣದಿದ್ದಾಗ ಮಾನವಕುಲವು ಭರವಸೆಯ ಮರೆಹೊಕ್ಕಿದೆ. ಅಚೇತನವನ್ನು ಚೇತನಗೊಳಿಸಿದೆ ಮತ್ತು ಕಟ್ಟಡ ಕಟ್ಟಲು ಏನೂ ಇಲ್ಲದಿದ್ದಾಗಲೂ ಅದನ್ನು ಕಟ್ಟಲು ಸಹಕರಿಸಿದೆ.

ಭರವಸೆಯು ಮನುಕುಲದ ಒಂದು ಸಹಜ ಮತ್ತು ಆರೋಗ್ಯಕರ ಮನೋಭಾವ ''ಆಹ್ಲಾದಕರ ಹೃದಯ ಅತ್ಯುತ್ತಮ ಔಷಧಿ'' -ಎಂದು ಹೇಳುವ ನಾಣ್ಣುಡಿ ಉಂಟು. ಈ ಪುರಾತನವಾದ ಅರಿವು ಇತ್ತೀಚಿನ ದಿನಗಳಲ್ಲಿ ಒಂದು ನಿಶ್ಚಿತ ಸ್ಥಿತಿಯನ್ನು ತಲುಪಿದೆ. ಎರಡನೇ ಮಹಾಯುದ್ಧದ ಕಾಲದಲ್ಲಿ ಯುದ್ಧದ ಖೈದಿಗಳಲ್ಲಿ-ಬದುಕುವ ಆಸೆ ಇದ್ದವರೂ ಜೀವನದಲ್ಲಿ ಆಕಾಂಕ್ಷೆ ಇದ್ದವರೂ, ಯಾವುದೇ ಆಘಾತವೂ ಇಲ್ಲದೇ ಹೊರಬಂದರು. ಆದರೆ ಭರವಸೆಯಿಲ್ಲದೇ ಇದ್ದವರಿಗೆ ಇದು ಸಾಧ್ಯವಾಗಲಿಲ್ಲ.

ಮನೋವೈದ್ಯರಾದ ಫ್ಲಾಂಡರ್ಸ್ ಡನ್‌ಬಾರ್ ತಮ್ಮ ಇಬ್ಬರು ಹೃದ್ರೋಗಿಗಳ ಬಗ್ಗೆ ಈ ರೀತಿ ಬರೆದಿದ್ದಾರೆ. ಒಬ್ಬನು ''ಇನ್ನು ಎಲ್ಲ ನಿಮ್ಮ ಕೈಯಲ್ಲಿದೆ ಡಾಕ್ಟರ್'' ಎಂದಿದ್ದ. ಮತ್ತೊಬ್ಬನು ''ನಾನು ಹೇಗಾದರೂ ಮಾಡಿ ಗುಣಮುಖನಾಗಬೇಕು'' ಎಂದಿದ್ದ. ಮೊದಲನೆಯವ ಮೃತನಾದ, ಎರಡನೆಯವ ಗುಣಮುಖನಾದ.

ಪೆನ್ಸಿಲ್ವೇನಿಯಾದ ಪ್ರಾಧ್ಯಾಪಕರಾದ ಡಾ. ಮಾರ್ಟಿನ್ ಸೆಲಿಗ್‌ಮನ್‌ರವರು 'ಖಿನ್ನತೆ' ಮತ್ತು ಅದರಿಂದ ಲಕ್ಷಾಂತರ ಜನರ ಮೇಲಾಗುವ ಪರಿಣಾಮಗಳ ಬಗ್ಗೆ ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ. ಅವರು ಹೇಳುವುದೇನೆಂದರೆ ಖಿನ್ನತೆಯಿಂದ ನರಳುವ ಜನರು ಪ್ರತಿಯೊಂದು ಅಡಚಣೆಯನ್ನೂ ಅಸಾಧ್ಯವಾದ ಅಡ್ಡಗೋಡೆ ಎಂದೇ ಭಾವಿಸುತ್ತಾರೆ. ಯಾವುದೇ ವಿಧವಾದ ಪ್ರತಿಕ್ರಿಯೆಯೂ ಅಪ್ರಯೋಜಕ ಎನ್ನುತ್ತಾರೆ. ಏಕೆಂದರೆ ''ನಾವೇನು ಮಾಡುವುದೂ ಸಾಧ್ಯವಿಲ್ಲ''

೧೯೭೫ ಜನವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಆರಿಸಿದ. ಆರ್ ಡಲ್ಸ್ ವೈಟ್‌ಮನ್ ರವರ 'ದಿ ವೈಟಲ್ ಸ್ಪಾರ್ಕ್' ಲೇಖನದ ಭಾವಾನುವಾದ

-ನಾವು ಯಾವಾಗ ನಮ್ಮನ್ನು ಉತ್ತಮ ಜನಾಂಗ ಎಂದು ನಂಬುತ್ತೇವೆಯೋ ನಮ್ಮ ಜೀವನವನ್ನು ನಾವು ರೂಪಿಸಿಕೊಳ್ಳುತ್ತೇವೆಯೋ -ಆಗ ಸಫಲವಾದ ಚಿಕಿತ್ಸೆಯೂ ಪ್ರಾರಂಭವಾಗುತ್ತದೆ. ನಮ್ಮ ಬಗ್ಗೆ ನಾವಿಟ್ಟಿರುವ ಭರವಸೆ ನಾವು ಮತ್ತೊಬ್ಬರೊಂದಿಗೆ ಹೇಗೆ ವ್ಯವಹರಿಸುತ್ತೇವೆ ಎನ್ನುವುದನ್ನು ರೂಪಿಸುತ್ತದೆ.

ಎ.ಇ. ಹೌಸ್‌ಮನ್ ತಿಳಿದಿರುವಂತೆ ನಾವೆಲ್ಲರೂ ಈ ರೀತಿಯ ವ್ಯಕ್ತಿಯನ್ನು ಭೇಟಿ ಮಾಡಿರುತ್ತೇವೆ. ಅದೇನೆಂದರೆ, ವಿಪರೀತ ಅನಾರೋಗ್ಯದಿಂದ ನರಳುತ್ತಿರುವ ಮನಸ್ಸು ಕರುಣೆಯನ್ನು ತೋರಲಾರದಷ್ಟು ಅಸಂತುಷ್ಟವಾಗಿರುತ್ತದೆ. ಭರವಸೆಯಿಂದ ಕೂಡಿರುವ ವ್ಯಕ್ತಿ ಮತ್ತೊಬ್ಬ ಮನುಷ್ಯನನ್ನು ಅದೇರೀತಿ ಇರುವನೆಂದು ಭಾವಿಸುತ್ತಾನೆ ಮತ್ತು ಆರೀತಿ ಇರಲು ಸಹಾಯ ಹಸ್ತವನ್ನೂ ನೀಡುತ್ತಾನೆ.

ನನಗೆ ತಿಳಿದ ಒಬ್ಬ ವ್ಯಕ್ತಿಗೆ ಕುಡುಕ ಹೆಂಡತಿಯಿದ್ದಳು ಮತ್ತು ಆಕೆ ಆತನನ್ನು ಪದೇ ಪದೇ ನಿರಾಶೆಗೊಳಿಸುತ್ತಿದ್ದಳು. ಆದರೆ ಆತನು ಭರವಸೆಗುಂದಲಿಲ್ಲ. ಒಂದು ರಾತ್ರಿ ಆಕೆ ತಮ್ಮ ಹಳೆಯ ಸ್ನೇಹಿತರುಗಳ ಎದುರಿನಲ್ಲಿ ಆತನನ್ನು ಅವಮಾನಿಸಿದಳು. ಅನಂತರ ಕಣ್ಣೀರು ಹಾಕಿದಳು. ''ನೀನೇಕೆ ನನ್ನನ್ನು ಬಿಟ್ಟುಬಿಡುವುದಿಲ್ಲ?'' ಎಂದು ಭೋರೆಂದು ಅತ್ತಳು. ಅದಕ್ಕೆ ಅವನು ನನಗೊಬ್ಬ ಸುಂದರವಾದ ವ್ಯಕ್ತಿಯ ಪರಿಚಯವಿದೆ. ಆಕೆ ಈಗಲೂ ಇರುವಳೆಂದೇ ನಾನು ನಂಬುತ್ತೇನೆ'' ಎಂದ. ಆಕೆ ನಿಜವಾಗಲೂ ಗುಣಮುಖಳಾದಳು.

ಆದರೆ ಈ ಭರವಸೆ ಪ್ರತಿದಿನವೂ ನಮ್ಮನ್ನು ಮೋಸಗೊಳಿಸುತ್ತಿಲ್ಲವೆ? ಅನೇಕರಿಗೆ ಭರವಸೆ ಕತ್ತಲೆಯಲ್ಲಿ ಶಿಳ್ಳೆಹಾಕಿದಂತಿಲ್ಲವೆ? ಇದಕ್ಕೆಲ್ಲ ಯಾವಾಗಲೂ ನಾವು ನಮಗೆ ತಿಳಿದದ್ದನ್ನು ಹೇಳಬೇಕಾಗುತ್ತೆ.

ಕಷ್ಟಗಳ ವಿರುದ್ಧ ಭರವಸೆ ಇರಬೇಕು'' ಜೀವನದಲ್ಲಿ ಆರು ಸರಿ ಇರುವುದಿಲ್ಲ ಒಂದು ಸರಿಹೋಗಬಹುದು. ಇದು ಯಾವಾಗಲೂ ಹಾಗೆಯೇ. ಜೀವನವು ಉದ್ದಕ್ಕೂ ಕತ್ತಲೆಯೊಂದಿಗೆ ಬೆಳಕಿನ,ಸ್ಪರ್ಧೆ. ದುಃಖದೊಂದಿಗೆ ಸಂತಸದ ಸ್ಪರ್ಧೆ; ಆದರೂ ಪ್ರತಿಸಲವೂ ನಾವೆಲ್ಲರೂ ಭರವಸೆಯಿಂದ ಮುನ್ನಡೆಯುತ್ತೇವೆ.

ಏತಕ್ಕಾಗಿ ? ಬಹುಶಃ ಮನುಷ್ಯನಿಗೆ ಭರವಸೆಯು ಪ್ರಕೃತಿದತ್ತವಾಗಿ ಬಂದಿದ್ದಾಗಿರಬೇಕು. ಏಕೆಂದರೆ ಹೇಗೋ ನಾವು ಪ್ರತಿ ಮುಂಜಾನೆಯೂ ಹೊಸ ಮನುಷ್ಯರಾಗುತ್ತೇವೆ. ಪ್ರತಿ ರಾತ್ರಿಯೂ ಕತ್ತಲೆಯಿಂದ ಬೆಳಕಿನೆಡೆಗೆ ಪಯಣಿಸುತ್ತೇವೆ.

ಈ ಸಮಯದಲ್ಲಿ ನನಗೆ ಸಂಕಟಗಳಿಂದ ಅಸ್ತವ್ಯಸ್ತನಾದ ಒಬ್ಬ ಮನುಷ್ಯನ ನೆನಪು ಬರುತ್ತದೆ. ಆತನ ಹೆಂಡತಿ ಪರಪುರುಷನೊಡನೆ ಓಡಿಹೋದಳು-ಆತನ ಮಗು ವಿಶೇಷವಾಗಿ ನಿಯುಕ್ತವಾದ ಶಾಲೆಯಲ್ಲಿ ಓದುತ್ತಿತ್ತು, ಅದು ಶಕ್ತಿಗುಂದಿಸಿರುವ ಖಾಯಿಲೆಯಿಂದ ನರಳುತ್ತಿತ್ತು. ಕಡೆಯದಾಗಿ ಆತನ ಮನೆ ಬೆಂಕಿಯ ಅನಾಹುತಕ್ಕೆ ಈಡಾಗಿತ್ತು. ಆತ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ. ಆದಗೆ ಆತ್ಮಹತ್ಯೆಗೆ ಪ್ರಯತ್ನಿಸಿದ ಮರುದಿನ ತನ್ನ ಸ್ನೇಹಿತನೊಡನೆ ಹೇಳಿದ್ದೇನೆಂದರೆ ''ಇದು ಅದೆಷ್ಟು ಸುಂದರವಾದ ಮುಂಜಾನೆ ? ನಾನು ಮತ್ತೆ ನನ್ನ ಮನೆಯನ್ನು ಕಟ್ಟುತ್ತೇನೆ''-ಎಂದ. ಆತನಲ್ಲಿ ಮತ್ತೆ ಜೀವನಚೇತನ ಬೆಳಗಿತ್ತು.

ಭರವಸೆ ಅತ್ಯಂತ ಸಹಜವಾದ ಮನೋಭಾವ; ಬೀಜದಿಂದ ಸಸಿ ಬರುವಂತೆ,

ಪೂರ್ವದಲ್ಲಿ ಸೂರ್ಯನು ಉದಯಿಸುವಂತೆ. ಭೂಮಿ, ಆಕಾಶ, ಸಮುದ್ರ ಮೊದಲಾದ ಎಲ್ಲ ಜೀವಂತ ತಥ್ಯಗಳಲ್ಲಿಯೂ ಭರವಸೆ ತನ್ನ ಮುಂದ್ರೆಯನ್ನೊತ್ತಿದೆ. ಜೀವಕೋಶಗಳ ವಿಭಜನೆಯಾಗುತ್ತದೆ; ಹೂವು ಅರಳುತ್ತದೆ; ಮರದಲ್ಲಿ ಎಲೆಗಳು ಹುಟ್ಟುತ್ತವೆ; ಪ್ರಾಣಿಗಳಲ್ಲಿ ಸಂತಾನೋತ್ಪತ್ತಿಯಾಗುತ್ತದೆ ಮತ್ತು ಅವು ತಮ್ಮ ಎಳೆಯ ಮರಿಗಳನ್ನು ರಕ್ಷಿಸಿಕೊಳ್ಳುತ್ತವೆ. ಎಷ್ಟೇ ಸಹಜವೂ ಮುಖ್ಯವೂ ಆದರೂ ನಾವು ಕೆಲವು ಸಲ ಭರವಸೆಯನ್ನು ಕಳೆದುಕೊಳ್ಳಬಹುದು. ನಮ್ಮಲ್ಲಿ ಅನೇಕರಿಗೆ ಜೀವನ ಬೆಳೆಯುತ್ತಾ, ಆಯುಷ್ಯ ಕ್ಷೀಣಿಸಿದಂತೆ ಭರವಸೆ ನಶಿಸುತ್ತಾ ಹೋಗುತ್ತದೆ. ನಮಗೆ ಭರವಸೆಯೊಂದಿಗೆ ಮುನ್ನಡೆಯಲು ಹೇಳಿಕೊಡಬಹುದು ಅಥವಾ ಭರವಸೆಯನ್ನು ಮತ್ತೆ ನಮ್ಮದಾಗಿಸಲು ಹೇಳಿಕೊಡಬಹುದು.

ಹೌದು; ಇದು ಖಂಡಿತವಾಗಿಯೂ ಸಾಧ್ಯ. ಸಂಕ್ಷಿಪ್ತವಾಗಿ ಹೇಳುವುದಾದರೆ ಭರವಸೆಯು ನಮ್ಮ ಜೀವನದ ಧಾರೆಯಲ್ಲಿಯೇ ಅಡಗಿದೆ. ವಿಶೇಷವಾದ, ಅಡ್ಡಿ ಮಾಡುವ ಅಡಚಣೆಗಳಿಂದ ಹೊರಬರಲು ಭರವಸೆಯು ಸಹಜವಾಗಿ ಸಹಾಯ ಮಾಡುತ್ತದೆ.

ಇಲ್ಲಿ ಕೆಲವು ಉದಾಹರಣೆಗಳಿವೆ.

ಆ ಕ್ಷಣಕ್ಕಾಗಿ ಭರವಸೆ ಇಡು :- ಸಾಕಷ್ಟು ಧೈರ್ಯಶಾಲಿಗಳಾಗದೇ ಇದ್ದರೆ ನಾವು ಭವಿಷ್ಯತ್ ಕಾಲಕ್ಕೆ ಹೆದರುತ್ತೇವೆ. ಈ ಅನುಭವವಾದಾಗ ವರ್ತಮಾನಕ್ಕೆ ಹೆಚ್ಚು ಗಮನ ಕೊಡಬೇಕು. ಮಾನಪ್ರಿಯರು ದಿನದಲ್ಲಿ ಒಮ್ಮೆ ಶಾಂತಚಿತ್ತರಾಗಿರಲು ಪ್ರಯತ್ನಿಸಬೇಕು. ಹತಾಶರಾದವರು ಕಡೆಯಪಕ್ಷ ಒಂದು ದಿನಕ್ಕಾಗಿಯಾದರೂ ಭರವಸೆಯಿಂದ ಕಾಯಬೇಕು. ಧೈರ್ಯ ತಂದುಕೊಳ್ಳುವುದಕ್ಕಾಗಿ ಶ್ರಮಿಸಬೇಕು, ಮುಂದಿನ ಕ್ಷಣದ ಸೌಂದರ್ಯಕ್ಕಾಗಿ ಕಾಯಬೇಕು. ಉತ್ತಮವಾದ ಆಹಾರ, ನಿದ್ರೆ, ಪುಸ್ತಕ, ಚಲನಚಿತ್ರ ಇವುಗಳಿಗಾಗಿ ಕಾಯಬೇಕು. ಬೇರುಗಳನ್ನು ವರ್ತಮಾನ ಕಾಲದಲ್ಲಿ ಹೂತು ಭವಿಷ್ಯತ್ತಿನ ನಾಳೆಯ ಶಕ್ತಿಗಾಗಿ ಕಾಯಬೇಕು.

ಕಾಯಕಕ್ಕೆ ಸಿದ್ಧನಾಗು :-

ಒಬ್ಬ ಅಪರಿಚಿತ ನನಗೆ ಬರೆದಿದ್ದುದೇನೆಂದರೆ, ''ಬೇರೆದಾರಿಯೇ ತೋರದಿದ್ದಾಗ ನಾನು ಏನನ್ನಾದರೂ ಮಾಡುತ್ತೇನೆ'', ನಿರಾಶೆಯಲ್ಲಿ ಮುಳುಗಿರುವವರಿಗೆ ಇದೊಂದು ಉಪದೇಶ. ಸರಿಯಾದ ಮಾರ್ಗಕ್ಕೆ ಇದು ಒಂದು ಹೆಜ್ಜೆ. ಚಾರ್ಲಸ್ ಮೆಕೇಬ್ ಹೇಳಿದಂತೆ ಈ ಪ್ರಪಂಚದ ನಿಜವಾದ ಒಂದು ಪಾಪಕರ್ಮವೆಂದರೆ ಹೋರಾಟವಿಲ್ಲದೇ ಇರುವುದು ಮತ್ತು ನಮ್ಮ ಸ್ವಭಾವದ ಪೂರ್ಣ ಪರಿಚಯ ನಮಗೇ ಅರಿವು ಇಲ್ಲದೇ ಇರುವುದು. ಇವೆಲ್ಲವನ್ನೂ ನಾವು ಓಡಿಸಿದಲ್ಲಿ ನಮ್ಮನ್ನು ನಾವು ಬದಲಾಯಿಸಿಕೊಳ್ಳಬಹುದು.

ಭರವಸೆಯಲ್ಲಿ ನಂಬಿಕೆ ಇಡು:-

ಅಶುಭದ ಪ್ರತೀಕ್ಷೆ ಮಾಡುವವರೆಲ್ಲರಿಗೂ ಸತ್ಯದಮೇಲೆ ಪೂರ್ಣ ಅಧಿಕಾರವಿದೆ ಎಂದು ನಂಬಬೇಡಿ. ಈ ಜನರು 'ಸಂದೇಹವಾದ'ದ ಸುರುಳಿಯಲ್ಲಿ ಸಿಕ್ಕಿರುತ್ತಾರೆ. ಅಷ್ಟೇ ಅಲ್ಲದೆ ಮುಂದಕ್ಕೆ ಭರವಸೆಯೇ ಇಲ್ಲವೆಂದಾಗ ಇವರು ಏನೂ ಮಾಡಲಿಕ್ಕಿಲ್ಲ ಎಂದುಬಿಡುತ್ತಾರೆ. ಕೆಲಸಗಳಿಂದ ತಪ್ಪಿಸಿಕೊಳ್ಳಲು ಇದು ಒಂದು ಒಳ್ಳೆಯ ನೆಪ. ಆದರೆ ಸೋತು ಬಿದ್ದಿರುವ ವ್ಯಕ್ತಿ ಎದ್ದು ನಿಂತು ಕಷ್ಟ ಪರಂಪರೆಗೆ ಹೇಳಬಹುದು- ''ನಾಳೆಯ ದಿನ ಉತ್ತಮವಾಗಬಹುದು''.

ಭರವಸೆಯು ಮಿಥ್ಯೆಯಲ್ಲ; ಅದು ಸತ್ಯ. ಮನುಷ್ಯನು ತಾನು ನಶಿಸುತ್ತಾ ಹೋದಾಗಲೂ ಭರವಸೆಯಿಟ್ಟು ಸಂಘವು ಮುನ್ನಡೆಯ

ಬೇಕೆಂದು ಆಶಿಸುತ್ತಾನೆ. ನಂಬಿಕೆಯಿಂದ ಬಲಶಾಲಿಗಳಾದ ಸಾಮಾನ್ಯ ಮನುಷ್ಯರೂ ಪವಿತ್ರವಾದ ಮತ್ತು ವೀರೋಚಿತ ಸಾಧನೆಗಳನ್ನು ಮಾಡಬಲ್ಲರು.

ಆದ್ದರಿಂದ ಭರವಸೆಯನ್ನು ಮೈಗೂಡಿಸಿಕೊಳ್ಳಿ. ಇದು ವಸಂತಮಾಸದ ಬಿಸಿಲಿನಂತೆ ಸತ್ಯ. ಹಾಗಾಗದಿದ್ದರೂ, ಇದು ಇಂದ್ರಜಾಲದಂತೆ ಕೆಲಸಮಾಡುತ್ತದೆ. ಏಕೆಂದರೆ ಭರವಸೆಯೇ ಒಂದು ಗುರಿಯಾಗಿದೆ. ಇದು ಒಂದು ವೀರೋಚಿತ ಪರಿಶ್ರಮವಾಗಿದೆ; ಮನಸ್ಸಿನ ಒಂದು ಕನ್ನಡಿಯಾಗಿದೆ. ಜೀವನದ ರೀತಿ ಮತ್ತು ಹೃದಯದ ಒಂದು ಮಿಡಿತವಾಗಿದೆ.

ಒಂದುವೇಳೆ ನಾವು ಜಯಶಾಲಿಗಳಾಗದೇ ಇದ್ದಾಗಲೂ ಸಾವು ನೋವುಗಳು ನಮ್ಮನ್ನು ಸುತ್ತುವರಿದಾಗಲೂ ಭರವಸೆ ಇಡುವುದು ಒಳ್ಳೆಯದು. ಏಕೆಂದರೆ ಇದು ನಮ್ಮಲ್ಲಿರುವ ಸಂತಸದ ಕೊನೆಯ ಹನಿಯನ್ನೂ ಆರದೇ ಇಡುತ್ತದೆ. ಭರವಸೆಯಿಂದ ಸಂತಸ ಉಕ್ಕಿ ಬರುತ್ತದೆ. ಒಂದುವೇಳೆ ವಿಪತ್ತು ಸಂಭವಿಸಿದರೆ ಭರವಸೆಯಿಂದ ಅದನ್ನು ಎದುರಿಸುವ ಶಕ್ತಿ ಬರುತ್ತದೆ.



ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸಬೇಕು. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ಉದ್ಧಾರವಾಗುತ್ತಾಳೆ.

ಬಿಎಂಶ್ರೀ

ಪ್ರೀತಿಯು ಸರಿಯಾದ ಬೆಳಕು ಬೀರುತ್ತಿರುವಾಗ, ಆನಂದವು ಅದಕ್ಕೆ ಹೊಣೆಯಾಗಿರುವಾಗ, ನಮ್ಮ ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು. ನಮ್ಮ ಜೀವನ ಶಾಂತಿಮಯವಾಗಿರುವುದು.

-ವರ್ಡ್ಸ್‌ವರ್ಥ

ಮೂಲ ನಕ್ಷತ್ರ

ರುಕ್ಮಿಣಿ ಮಾಲಾ
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ, ಮೈಸೂರು-೫೭೦ ೦೦೯

ವಿದ್ಯೆಗೂ ಮೂಢನಂಬಿಕೆಗೂ ಒಂದಕ್ಕೊಂದು ಸಂಬಂಧವಿಲ್ಲ ಎಂದು ನನಗೆ ಎಷ್ಟೋ ಸಂದರ್ಭಗಳಲ್ಲಿ ಅರಿವಾಗಿದೆ. ಅವಿದ್ಯಾವಂತರಿಗಿಂತ ವಿದ್ಯಾವಂತರೇ ಮೂಢನಂಬಿಕೆಗೆ ಹೆಚ್ಚು ಮಾರುಹೋಗುತ್ತಾರೆ ಎಂದು ನನ್ನ ಭಾವನೆ. ಅದಕ್ಕೆ ಮೂಲವಾಗಿ ಇಲ್ಲಿ ಮೂರು ನಿದರ್ಶನಗಳಿವೆ. ಇದು ವಾಸ್ತವ ಚಿತ್ರಣ.

ಗಣಪತಿಭಟ್ಟರಿಗೆ ನಾಲ್ಕು ಮಕ್ಕಳು. ಎರಡು ಗಂಡು ಮತ್ತು ಎರಡು ಹೆಣ್ಣು. ಹೆಣ್ಣುಮಕ್ಕಳ ನಕ್ಷತ್ರ ಮೂಲನಕ್ಷತ್ರ. ಇದರಿಂದ ಗಣಪತಿಭಟ್ಟರಿಗೆ ಚಿಂತೆ ಆಯಿತು. ಮೂಲನಕ್ಷತ್ರ ಹೊಂದಿರುವ ಹೆಣ್ಣುಮಕ್ಕಳಿಗೆ ಮದುವೆ ಮಾಡುವುದು ಕಷ್ಟಸಾಧ್ಯ. ಯಾರಿಗೇ ಜಾತಕ ಕೊಟ್ಟರೂ ಮೂಲನಕ್ಷತ್ರ ಎಂದು ಕಂಡೊಡನೆ ಹಾಗೆಯೇ ಹಿಂದೆ ಕಳುಹಿಸುವ ಮಂದಿಯೇ ಹೆಚ್ಚು. ಮೂಲನಕ್ಷತ್ರ ಹೊಂದಿರುವ ಕನ್ಯೆಯನ್ನು ಮನೆ ತುಂಬಿಸಿಕೊಂಡರೆ ಮಾವನಾದವನಿಗೆ ಮರಣ ಎಂಬ ಭ್ರಮೆ ಹೆಚ್ಚಿನ ಜನರನ್ನು ಆವರಿಸಿದೆ. ಹೀಗಾಗಿ ತಮ್ಮ ಮಗಳಂದಿರ ಮದುವೆಗೆ ಎಷ್ಟು ವಿಘ್ನ ಬರುತ್ತದೋ ಎಂದು ಗಣಪತಿಭಟ್ಟರು ಚಿಂತಿಸಿದರು. ಆದರೆ ಗಣಪತಿಭಟ್ಟರಿಗೆ ಈ ವಿಚಾರದಲ್ಲಿ ಅಂತಗೊಡ್ಡು ನಂಬಿಕೆ ಇರಲಿಲ್ಲ. ಅವರು ಓದಿದ್ದು ಐದನೇ ಈಯತ್ತೆವರೆಗಾದರೂ ಅವರ ವಿಚಾರಧಾರೆ ಮೇಲ್ಮಟ್ಟದಲ್ಲೇ ಇವೆ.

ಗಣಪತಿಭಟ್ಟರು ಹಿರಿಯ ಮಗನಿಗೆ ಮದುವೆ ಮಾಡುವುದೆಂದು ತೀರ್ಮಾನಿಸಿದರು. ಆಗ ಅವರ ಮನೆಗೆ ಬಂದ ಪ್ರಪ್ರಥಮ ಜಾತಕ ಮೂಲನಕ್ಷತ್ರ ಹೊಂದಿದ ಕನ್ಯೆಯದು ಅದಕ್ಕಾಗಿ ಮನೆಯಲ್ಲಿಲ್ಲ ಎಲ್ಲರ ಅಪಸ್ವರ ಎದ್ದಾಗ ಭಟ್ಟರು ಖಡಾಖಂಡಿತವಾಗಿ "ಇದೇ ಹುಡುಗಿಯನ್ನು ನೋಡಲು ಹೋಗುವುದು, ಮೂಲನಕ್ಷತ್ರ ಎಂಬ ಒಂದೇ ಒಂದು ಕಾರಣಕ್ಕೆ ಈ ಹುಡುಗಿಯನ್ನು ತಿರಸ್ಕರಿಸುವ ಅಗತ್ಯವಿಲ್ಲ. ನಮ್ಮ ಮಕ್ಕಳದ್ದೂ ಮೂಲನಕ್ಷತ್ರ. ಮುಂದೆ ಇದೇ ಅವಸ್ಥೆ ನಾವೂ ಪಡಬೇಕಾದೀತು" ಎಂದರು.

ಹಿರೀಮಗನಿಗೆ ಅದೇ ಕನ್ಯೆಯೊಂದಿಗೇ ಮದುವೆ ಮಾಡಿದರು. ಕೆಲವರ್ಷಗಳ ತರುವಾಯ ಎರಡನೇ ಮಗನಿಗೂ ಮದುವೆ ಮಾಡಿದರು. ಅವಳ ನಕ್ಷತ್ರವೂ ಮೂಲ ನಕ್ಷತ್ರವೇ! "ಎರಡು ಜನ ಮೂಲನಕ್ಷತ್ರ ಇರುವವರು ನಮ್ಮ ಮನೆಬಿಟ್ಟು ಬೇರೆ ಮನೆಗೆ ಹೋಗುತ್ತಾರಲ್ಲ. ಅದಕ್ಕಾಗಿ ಮೂಲನಕ್ಷತ್ರ ಇರುವ ಇಬ್ಬರು ಸೊಸೆಯಂದಿರು ನಮ್ಮ ಮನೆಗೆ ಬಂದಿದ್ದಾರೆ" ಎಂದು ಗಣಪತಿಭಟ್ಟರು ವಿನೋದದಿಂದ ನುಡಿದರು.

ತಮ್ಮ ಹೆಣ್ಣುಮಕ್ಕಳ ಮದುವೆ ನಡೆಯುವುದು ಕಷ್ಟ ಎಂದು ಭಟ್ಟರು ಹಿಂದೆ ಹೆದರಿದಷ್ಟು ಕಷ್ಟವಾಗಲೇ ಇಲ್ಲ. ಹೊವೆತ್ತಿದಷ್ಟು ಸರಳವಾಗಿ ಇಬ್ಬರು ಹೆಣ್ಣುಮಕ್ಕಳ ಮದುವೆ ನೆರವೇರಿತು. ಅಂಥ ಮೂಢನಂಬಿಕೆ ಇಲ್ಲದವರೇ ಭಟ್ಟರ ಮಗಳಂದಿರನ್ನು ಕೈಹಿಡಿದರು. ಇದರಿಂದ ಸಂತೋಷಗೊಂಡ ಭಟ್ಟರು ನೆಮ್ಮದಿಯ ನಿಟ್ಟುಸಿರುಬಿಟ್ಟರು.

ಮೂಲನಕ್ಷತ್ರ ಇರುವ ಇಬ್ಬರು ಸೊಸೆಯಂದಿರು ಭಟ್ಟರ ಮನೆ ತುಂಬಿದರೂ

ಇದರಿಂದ ಗಣಪತಿಭಟ್ಟರ ಜೀವಕ್ಕೇನೂ ಅಪಾಯವಾಗಲಿಲ್ಲ. ಈಗಲೂ ಭಟ್ಟರು ಎಪ್ಪತ್ತು ವರ್ಷದ ತುಂಬು ಜೀವನ ನಡೆಸುತ್ತಿದ್ದಾರೆ.

***

ಮಾಧವರಾಯರಿಗೆ ಒಬ್ಬಮಗ, ಒಬ್ಬಳು ಮಗಳು. ಮಗಳದ್ದು ಮೂಲನಕ್ಷತ್ರ. ಅದಕ್ಕಾಗಿ ಮಾಧವರಾಯರು ಹೆಚ್ಚು ಚಿಂತೆಪಡಲಿಲ್ಲ. ಮಗಳ ವಿದ್ಯಾಭ್ಯಾಸ ಒಂದು ಹಂತಕ್ಕೆ ಬಂದಾಗ ಅವಳಿಗೆ ಮದುವೆ ಮಾಡುವುದೆಂದು ಯೋಚಿಸಿ ದರು. ಅವಳ ಜಾತಕವನ್ನು ನಾಲ್ಕು ಪ್ರತಿ ಮಾಡಿ ನಾಲ್ಕು ಕಡೆಗಳಿಗೆ ಕಳುಹಿಸಿದರು. ಕೆಲವೇ ದಿನಗಳಲ್ಲಿ ಎಲ್ಲ ಜಾತಕಗಳೂ ವಾಪಾಸು ಅವರ ಕೈ ಸೇರಿದುವು.

ಒಬ್ಬ ಮಹನೀಯರು ಈ ರೀತಿ ಪತ್ರ ಬರೆದಿದ್ದರು: ''ನಿಮ್ಮ ಮಗಳದ್ದು ಮೂಲ ನಕ್ಷತ್ರ. ಆದರೂ ನೀವು ಜಾತಕ ಕಳುಹಿಸಿದ್ದೀರಿ. ನಾನು ಇನ್ನೂ ಸ್ವಲ್ಪ ಕಾಲ ಬದುಕಲು ಇಚ್ಛಿಸುತ್ತೇನೆ. ಹಾಗಾಗಿ ಜಾತಕ ಹಿಂದೆ ಕಳುಹಿಸಿದ್ದೇನೆ''. ಇದರಿಂದ ರಾಯರು ಎದೆಗುಂದದೆ ಬೇರೆ ಬೇರೆ ಕಡೆಗೆ ಜಾತಕ ಕಳುಹಿಸಿದರು. ಅಲ್ಲಿಂದಲೂ ಜಾತಕ ವಾಪಸಾದಾಗ ರಾಯರಿಗೆ ಚಿಂತೆ ಯಾಯಿತು.

ಎಲ್ಲ ಜ್ಯೋತಿಷಿಗಳ ಬಳಿಗೂ ತೆರಳಿ ತಮ್ಮ ಮಗಳ ಜಾತಕ ತೋರಿಸಿದರು. ''ಏನೂ ಚಿಂತೆ ಮಾಡಬೇಡಿ. ಆ ಕಾಲ ಬಂದಾಗ ನಿಮ್ಮ ಮಗಳಿಗೆ ಮದುವೆ ಆಗುತ್ತದೆ'' ಎಂದು ಅಭಯವಿತ್ತು ಅವರಿಂದ ದಕ್ಷಿಣೆ ಪಡೆದು ತತ್ಕಾಲಕ್ಕೆ ರಾಯರ ತಲೆ ಮತ್ತು ಜೇಬು ಹಗುರಗೊಳಿಸಿ ಅವರನ್ನು ಮನೆಗೆ ಕಳುಹಿಸಿದರು.

ಹೀಗೇ ಎರಡು ವರ್ಷ ಸಂದರೂ ಮಗಳಿಗೆ ಕಂಕಣ ಭಾಗ್ಯ ಬರದೇ ಇದ್ದಾಗ ಹೆದರಿದ ರಾಯರು ಪ್ರಸಿದ್ಧ ಜ್ಯೋತಿಷಿಗಳಿಗೆ ದಕ್ಷಿಣೆ ಕೊಟ್ಟು ತಮ್ಮ ಮಗಳ ಜಾತಕ ಬೇರೆ ಬರೆಸಿದರು. ಅದಾಗಿ ಕೆಲದಿನಗಳಲ್ಲೇ ರಾಯರ ಮಗಳಿಗೆ ವಿದ್ಯಾವಂತ ಸುಶಿಕ್ಷಿತ ಯುವಕ ನೊಂದಿಗೆ ಮದುವೆ ಆಯಿತು. ರಾಯರು ಸಂತೋಷಗೊಂಡರು. ಆದರೆ ರಾಯರ ಸಂತೋಷ ಹೆಚ್ಚುಕಾಲ ಉಳಿಯಲಿಲ್ಲ.

''ನಿನ್ನ ಹೆಂಡತಿಯದ್ದು ಮೂಲನಕ್ಷತ್ರ. ಅವಳ ಜಾತಕ ಬೇರೆ ಬರೆಯಿಸಿ ನಿನಗೆ ಕೊಟ್ಟದ್ದು'' ಎಂದು ಒಬ್ಬ ಕುತಂತ್ರಿ ರಾಯರ ಅಳಿಯನ ಕಿವಿ ಊದಿದ. ಇದರಿಂದ ಕುಪಿತ ಗೊಂಡ ಅಳಿಯ ಹೆಂಡತಿಗೆ ಹಿಂಸೆ ಕೊಡಲು ಆರಂಭಿಸಿದ. ಮಾವ ಅತ್ತೆ ಮಾತು ಮಾತಿಗೂ ಚುಚ್ಚಿ ಅವಳ ತಂದೆಯನ್ನು ತೆಗಳಲಾರಂಭಿಸಿ ದರು. ಹೆಂಡತಿಯನ್ನು ತವರಿನ ಮುಖ ನೋಡಲು ಬಿಡಲಿಲ್ಲ. ಮಗಳನ್ನು ನೋಡಲು ತಂದೆ ಅಥವಾ ಯಾರೇ ಬಂದರೂ ಹೆಂಡತಿ ಯನ್ನು ಹೊರಗೆ ಬರಲು ಬಿಡುತ್ತಿರ ಲಿಲ್ಲ. ಕ್ರಮೇಣ ಹತಾಶರಾದ ರಾಯರು ಮಗಳ ಮನೆಗೆ ಹೋಗುವುದನ್ನೇ ಬಿಟ್ಟರು. ರಾಯರ ಮಗಳ ಬಾಳು ನರಕವಾಯಿತು. ಆದರೆ ರಾಯರ ಮಗಳ ನಕ್ಷತ್ರ ಮೂಲನಕ್ಷತ್ರ ವಾದರೂ ಅವಳ ಮಾವ ಆರೋಗ್ಯದಿಂದ ತುಂಬು ಜೀವನ ನಡೆಸಿಯೇ ಇದ್ದರು. ಮೂಲನಕ್ಷತ್ರದಿಂದಾಗಿ ಮಾವನ ಪ್ರಾಣ ವೇನೂ ಹೋಗಲಿಲ್ಲ. ಆದರೂ ರಾಯರ ಅಳಿಯ, ಬೀಗರಿಗೆ ಬುದ್ಧಿ ಬರಲಿಲ್ಲ. ದ್ವೇಷ ಸಾಧಿಸಿಯೇ ಸಾಧಿಸಿದರು.

***

ಸತ್ಯಮೂರ್ತಿ ಕಾಲೇಜಿನಲ್ಲಿ ವಿಜ್ಞಾನ ವಿಷಯವನ್ನು ಬೋಧಿಸುವ ಅಧ್ಯಾಪಕರು. ಅವರು ಮೂಢನಂಬಿಕೆಗಳನ್ನು ನಿರ್ಮೂಲನ ಗೊಳಿಸಲು ಎಷ್ಟೋ ಕಡೆ ಭಾಷಣ ಮಾಡಿದ್ದಾರೆ.

ಸತ್ಯಮೂರ್ತಿ ಮಗ ಇಂಜನಿಯರು. ಅವನಿಗೆ ಮದುವೆ ಮಾಡುತ್ತಾರೆ ಎಂದು ಗೊತ್ತಾದದ್ದೇ ಕೆಲವು ಜಾತಕಗಳು ಅವರ ಮನೆಗೆ ಬಂದುವು. ಸ್ವತಃ ಸತ್ಯಮೂರ್ತಿಗಳೇ ಮಗನ ನಕ್ಷತ್ರಕ್ಕೂ ಬಂದ ಜಾತಕಗಳ ನಕ್ಷತ್ರಕ್ಕೂ ತಾಳೆ ನೋಡಲು ಅನುವಾದರು. ಮದುವೆ ಯಾಗುವ ಗಂಡು ಹೆಣ್ಣು ಇಬ್ಬರ ನಕ್ಷತ್ರವೂ ಒಂದೇ ಆದರೆ ಮನೆಯಲ್ಲಿ ಕದನವೇರ್ಪಡು ತ್ತದಂತೆ. ಗಂಡ ಹೆಂಡಿರಿಬ್ಬರೂ ಮೊದಲು ಬಾಯಿ-ಬಾಯಿ, ಅನಂತರ ಕೈ-ಕೈ, ಮತ್ತೆ ಕೆಲ ದಿನಗಳೆದಂತೆ ಲಾಟಿಯನ್ನೇ ಉಪಯೋಗಿಸಿ ಬಿಡುತ್ತಾರಂತೆ! ''ನಿಮಗೆ ಜಾತಕದಲ್ಲಿ ನಂಬುಗೆ ಇದೆಯೇ?'' ಎಂದು ಯಾರೋ ಒಬ್ಬರು ಸತ್ಯಮೂರ್ತಿಗಳನ್ನು ಕೇಳಿಯೇ ಬಿಟ್ಟರು.

ಅದಕ್ಕೆ ಅವರು, ''ಇದರಲ್ಲಿ ನಂಬಿಕೆ ಪ್ರಶ್ನೆಯೇ ಬರುವುದಿಲ್ಲ. ಏನೋ ಮನಸ್ಸಿನ ಸಮಾಧಾನಕ್ಕಾಗಿ ಜಾತಕ, ನಕ್ಷತ್ರ ನೋಡು ವುದು'' ಎಂದು ಖಚಿತವಾಗಿ ನುಡಿದರು.

''ಎಲ್ಲರೂ ಮಾಡುವುದು ಅಷ್ಟೇತಾನೆ? ತಮ್ಮ ತಮ್ಮ ಸಮಾಧಾನಕ್ಕಾಗಿ ಜಾತಕ ನೋಡುತ್ತಾರೆ. ಅದಕ್ಕೆ ಇವರೂ ಹೊರತಲ್ಲ. ಒಂದೇ ವ್ಯತ್ಯಾಸ. ಇವರು ಹೊರಗೆ ಹೇಳುವುದು ಒಂದು. ಒಳಗೆ ಮಾಡುವುದೇ ಇನ್ನೊಂದು ಅಷ್ಟೆ. ನಾವೆಲ್ಲ ನಂಬಿಕೆ ಉಂಟು ಎಂದು ಹೊರಗೂ ಹೇಳುತ್ತೇವೆ, ಅಂತೆಯೇ ನಡೆದು ಕೊಳ್ಳುತ್ತೇವೆ ಎಂದು ಸತ್ಯಮೂರ್ತಿಗಳನ್ನು ಪ್ರಶ್ನಿಸಿದವರು ತಮ್ಮ ಮನದಲ್ಲೇ ಹೇಳಿಕೊಂಡರು.

ಸತ್ಯಮೂರ್ತಿಗಳು ತಮ್ಮ ಮಗನ ನಕ್ಷತ್ರಕ್ಕೆ ಸರಿಹೊಂದುವ ನಕ್ಷತ್ರವಿರುವ ಕನ್ಯೆಯನ್ನೇ ಹುಡುಕಿ ಮದುವೆ ಮಾಡಬಹುದು. ಎಲ್ಲ ಜಾತಕದ ನಕ್ಷತ್ರದ ಮಹಿಮೆ!

ಗ್ರಹಗತಿಯ ತಿದ್ದುವನೆ ದೋಷಯಿಸನು ಜಾತಕದಿ?
ವಿಹಿತವಾಗಿಹುದದರ ಗತಿ ಸೃಷ್ಟಿವಿಧಿಯಿಂ
ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ
ಸಹನೆ ವಜ್ರದ ಕವಚ ಮಂಕುತಿಮ್ಮ.

ಹಲವರು, ಜೀವಮಾನವೆಲ್ಲ ಅನೇಕ ದುರ್ಘಟನೆಗಳ ಬಗ್ಗೆಯೇ ಚಿಂತಿಸುತ್ತಿರುತ್ತಾರೆ. ಆದರೆ ಆಶ್ಚರ್ಯವೆಂದರೆ, ಅವರು ಚಿಂತಿಸುವ ಹಲವು ದುರ್ಘಟನೆಗಳು ಅವರ ಜೀವನದಲ್ಲಿ ಸಂಭವಿಸುವುದಿಲ್ಲ ಕೂಡ. ಆದ್ದರಿಂದ ಅಂಥ ಚಿಂತೆ ಎಷ್ಟು ವ್ಯರ್ಥವೆಂಬುದನ್ನವರು ಮೊದಲೇ ತಿಳಿದುಕೊಂಡರೆ ಹರ್ಷಚಿತ್ತರಾಗಿರಬಹುದು.

- ಹಬಾಸ್

ಹಿರಿಯ ನಾಗರಿಕ ವರ್ಷ

ಡಾ|| ಕೆ.ಎ. ರಾಘವೇಂದ್ರರಾವ್
ಪ್ರಾಧ್ಯಾಪಕ(ನಿ), ೨೮೭೭/೧೩
೬ ೧೮/೩, ಚಾಮುಂಡಿಪುರಂ ವೃತ್ತ
ಮೈಸೂರು-೫೭೦ ೦೦೪

ವಿಶ್ವ ಆರೋಗ್ಯ ದಿನವನ್ನು ಪ್ರತಿವರ್ಷವೂ ಆಚರಿಸುತ್ತ ಬರುತ್ತಿದ್ದೇವೆ. ೧೯೯೯ ವರ್ಷ ಯುಎನ್ಓ ವಿಶ್ವ ಆರೋಗ್ಯ ದಿನಾಚರಣೆಯನ್ನು ಹಿರಿಯ ನಾಗರಿಕ ವರ್ಷವೆಂದು ಘೋಷಿಸಿದೆ (Year of Senior Citizens).

ಒಳ್ಳೆಯ ಆಹಾರ, ಒಳ್ಳೆಯ ಚಿಕಿತ್ಸೆ, ಪ್ರಾಣವನ್ನು ಉಳಿಸುವಂತಹ ಹೊಸದಾಗಿ ಕಂಡು ಹಿಡಿದ ಔಷಧಿಗಳು, ಇವುಗಳಿಂದ ಮನುಷ್ಯನ ಸರಾಸರಿ ವಯಸ್ಸು ಮೊದಲಿಗಿಂತ ಜಾಸ್ತಿಯಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಪ್ರತಿಯೊಂದು ರಾಷ್ಟ್ರದಲ್ಲಿಯೂ ಈಗ ವಯಸ್ಸಾದವರನ್ನು ಹೆಚ್ಚಿಗೆ ಕಾಣಬಹುದು. ವೃದ್ಧರ ಹೆಚ್ಚಳ ನಮ್ಮ ಭಾರತಕ್ಕೂ ಹೊರತಲ್ಲ. ಜನಗಳು ಮೊದಲಿಗಿಂತ ಜಾಸ್ತಿ ದಿವಸ ಬದುಕುತ್ತಾರೆ.

೧೯೫೧ರಲ್ಲಿ ಮನುಷ್ಯನ ಸರಾಸರಿ ಬದುಕು ೪೨ ವರ್ಷಗಳಿದ್ದುವು. ಈಗ ಗಂಡಸರಿಗೆ ೬೦ ವರ್ಷ. ಹೆಂಗಸರಿಗೆ ೬೨ ವರ್ಷಗಳು. ಆದ್ದರಿಂದ ನಮ್ಮ ರಾಷ್ಟ್ರದಲ್ಲಿ ಹಿರಿಯ ನಾಗರಿಕರ ಸಂಖ್ಯೆ ಇಂದು ಸುಮಾರು ೭.೫ ಕೋಟಿ ಇದೆ ಎಂದರೆ ತಪ್ಪಾಗಲಾರದು. ಇನ್ನೂ ಮುಂದಿನ ವರ್ಷಗಳಲ್ಲಿ ಈ ಸಂಖ್ಯೆಯು ಹೆಚ್ಚಾಗಬಹುದು.

ವೃದ್ಧಾಪ್ಯ ಸ್ವಾಭಾವಿಕ. ಜೀವನದಲ್ಲಿ ಪ್ರಾಣಿಗಳಲ್ಲಿಯಾಗಲೀ, ಗಿಡಗಳಾಗಲೀ ಮನುಷ್ಯನಲ್ಲಿಯಾಗಲೀ ನಡೆಯುವ ನೈಸರ್ಗಿಕ ಕ್ರಿಯೆ. ಇದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ನಮ್ಮ ಕರ್ತವ್ಯ ಏನೆಂದರೆ ವೃದ್ಧಾಪ್ಯ ಜೀವನವನ್ನು ಚಟುವಟಿಕೆಯಿಂದ ಇರುವಂತೆ ಮಾಡುವುದು. ವೃದ್ಧರನ್ನು ಆದಷ್ಟು ಮಟ್ಟಿಗೆ ರೋಗರಹಿತರನ್ನಾಗಿ ಮಾಡುವುದು. ಅವರ ಜೀವನದಲ್ಲಿ ನೆಮ್ಮದಿಯನ್ನು ಕೊಡುವುದು ಮುಖ್ಯ ಉದ್ದೇಶ. ರೋಗರುಜನಾದಿಗಳಿಂದ ನರಳುತ್ತಿದ್ದರೆ ಅವರ ಜೀವನವು ಸುಖಮಯವಾಗಿರುವುದಿಲ್ಲ.

ಇದಕ್ಕೆ ಮಹಾಕವಿ ಕಾಳಿದಾಸರು ಈ ರೀತಿ ಹೇಳಿದ್ದಾರೆ. ''ವೃದ್ಧತ್ವಂ ಜರಸಾ ವಿನಾ'' ವೃದ್ಧತ್ವವನ್ನು ಹೊಂದಬೇಕು. ಆದರೆ ನರಳಾಟದಿಂದಲ್ಲ.

ಬಹಳ ವೃದ್ಧರಿಗೆ ಕಣ್ಣಿನ ಪೊರೆ, ಗ್ಲಾಕೋಮ, ಕಿವುಡಾಗುವಿಕೆ, ತಿರುಗಾಡುವುದಕ್ಕೆ ತೊಂದರೆ ಮಾಡುವಂತಹ ಕೆಲವು ಮೂಳೆರೋಗಗಳು, ಜ್ಞಾನೇಂದ್ರಿಯಗಳಲ್ಲಿ ಚಟುವಟಿಕೆ ಕಡಿಮೆಯಾಗುವುದು, ಮಧುಮೇಹ, ಹೃದ್ರೋಗ, ಅರ್ಬುದ ಕ್ಯಾನ್ಸರ್ ಮಂಡಿ ನೋವು, (Arthritis) ಕತ್ತಿನಲ್ಲಿ ಅಥವಾ ನಡುವಿನಲ್ಲಿ ಬೇನೆ. (spondy litis) ಆಘಾತವಾಗಿ ಮೂಳೆಗಳು ಮುರಿಯುವುದು, ಪೌರುಷ ಗ್ರಂಥಿಯ ವೃದ್ಧಿ (Enlarged prostate) ಇವುಗಳನ್ನು ಕಾಣುತ್ತೇವೆ. ಅವರು ಸ್ವಲ್ಪ ಶಕ್ತಿಹೀನರಾಗಿರುವುದರಿಂದ ಬಹಳ ಬೇಗನೆ ಉದ್ವೇಗಕ್ಕೆ ಒಳಗಾಗುತ್ತಾರೆ. ಅವರಲ್ಲಿ ಮಾನಸಿಕ ಬದಲಾವಣೆಗಳೂ ಕಂಡು ಬರುತ್ತವೆ. ಆದುದರಿಂದ ವೃದ್ಧರಿಗೆ ನಮ್ಮ ನೆರವು ಅತ್ಯಗತ್ಯವಾದುದರಿಂದ ಅವರು ಸಾಧ್ಯವಾದಷ್ಟು ಈ ರೋಗಗಳಿಗೆ ಬಲಿಯಾಗುವುದನ್ನು ತಪ್ಪಿಸಬೇಕು. ಅವರುಗಳಿಗೆ ವೃದ್ಧಾಪ್ಯದಲ್ಲಿ ಹೇಗೆ ಜೀವನ ನಡೆಸಬೇಕು?(Life style) ಒಳ್ಳೆಯ ಆಹಾರಗಳನ್ನು ಕೊಡಬೇಕು. ಅವರ ಕೈಲಿ ಮಾಡುವಷ್ಟು ಯೋಗಾಸನಗಳನ್ನು ತಿಳಿಸಿಕೊಡಬೇಕು, ಧ್ಯಾನ ಮತ್ತು ಪ್ರಾಣಾಯಾಮ ಮಾಡುವುದಕ್ಕೆ ಹೇಳಬೇಕು. ಇವುಗಳನ್ನು ಸರಿಯಾಗಿ ಪಾಲಿಸುವುದರಿಂದ ಮತ್ತು

ಒಳ್ಳೆಯ ಆಹಾರವನ್ನು ಸೇವಿಸುವುದರಿಂದ ೭೦ % ವೃದ್ಧರಲ್ಲಿ ಒಳ್ಳೆಯ ದೈಹಿಕ ಮತ್ತು ಮಾನಸಿಕ ಸ್ಥಿರತೆಯನ್ನು ಕಾಣಬಹುದು.

ಈ ದೃಢತೆಯನ್ನು ಕೊಡಲು ಸರ್ಕಾರವು ಅನುಭವಿಗಳು ಮತ್ತು ಪರಿಣತಿ ಹೊಂದಿದವರ ಸೇವೆಯನ್ನು ಉಪಯೋಗಿಸಕೊಳ್ಳಬೇಕು. ಸಮಾಜವೂ ಸಹ ಸಹಕಾರವನ್ನು ಕೊಡಬೇಕು.

ಬಹಳ ವಯಸ್ಸಾದವರನ್ನು ಅಂದರೆ ೬೦ ವರ್ಷಗಳ ಅನಂತರದ ವೃದ್ಧರು ತಮ್ಮ ಪ್ರತಿಯೊಂದು ಕೆಲಸಕ್ಕೂ ಪರಾಶ್ರಿತರಾಗಿರುತ್ತಾರೆ. ಹಿಂದೆ ಒಟ್ಟು ಕುಟುಂಬವಿದ್ದುದರಿಂದ ಅವರ ಬದುಕಿಗೆ ಅಷ್ಟು ಕಷ್ಟವಾಗುತ್ತಿರಲಿಲ್ಲ. ಆದರೆ ಈಗಿನ ಪರಿಸ್ಥಿತಿ ಹಾಗಿಲ್ಲ. ದೊಡ್ಡವರೆಂದರೆ ಮೂಕ ಪ್ರಾಣಿಗಳಂತಿರಬೇಕು. ಇಂತಹ ಪರಿಸ್ಥಿತಿ ಜಾಸ್ತಿಯಾಗುತ್ತಿರುವಾಗ ಅವರನ್ನು ಕೇಳುವವರಾರು ?

ಆಧುನಿಕತೆಯ ಯುಗದಲ್ಲಿ ಹಿರಿಯರು ಮನೆಯಲ್ಲಿರುವುದು ಒಂದು ಪಾಪವೇ ಸರಿ. ಆದುದರಿಂದ ಹಿರಿಯ ನಾಗರಿಕರ ಸಮಸ್ಯೆಗಳನ್ನು ಅರಿತು ಸಮಾಜ ಮತ್ತು ಸರ್ಕಾರ ಅವರು ಬದುಕಿರುವತನಕ ನೆಮ್ಮದಿಯಿಂದಿರುವುದಕ್ಕೆ ಸುಸಜ್ಜಿತ ವೃದ್ಧಾಶ್ರಮವನ್ನು ಎಲ್ಲೆಲ್ಲೂ ಏರ್ಪಾಡು ಮಾಡಬೇಕು. ಇದನ್ನು ಕಟ್ಟಲು ಚಂದಾವನ್ನು ಎತ್ತಿ ಸದ್ವಿನಿಯೋಗ ಮಾಡಬೇಕು. ಯಾರಿಂದ ಹಣಪಡೆದುಕೊಳ್ಳಬಹುದೋ ಅವರಿಂದ ಹಣಪಡೆದುಕೊಳ್ಳಬಹುದು.

ದಿನ ನಿತ್ಯವೂ ನಾವು ಪತ್ರಿಕೆಗಳಲ್ಲಿ ಹಿರಿಯರಿಗೆ ಆಗುತ್ತಿರುವ ತೊಂದರೆಗಳನ್ನು ಓದುತ್ತಿದ್ದೇವೆ. ಅನೇಕ ಹಿರಿಯರು ಬೇಸತ್ತು ಮನೆಯನ್ನು ಬಿಟ್ಟು ಹೋಗಬೇಕೆಂಬ ಮನಸ್ಸನ್ನು ಹೊಂದುತ್ತಿದ್ದಾರೆ. ಅವರೆಲ್ಲರಿಗೂ ಇದು ಸಾಧ್ಯವಾಗುತ್ತಿಲ್ಲ. ವಯಸ್ಸಾದ ಹಿರಿಯರಿಗೆ ಅನೇಕ ಸಮಸ್ಯೆಗಳಿವೆ. ಆರ್ಥಿಕ, ಸಾಮಾಜಿಕ, ದೈಹಿಕ ಮತ್ತು ಮಾನಸಿಕ ಒತ್ತಡಗಳಿರುತ್ತವೆ. ೧೯೮೨ರಲ್ಲಿ ಯು.ಎನ್.ಓ. ಸಮ್ಮೇಳನದಲ್ಲಿ ಎಲ್ಲ ರಾಷ್ಟ್ರಗಳೂ ವೃದ್ಧರಿಗೆ ಸರಿಹೋಗುವ ಒಂದು ಸೂತ್ರವನ್ನು ಸಿದ್ಧಪಡಿಸಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿತು.

ಅನೇಕ ರಾಷ್ಟ್ರಗಳು ಈ ನಿರ್ಣಯವನ್ನು ಜಾರಿಗೆ ತಂದವು. ಕೆನಡಾ ವೃದ್ಧರ ಸಮಸ್ಯೆಯ ಪರಿಹಾರಕ್ಕೆ ಮಂತ್ರಿಮಂಡಲದಲ್ಲಿ ಒಂದು ಪ್ರತ್ಯೇಕ ಸಚಿವ ಸ್ಥಾನ ಸ್ಥಾಪಿಸಿತು. ಜಪಾನ್ ಇನ್ನೂ ಬಹಳ ಒಳ್ಳೆಯದಾದ ಚೆನ್ನದಂತಹ ಕೆಲಸವನ್ನು ಮಾಡಿತು. ಯಾವ ವೃದ್ಧನೂ ಹಾಸಿಗೆ ಹಿಡಿಯುವಂತೆ ಮಾಡಬಾರದು, ಅವನು ತಾನು ಬದುಕಿರುವತನಕ ತೃಪ್ತಿಕರವಾದ, ಹಿತಕರವಾದ, ಚಟುವಟಿಕೆಯಿಂದ ಕೂಡಿದ ಕೆಲಸ ಮಾಡಲು ಸರಕಾರ ಸಹಾಯ ಮಾಡಬೇಕು. ಆದರೆ ನಮ್ಮ ಭಾರತ ಸರ್ಕಾರವು ೧೯೯೮ ಆಗಸ್ಟ್ ತಿಂಗಳಲ್ಲಿ ಹಿರಿಯ ನಾಗರಿಕರಿಗಾಗಿ ಒಂದು ಕರಡು ರಾಷ್ಟ್ರೀಯ ನಿರ್ಣಯವನ್ನು ತಯಾರಿಸಿದೆ. ಇದು ಕಾರ್ಯಗತವಾದರೆ ಹಿರಿಯ ನಾಗರಿಕರಿಗೆ ಎಲ್ಲಾ ವಿಧವಾದ ಅನುಕೂಲಗಳು ಲಭ್ಯವಾಗುತ್ತದೆ. ಅವರನ್ನು ಅಲಕ್ಷಿಸುವಂತಿಲ್ಲ. ಯಾರೂ ಕಡೆಗಣಿಸುವಂತಿಲ್ಲ. ಈ ನಿರ್ಣಯದಿಂದ ಹಿರಿಯ ನಾಗರಿಕರು ತಾವು ಚಟುವಟಿಕೆಯಿಂದ, ಶಕ್ತಿಯುತರಾಗಿಯೂ, ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಹೊಂದಿದವರಾಗಿಯೂ ತಮ್ಮ ಜೀವನದ ಕೊನೆಯ ದಿನಗಳನ್ನು ಶಾಂತಿಯಿಂದ, ಗೌರವದಿಂದ ಕಳೆಯಬಹುದು. ಹಿರಿಯ ನಾಗರಿಕರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ದಿಕ್ಕಿನಲ್ಲಿರುವ ಭಾರತ ಸರ್ಕಾರಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕು.

ಈ ನರಕಯಾತನೆಗೆ ಪರಿಹಾರ ಉಂಟೆ?

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಪ್ರತಿ ಹತ್ತು ಭಾರತೀಯರಲ್ಲಿ ಒಬ್ಬ ಅರೆತಲೆಶೂಲೆಯಿಂದ ಬಳಲುತ್ತಾನೆ. ಸರಿಯಾದ ಚಿಕಿತ್ಸೆಯ ಮೂಲಕ ಇದರ ಕೆಟ್ಟ ಪರಿಣಾಮದಿಂದ ಪಾರಾಗಲು ಸಾಧ್ಯ

ದಿವ್ಯಾಮೂರ್ತಿ ಇಪ್ಪತ್ತು ವರ್ಷದ ಯುವತಿ ಕಾಲೇಜಿನಲ್ಲಿ ಅಂತಿಮ ವರ್ಷದ ವಿದ್ಯಾರ್ಥಿನಿಯಾಗಿದ್ದಾಗ ಅವಳಿಗೆ ಆಗಾಗ ತಲೆಶೂಲೆ ಬರುವುದು ಪ್ರಾರಂಭವಾಯಿತು. ಮೊದಲು ಅಷ್ಟು ತೀವ್ರ ಆಗಿರದಿದ್ದರೂ, ಒಂದು ವರ್ಷದೊಳಗೆ ಇದರ ಬಾಧೆ ಹೆಚ್ಚಾಯಿತು. ''ಯಾರೋ ನನ್ನ ತಲೆಯನ್ನು ಸುತ್ತಿಗೆಯಿಂದ ಕುಟ್ಟುತ್ತಿರುವಂತಾಗಿರುತ್ತಿತ್ತು'' ಎಂದು ದಿವ್ಯಾ ನೆನಸಿಕೊಳ್ಳುತ್ತಾಳೆ. ಅವಳು ೨೨ ವರ್ಷದವಳಾಗುವ ಸಮಯಕ್ಕೆ ಸರಾಸರಿ ವಾರಕ್ಕೊಮ್ಮೆ ತಲೆಶೂಲೆ ಅವಳನ್ನು ಬಾಧಿಸುತ್ತಿತ್ತು. ''ನನಗೆ ಓಕರಿಕೆ ಬರುತ್ತಿತ್ತು ; ನಿಶ್ಶಕ್ತಿ ಬೆವರಿ ನಡುಗುತ್ತಿದ್ದೆ... ಏಳಲಾರದಷ್ಟು ನಿಶ್ಶಕ್ತಿಯಿರುತ್ತಿತ್ತು... ಮಲಗಿಬಿಡುತ್ತಿರದ್ದೆ...'' ಎಂದು ಅವಳು ಹೇಳುತ್ತಾಳೆ.

ದಿವ್ಯಾಮೂರ್ತಿ ಮತ್ತೆ ಮತ್ತೆ ತಮ್ಮ ಪರಿವಾರದ ವೈದ್ಯನ ಸಲಹೆ ಪಡೆದರೂ ಅದು ಪರಿಣಾಮಕಾರಿಯಾಗಲಿಲ್ಲ. ಸಾಮಾನ್ಯ ನಿಶ್ಶಕ್ತಿ, ನಿದ್ರಾಹೀನತೆ, ಎಲುಬಿನ ಸೋಂಕುಗಳೇ ಇದಕ್ಕೆ ಕಾರಣವಿರಬೇಕೆಂದು ಆ ವೈದ್ಯ ವಿವರಿಸಿದ್ದ. ಆದರೆ ಅದು ಸರಿಯಿರಲಿಲ್ಲ.

ಅನಂತರ ಒಂದು ವರ್ಷದ ಹಿಂದೆ, ದಿವ್ಯಾಮೂರ್ತಿ ಒಂದು ಸಮಾಚಾರ ಪತ್ರಿಕೆಯಲ್ಲಿ, ನರರೋಗ ತಜ್ಞನೊಬ್ಬ ತಲೆಶೂಲೆಯನ್ನು ನಿವಾರಿಸುವಲ್ಲಿ ಯಶಸ್ವಿಯಾದ ಬಗ್ಗೆ ಬರೆದ ಒಂದು ಲೇಖನ ಓದಿದಳು. ಅವನನ್ನು ಚರ್ಚಿಸಲಾಗಿ ತಾನು ಅರೆತಲೆಶೂಲೆ ಮೈಗ್ರೇಯ್ನ್ ನಿಂದ ಬಳಲುತ್ತಿರುವುದು ತಿಳಿಯಿತು.

ಮುಂಬಯಿಯ ಒಂದು ನಿರ್ವಹಣಾ ತರಬೇತು ಸಂಸ್ಥೆಯಲ್ಲಿ ಹಿರಿಯ ಅಧಿಕಾರಿಣಿಯಾಗಿರುವ ದಿವ್ಯಾಮೂರ್ತಿ, ಅರೆತಲೆಶೂಲೆಯಿಂದ ಬಳಲುವ ರೋಗಿಯೊಬ್ಬ ಪಾಲಿಸಬೇಕಾದ ಕಟ್ಟುನಿಟ್ಟಿನ ಜೀವನ ಸಾಗಿಸುತ್ತಿದ್ದಾಳೆ. ತನಗೆ ಅತಿ ಪ್ರಿಯವಾದ ಚೈನೀಜ್ ಆಹಾರ ಮತ್ತು ಚಾಕಲೇಟ್ ಸೇವಿಸುವುದನ್ನು ಬಿಟ್ಟುಬಿಟ್ಟಿದ್ದಾಳೆ. ಇವೆರಡೂ ತಿನಿಸುಗಳು ಅರೆತಲೆಶೂಲೆಗೆಡೆ ಮಾಡಿಕೊಡುತ್ತವೆಂಬುದು ಅವಳಿಗೆ ತಿಳಿದಿದೆ. ತನ್ನ ವ್ಯವಹಾರ ಕುರಿತು ನಿರೂಪಿಸುವುದನ್ನು, ಉರಿಬಿಸಿಲಲ್ಲಿ ಹೋಗದೆ, ಆದಷ್ಟು ಬೆಳಗಿನ ಸಮಯದಲ್ಲಿ ಮುಗಿಸುತ್ತಾಳೆ. ಇವೆಲ್ಲಕ್ಕಿಂತ ಮಿಗಿಲಾಗಿ, ಪೀಡಿಯುವ ಈ ಅರೆತಲೆಶೂಲೆಯಿಂದಾಗಿ ಅವಳು ಎಷ್ಟೋ ಸಲ ಕೆಲಸಕ್ಕೆ ಹಾಜರಾಗದೆ ಬಿಟ್ಟುಬಂದದ್ದುಂಟು. ''ನಾನು ಭಾಗ್ಯಶಾಲಿ...ನನ್ನ ಸಹೋದ್ಯೋಗಿಗಳು ಬಹಳ ಸಹಾನುಭೂತಿಯುಳ್ಳವರಾಗಿದ್ದಾರೆ'' ಎಂದೆನ್ನುತ್ತಾಳೆ.

ಅರೆತಲೆಶೂಲೆಯನ್ನು ತಡೆಯುವ ಮತ್ತು ಓಕರಿಕೆ ಬರದಂತೆ ಮಾಡುವ ಮಾತ್ರೆಗಳನ್ನು ಅವಳು ಸದಾ ತನ್ನ ಕೈಚೀಲದಲ್ಲಿಟ್ಟುಕೊಂಡಿರುತ್ತಾಳೆ. ''ನಾನು ಎಲ್ಲಿಯೇ ಹೋಗಲಿ ಇವುಗಳನ್ನಿಟ್ಟುಕೊಂಡಿರುತ್ತೇನೆ. ಅರೆತಲೆಶೂಲೆ ಬರುತ್ತದೆಂದೆನಿಸುತ್ತಲೇ, ನಾನು ಮಾತ್ರೆಗಳನ್ನು ತೆಗೆದುಕೊಳ್ಳುತ್ತೇನೆ. ಅವುಗಳಿಂದ ನನಗೆ ಸಾಕಷ್ಟು ನೆಮ್ಮದಿ ದೊರಕಿದೆ'' ಎಂದು ಹೇಳುತ್ತಾಳೆ.

ಮುಂಬಯಿಯ ಜಸಲೋಕ ಆಸ್ಪತ್ರೆ

ಆಗಸ್ಟ್ ೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ದಕ್ಷ ಚಾವ್ಲಾರವರ ''ಹೆಲ್ಪ್ ಫಾರ್ ದಿ ಹೆಡ್ಏಕ್ ಫ್ರಮ್ ಹೆಲ್'' ಲೇಖನದ ಕನ್ನಡದ ಅನುವಾದ.

ಮತ್ತು ಸಂಶೋಧನಾ ಕೇಂದ್ರ, ಹಾಗೂ ಲೀಲಾವತಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಡಾ|| ರವಿಶಂಕರ ಎಂಬ ವೈದ್ಯ ಪ್ರತ್ಯೇಕವಾಗಿ ತಲೆಶೂಲೆ ಮತ್ತು ಅರೆತಲೆಶೂಲೆ ಚಿಕಿತ್ಸಾಲಯಗಳನ್ನು ನಡೆಸುತ್ತಿದ್ದಾನೆ. ಈ ವೈದ್ಯನೇ ಮಾತ್ರೆಗಳನ್ನು ತೆಗೆದುಕೊಳ್ಳುವಂತೆ ವಿಷ್ಣುಮೂರ್ತಿಗೆ ಸಲಹೆನೀಡಿದ್ದು. ಅರೆತಲೆ ಶೂಲೆಗಾಗಿ ಮಹತ್ವ ನೀಡಬಲ್ಲ ಭಾರತದಲ್ಲಿನ ಕೆಲವೇ ಚಿಕಿತ್ಸಾಲಯಗಳಲ್ಲಿ ಈ ಎರಡು ಕೇಂದ್ರಗಳು ಮಹತ್ವದ ಪಾತ್ರ ವಹಿಸಿವೆ. ಅರೆತಲೆಶೂಲೆಯ ಉಪದ್ರವದ ಬಗ್ಗೆ ವಿಶೇಷ ಜ್ಞಾನ ಪಡೆದ ವೈದ್ಯರ ಸಂಖ್ಯೆ ಬೆರಳೆಣಿಕೆಯಷ್ಟೇ ಮಾತ್ರವಿದೆ. ನಮ್ಮಲ್ಲಿ ಪ್ರತಿ ಹತ್ತು ಜನರಲ್ಲಿ ಒಬ್ಬ ವ್ಯಕ್ತಿ ಅರೆತಲೆಶೂಲೆಯಿಂದಇಲ್ಲಿ ಗಂಡಸರಿಗಿಂತ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬಳಲುತ್ತಾರೆ. ಇದರಿಂದ ಕೆಲಸಕ್ಕೆ ಗೈರು ಹಾಜರಾಗುವುದು ಮತ್ತು ಉತ್ಪಾದನೆ ಕುಂಠಿತಗೊಳ್ಳುವುದು ನಮ್ಮ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತದೆಂಬುದು ತಿಳಿದಿದ್ದರೂ, ಅರೆತಲೆ ಶೂಲೆಯನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲವೆಂದು ಹೊಸದಿಲ್ಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ನರರೋಗಶಾಸ್ತ್ರ ಮತ್ತು ನರವಿಜ್ಞಾನ ವಿಭಾಗದ ಮುಖ್ಯಸ್ಥನಾಗಿರುವ ಡಾ||ಎಂ.ಸಿ.ಮಹೇಶ್ವರಿ ಹೇಳುತ್ತಾರೆ. ಮುಂಬಯಿಯ ನರರೋಗತಜ್ಞ ಡಾ||ಜನಕನಾಥನ್ ''ಅನೇಕ ಜನರು ಅರೆತಲೆ ಶೂಲೆ ಎಂಬುದು ತಲೆಶೂಲೆಗಿಂತಲೂ ಸೊಗಸಾದಪದವೆಂದು ಭಾವಿಸಿದ್ದಾರೆ...'' ಎಂದು ಹೇಳುತ್ತಾನೆ.

ಇದರ ಹುಟ್ಟು:- ಅರೆತಲೆಶೂಲೆ ಹೊಸದಾಗಿ ಹುಟ್ಟಿಕೊಂಡ ನೋವು ಅಥವಾ ರೋಗವಲ್ಲ. ಕ್ರಿ.ಪೂ. ೪೬೦ರಲ್ಲಿ ಬಾಳಿದ ಗ್ರೀಕ್ ವೈದ್ಯ ಹಿಪ್ಪೊಕ್ರಟೆಸ್ಸನಿಗೆ ಇದರ ಲಕ್ಷಣಗಳ ಬಗ್ಗೆ ತಿಳಿದಿತ್ತು. ಹಿಪ್ಪೊಕ್ರಟೆಸ್ಸನ ತರುವಾಯ ೬ ಶತಕಗಳನಂತರ ಇನ್ನೊಬ್ಬ ಗ್ರೀಕ್ ವೈದ್ಯ ಗ್ಯಾಲೆನ್ ಅರೆತಲೆಶೂಲೆ- ಒಂದೇಬದಿಯಲ್ಲಿ ನೋವಿರುವುದನ್ನು ಗಮನಿಸಿ ಅರೆದಲೆ (Hemicrania) ಎಂದು ಕರೆದ. ಇದರಿಂದಲೇ ಈಗಿನ ಹೆಸರು ಬಂದಿರುವುದು. ಈ ನೋವು ಜನರನ್ನು ಯುಗ ಯುಗಗಳಿಂದ ಪೀಡಿಸುತ್ತಲಿದೆ ಜ್ಯೂಲಿಯಸ್ ಸೀಜರ್, ಸಿಗ್ಮಂಡ ಫ್ರಾಯ್ಡ್ ಮತ್ತು ರಾಜಕುಮಾರಿ ಮಾರ್ಗರೇಟ್ ಇದರಿಂದ ಯಶಸ್ವಿಯಾಗಿ ಮುಕ್ತಿ ಪಡೆದದ್ದುಂಟು.

ಇದರ ದಾಳಿಯಿಂದ ಬಳಲುವವರು, ಶಬ್ದ (ಸಪ್ಪಳ) ಮತ್ತು ಬೆಳಕನ್ನು ಎದುರಿಸಲಸಾಧ್ಯ. ತಲೆಶೂಲೆ ಪ್ರಾರಂಭವಾಗುವ ಮೊದಲು ಪ್ರತಿ ಹತ್ತರಲ್ಲಿ ಒಬ್ಬನು ತನ್ನೆದುರಿಗೆ ಒಂದು 'ದಿವ್ಯಪ್ರಭೆ' ಇರುವುದನ್ನನುಭವಿಸುತ್ತಾನೆ.... ಇದು ಒಂದು ದೃಶ್ಯದ ರೂಪತಾಳಿ ಭ್ರಮಾದೃಶ್ಯವೆನಿಸುತ್ತದೆ. ಈ ಪ್ರಭೆ ೩೦ ನಿಮಿಷಗಳಿಂದ ಒಂದುಗಂಟೆಯುವರೆಗಿದ್ದು ವಿಧವಿಧವಾದ ಮಿಂಚನ್ನು, ಕಚ್ಚುಕಚ್ಚಾದ ನಕ್ಷತ್ರಗಳು, ಉರಿಯುವ ಚಕ್ರಗಳು, ಜ್ಯಾಮಿತಿಯ ಆಕಾರಗಳು, ಕಣ್ಣುಕುಕ್ಕಿಸುವ ಕಲ್ಲು ಚೂರುಗಳ ವಿನ್ಯಾಸಗಳನ್ನು ಹುಟ್ಟಿಸುತ್ತದೆ. ಇದು ಒಂದು ಭಾಗ ಕತ್ತಲೆಗವಿಯುವ ಕುರುಡು ಚುಕ್ಕೆಯನ್ನು ಹುಟ್ಟಿಸುತ್ತದೆ. ಅದರ ಆಳತೆ ದೊಡ್ಡದಾಗುತ್ತ ಹೋಗಿ ಆ ಸ್ಥಳವೆಲ್ಲ ಖಾಲಿಯಾಗಿ ಬಿಡುತ್ತದೆ.

ಈ ದೃಶ್ಯದ ಪರಿಣಾಮ ಸಾಕಷ್ಟು ಭಯ ಹುಟ್ಟಿಸುವಂಥವಾಗಿರುತ್ತವೆ. ಮುಂಬಯಿಯ ಸೊಸಾಯಿಟಿ ಜನರಲ್ ಬ್ಯಾಂಕಿನಲ್ಲಿ ಕೆಲಸ ಮಾಡುವ ೨೬ ವರ್ಷದ ಜಯಶ್ರೀ ಅಗರವಾಲಳಿಗೆ ಮೊದಲ ಸಲ ಅರೆತಲೆಯ ಅನುಭವವಾದಾಗ, ತಾನು ದೃಷ್ಟಿ ಕಳೆದುಕೊಳ್ಳುತ್ತಿರಬಹುದೆಂದೆನಿಸಿತ್ತು. ''ನನಗೆ ಎಲ್ಲವೂ ತೇಪೆ-ತೇಪೆಯಾಗಿ ಕಾಣಿಸಹತ್ತಿತು. ನನ್ನ ಸಹೋದ್ಯೋಗಿಗಳನ್ನು ಪೂರ್ತಿಯಾಗಿ ನೋಡಲಾಗುತ್ತಿರಲಿಲ್ಲ.'' ಎಂದು ಹೇಳಿದಳು. ಇನ್ನೊಮ್ಮೆ ಅವಳು ಜನಸಂದಣಿಯಿಂದ ತುಂಬಿದ ರೈಲು ನಿಲ್ದಾಣದಲ್ಲಿದ್ದಾಗ ಇದರ ದಾಳಿಯಾಯಿತು.

''ನಾನು ಸ್ತಂಭೀಭೂತಳಾದೆ. ಸುದೈವದಿಂದ, ಸುಮಾರು ೪೫ ನಿಮಿಷಗಳ ನಂತರ ನನಗೆ ಎಲ್ಲವೂ ಸ್ಪಷ್ಟವಾಗಿ ಕಾಣಿಸ ಹತ್ತಿತು'' ಎಂದಳು.

ಇದರ ಉಗಮದ ಕಾರಣ ಮತ್ತು ಅದು ಹುಟ್ಟಿಸುವ ಭಯದ ಬಗ್ಗೆ ವೈಜ್ಞಾನಿಕವಾಗಿ ಯಾವುದೇ ಖಚಿತ ನಿರ್ಧಾರ ಕಂಡು ಕೊಂಡಿಲ್ಲ. ಆದರೆ ಇದು ಮಾನವ ದೇಹದ ಮುಖ್ಯಕೆಲಸಗಳಾದ ನಿದ್ರೆ, ಹಸಿವು, ನೀರಡಿಕೆ, ಉಷ್ಣತೆ ಮತ್ತು ಭಾವನೆಗಳನ್ನು ನಿಯಂತ್ರಿಸುವ ಪ್ರಮುಖ ಅಂಗವಾದ ಮೆದುಳಿನ ಹೈಪೋತಾಲ್ಮಸ್‌ಗೆ ಸಂಬಂಧಿಸಿದ್ದೆಂದು ಎಲ್ಲರೂ ಒಪ್ಪಿದ ವಾದವಾಗಿದೆ. ಸಿರೊಟೊನಿನ್ ಎಂಬ ನರ ರಸಾಯನಿಕ (ಅಥವಾ ನರವಾಹಕ) ವನ್ನು ಸಂಗ್ರಹಿಸಿಡಲಾಗುವ ಕೆಲವು ಕೇಂದ್ರಗಳಲ್ಲಿ ಇದೂ ಒಂದು. ''ಮುಖ್ಯವಾಗಿ, ಮಿದುಳಿನಲ್ಲಿ ಸಿರೊಟೊನಿನ ಮಟ್ಟದಲ್ಲಿ ಬದಲಾವಣೆಗಳಾದಾಗ, ಅಕಸ್ಮಾತ್ತಾಗಿ ಅರೆತಲೆ ಶೂಲೆ ಕಾಣಿಸಿಕೊಳ್ಳುತ್ತದೆ'' ಎಂದು ಮದ್ರಾಸ್ ಮೈಗ್ರೇನ್ ಸಂಶೋಧನಾ [illegible] ಯನ್ನು ಸ್ಥಾಪಿಸಿದ ಡಾ|| ಅಡಿಸಾರ [illegible] ಪನ್ನೀರ ಹೇಳಿದ್ದಾರೆ. ''ಈ ಬದಲಾವಣೆಗಳು ತಲೆಯ ರಕ್ತನಾಳಗಳನ್ನು [illegible] ಕುಗ್ಗಿಸುವುದರಿಂದ ನೋವು ಉಂಟಾಗುತ್ತದೆ... ಎಂದು ಅವರ ಅಭಿಪ್ರಾಯ.

ಚೆನ್ನೈ ಅಪೋಲ್ಲೊ ಆಸ್ಪತ್ರೆಗಳಲ್ಲಿ ಹಿರಿಯ ನರರೋಗ ಸಲಹೆಗಾರರಾಗಿರುವ ಡಾ|| ಪನ್ನೀರ, ಅರೆತಲೆಶೂಲೆಯಿಂದ ಬಳಲುವವರು ಒಂದು ದಿನಚರಿ(ಡೈರಿ) ಇಟ್ಟುಕೊಂಡು ಅದರಲ್ಲಿ ಪ್ರತಿಸಲ ಬಾಧೆಯಾದದ್ದನ್ನು ಬರೆದರೆ ಅದರ ಮೂಲಕ ಅರೆತಲೆಶೂಲೆಯ ದಾಳಿಯ ಕಾರಣ ಗುರುತಿಸಿ, ಆ ದಾಳಿಗೆ ಪ್ರಚೋದನೆ ನೀಡುವ ಅಂಶಗಳಿಂದ ಕಾಪಾಡಲು ಪ್ರಯತ್ನಿಸಬಹುದೆಂದು ಸೂಚಿಸಿದ್ದಾರೆ. ಎಷ್ಟೋಸಲ ಈ ಎಲ್ಲ ಅಂಶಗಳ ಸಂಯೋಗದಿಂದಲೂ ದಾಳಿಗಳಾಗುವುದುಂಟು. ಆಹಾರದ ಕೊರತೆ, ಕೆಲವೊಮ್ಮೆ ಚಾಕಲೇಟ್, ಹಾಲಿನಲ್ಲಿ ತಯಾರಿಸಲಾದ ತಿನಿಸುಗಳು, ಹುಳಿಹಣ್ಣುಗಳು, ಮೊನೊ ಸೋಡಿಯಮ್ ಗ್ಲುಟಾಮೇಟ್ ಹೊಂದಿರುವ ಆಲ್ಕೊಹಾಲ್ ಸೇವನೆ, ಮುಟ್ಟು ಅಥವಾ ಋತು ಬಂಧಕ್ಕೆ ಸಂಬಂಧಿಸಿದ ಹಾರ್ಮೋನಿನ ಬದಲಾವಣೆಗಳು, ಮಾನಸಿಕ ಒತ್ತಡ, ನಿದ್ರೆಯ ಅವಧಿಯಲ್ಲಿನ ಬದಲಾವಣೆಗಳು, ಬಹಳ ಅವಧಿಯವರೆಗೆ ಮೋಟಾರು ಓಡಿಸುವುದು ಅಥವಾ ಒಂದು ಕಂಪ್ಯೂಟರ್‌ನ್ನು ಸತತವಾಗಿ ಬಳಸುವುದರಿಂದ ತಲೆ ಮತ್ತು ಕುತ್ತಿಗೆಯಲ್ಲಿ ಬರುವ ನೋವುಗಳೆಲ್ಲ ಅರೆತಲೆಶೂಲೆಗೆ ಪ್ರಚೋದಕ ಅಂಶಗಳು.

ಬೆಳಗಿನ ಅಲ್ಪೋಪಹಾರವನ್ನು ಬಿಟ್ಟುಬಿಡುವುದೇ ಒಂದು ಅಪರಾಧವೆಂದೆನಿಸುತ್ತದೆ. ಮುಂಬಯಿಯ ಭೊಂಬೆ ಆಸ್ಪತ್ರೆಯಲ್ಲಿ ನರರೋಗ ಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಪ್ರೊಫೆಸರ್ ಆಗಿರುವ ಡಾ|| ಎಸ್.ಬಿ.ಸಿಂಘಾಲ್ ''ಬೆಳಗಿನ ನನ್ನ ಊಟ ತಪ್ಪಿಸಿದೆನೆಂದರೆ... ನನಗೆ ಅರೆತಲೆಶೂಲೆ ಬರುವದುಂಟು'' ಎಂದು ಹೇಳಿದ್ದಾರೆ. ತಮ್ಮ ವಿಭಾಗದ ಕೋಣೆಯಲ್ಲಿ ಪರದೆ ಹಾಕಿಸಿರುವ ಡಾ|| ಸಿಂಘಾಲ್, ಜನ ಸಾಮಾನ್ಯರು ತಲೆಶೂಲೆಗೆ ಮದ್ದೆಂದು ಬಳಸುವ ಜಿಲೇಬಿಮಿಶ್ರಿತ ಹಾಲು ಪರಿಹಾರ ನೀಡುತ್ತದೆಂಬುದನ್ನು ಒಪ್ಪುತ್ತಾರೆ.

ನಮ್ಮ ಮನೋಭಾವ ಮತ್ತು ವರ್ತನೆಯಲ್ಲಾಗುವ ಸೂಕ್ಷ್ಮ ಬದಲಾವಣೆಗಳು ಅರೆತಲೆ ಶೂಲೆ ತರಬಲ್ಲವು. ತಾನು ಕೆಲಸದಲ್ಲಿರುವಾಗ, ಸಿಟ್ಟು ಬರುವ ಪ್ರಸಂಗ ಬಂದಾಗ ವಿದ್ಯಾ ಮೂರ್ತಿ ಇತರರ ಜೊತೆ ಮಾತಾಡ ಬಯಸುವುದಿಲ್ಲ. ಅವಳಿಗೆ ಅರೆತಲೆಶೂಲೆಯ ಲಕ್ಷಣಗಳು ಗೊತ್ತಾಗಿ ಬಿಟ್ಟಿವೆ. ''ನನಗೆ ಹಾಗೆನಿಸಿದಾಗ ನಾನು ನನ್ನ ಗೆಳೆಯರಿಗೆ ನನಗೆ ತಲೆ ಶೂಲೆ ಬರಲಿದೆ...

ಆದ್ದರಿಂದ ನಾನು ಒಬ್ಬಳೇ ಇರಬಯಸುತ್ತೇನೆಂದು ತಿಳಿಸಿಬಿಡುತ್ತೇನೆ'' ಎಂದು ಹೇಳುತ್ತಾಳೆ.

ಒಂದು ದಾಳಿ ಬರಲಿದೆಂಬುದು ಮೊದಲೇ ತಿಳಿದು ಬಂದರೆ, ಯಾವುದೇ ಅಂಗಡಿಯಲ್ಲಿ ದೊರೆಯಬಹುದಾದ ಆಸ್ಪಿರಿನ್, ಪ್ಯಾರಾಸೆಟಮಾಲ್ ಮಾತ್ರೆಗಳನ್ನು ತೆಗೆದುಕೊಂಡು ತಲೆಶೂಲೆ ಹೆಚ್ಚಾದಂತೆ ತಡೆಯಬಹುದು. ಆದರೆ ಮಾತ್ರೆ ತೆಗೆದುಕೊಂಡ ನಂತರವೂ ನಿಯಂತ್ರಿಸಲಾಗದಿದ್ದರೆ, ಹೊಟ್ಟೆಯಲ್ಲಿ ನಡೆಯುವ ಕೆಲವು ಬದಲಾವಣೆಗಳಿಂದಾಗಿ ಸೇವಿಸಿದ ಮಾತ್ರೆಗಳು ರಕ್ತಪ್ರವಾಹದಲ್ಲಿ ಸೇರಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲವೆಂದೆನಿಸುತ್ತದೆ.

ಪರಿಹಾರ:- ಒಕರಿಕೆ ಮತ್ತು ತಲೆಶೂಲೆ ಎರಡನ್ನೂ ದೂರ ಮಾಡುವ ಬೀಟಾತಡೆ ಮಾತ್ರೆಗಳನ್ನು ಕೊಡಬಹುದು. ಇವುಗಳನ್ನು ಸಾಮಾನ್ಯವಾಗಿ ರಕ್ತದ ಒತ್ತಡವನ್ನು ಇಳಿಸಲು ನೀಡಲಾಗುತ್ತದೆ. ಆದರೆ ಒಂದು ಸರಿಯಾದ ಚಿಕಿತ್ಸೆಯನ್ನು ಕಂಡುಹಿಡಿಯುವುದು ಯಾವಾಗಲೂ ಸುಲಭದ ಕೆಲಸವಲ್ಲ. ಇದರಿಂದಾಗಿ ಅರೆತಲೆಶೂಲೆಯಿಂದ ಬಳಲುವವರು ನಿರಾಶರಾಗುತ್ತಾರೆ. ೫೩ವರ್ಷದ ಶಾಲಾ ಶಿಕ್ಷಕಿಯಾದ ಮೀರಾನಾಗರಾಜನ್ ''ಯಾವ ಯಾವ ಮಾತ್ರೆಗಳು ನಿಮ್ಮ ಬೇನೆ ದೂರ ಮಾಡಬಲ್ಲವೆಂಬುದನ್ನು ಕಂಡುಹಿಡಿಯಲು ವೈದ್ಯರಿಗೆ ಸ್ವಲ್ಪ ಸಮಯ ಬೇಕಾಗಬಹುದು'' ಎಂದು ಹೇಳುತ್ತಾಳೆ. ಈ ಮಹಿಳೆ ಸುಮಾರು ಎರಡು ದಶಕಗಳಿಂದ ಅರೆತಲೆಶೂಲೆಯಿಂದ ಬಳಲುತ್ತಿದ್ದಾಳೆ. ''ಆದರೆ ಒಮ್ಮೆ ಸರಿಯಾದ ಔಷಧಿ- ನನಗೆ ಆದಂತೆ-ಕೆಲಸ ಮಾಡ ಹತ್ತಿತೆಂದರೆ ನಿಮಗೆ ಹೊಸ ಜೀವ ದೊರಕಿದಂತಾಗುತ್ತದೆ'' ಎಂದೆನ್ನುತ್ತಾಳೆ.

ಎಷ್ಟೋ ಸಂದರ್ಭಗಳಲ್ಲಾಗುವಂತೆ ಶ್ರೀಮತಿ ನಾಗರಾಜನ್ ಅವರ ಕುಟುಂಬದಲ್ಲಿ ಅರೆತಲೆಶೂಲೆ [illegible]ಗತವಾಗಿ ಬಂದಿದೆ. ಆಕೆಯ ತಾಯಿ ಮತ್ತು ಇಬ್ಬರು ಚಿಕ್ಕಮ್ಮಂದಿರು ಕೂಡಾ ಇದರಿಂದ ಬಳಲಿದ್ದರು. ''ಇದರ ಬಾಧೆಯಿಂದ ಕೆಲವೊಮ್ಮೆ ನಾನು ೩ ದಿನಗಳ ವರೆಗೆ ಬಳಲಿದ್ದುಂಟು. ಪ್ರತಿತಿಂಗಳು ೧೫-೨೦ ದಿನಗಳವರೆಗೆ ಇದು ನನ್ನನ್ನು ಬಾಧಿಸಿದ್ದುಂಟು'' ಎಂದು ಶ್ರೀಮತಿ ನಾಗರಾಜನ್ ಹೇಳುತ್ತಾಳೆ. ಮುಂದುವರೆಸಿ'' ನನಗೆ ನಿದ್ರೆ ಬರುತ್ತಿರಲಿಲ್ಲ. ಆ ಬೇನೆಯೇ ಅಷ್ಟು ತೀವ್ರವಾಗಿರುತ್ತಿತ್ತು. ನನ್ನ ಹಣೆಯ ಸುತ್ತ ಒಂದು ಬಟ್ಟೆಯನ್ನು ಗಟ್ಟಿಯಾಗಿ ಬಿಗಿದು ಕೊಂಡು, ಕತ್ತಲಲ್ಲಿ ಮಲಗಿಬಿಡುತ್ತಿದ್ದೆ'' ಎಂದೆನ್ನುತ್ತಾಳೆ.

ಅರೆತಲೆಶೂಲೆಯಿಂದ ಬಳಲುವ ಅನೇಕ ಜನರಂತೆ ಶ್ರೀಮತಿ ನಾಗರಾಜನ್, ತನ್ನ ತಲೆ ಸಿಡಿಯುತ್ತಿದ್ದರೂ ಕೆಲಸಕ್ಕೆ ಹಾಜರಾಗುತ್ತಿದ್ದಳು. ''ಅಂಥ ದಿನಗಳಲ್ಲಿ ನನ್ನಿಂದ ಸರಿಯಾಗಿ ಕೆಲಸ ಮಾಡಲಾಗುತ್ತಿರಲಿಲ್ಲ''ವೆಂಬುದನ್ನು ಅವಳು ಒಪ್ಪಿಕೊಳ್ಳುತ್ತಾಳೆ. ತಾವು ಕೆಲಸ ಕಳೆದುಕೊಂಡೇವೆಂಬ ಭಯ ಇಂಥವರನ್ನು ಕಾಡುತ್ತಿರುತ್ತದೆ. ಅರೆತಲೆಶೂಲೆಯಿಂದ ಉದ್ಭವಿಸುವ ಈ ಭಯ ಎಷ್ಟೇ, ಸಾಮಾನ್ಯವಾಗಿದೆಯೆಂದರೆ, ಒಬ್ಬ ಬ್ರಿಟಿಷ ನರರೋಗತಜ್ಞ ಇದಕ್ಕೊಂದು ಪದ ಟಂಕಿಸಿದ್ದಾನೆ: ಸಿಹಿಭಯ.

ಅರೆತಲೆಶೂಲೆಯನ್ನು ತಡೆಯುವಲ್ಲಿ ಸುಮಾಟ್ರಿಪ್ಟಾನ್ ಎಂಬ ಮಾತ್ರೆ ಕೆಲವು ಪ್ರಸಂಗಗಳಲ್ಲಿ ಬಹಳ ಪರಿಣಾಮಕಾರಿಯೆನಿಸಿದೆ. ಸೆರೊಟೊನಿನಲ್ಲಿನ ರಸಾಯನಿಕ ಪ್ರತ್ಯಾಮ್ಲ ಇದರಲ್ಲಿಯೂ ಇರುವದರಿಂದ ಇದು ಕೂಡಾ ನರವಾಹಕವಾಗಿ ಅರೆತಲೆಶೂಲೆಯ ದಾಳಿಯನ್ನು ಎದುರಿಸಿ ತಲೆಯ

ರಕ್ತನಾಳಗಳು ಉಬ್ಬಿ ಬಾಧಿಸುವುದನ್ನು ಕಡಿಮೆ ಮಾಡುತ್ತದೆ. ಇದು ಮಾತ್ರೆ ಹಾಗೂ ಚುಚ್ಚುಮದ್ದಿನ ರೂಪದಲ್ಲಿ ದೊರೆಯುತ್ತದೆ. ಮಾತ್ರೆಯನ್ನು ಸೇವಿಸಿದ ಅರ್ಧಗಂಟೆಯಾಗುವಷ್ಟರಲ್ಲಿ ನೋವು ಕಡಿಮೆಯಾಗುತ್ತದೆ. ಚುಚ್ಚುಮದ್ದು ತೆಗೆದುಕೊಂಡರೆ ಹತ್ತೇನಿಮಿಷದಲ್ಲಿ ಇದರ ಬಾಧೆ ಕಡಿಮೆಯಾಗುತ್ತದೆ. ಈ ಮಾತ್ರೆಯ ಬಳಕೆಯಿಂದ ಕೆಲಕಾಲ ಎದೆಯಲ್ಲಿ ನೋವು, ತಲೆಸುತ್ತುವಿಕೆ, ತೂಕಡಿಕೆ ಕಾಣಿಸಿಕೊಳ್ಳಬಹುದು. ಆದ್ದರಿಂದ ೧೮ವರ್ಷಕ್ಕಿಂತಲೂ ಕಡಿಮೆ ಹಾಗೂ ೬೫ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಅಥವಾ ಹೃದರೋಗ ಅಥವಾ ರಕ್ತಒತ್ತಡದಿಂದ ಬಳಲುವವರು ಈ ಮಾತ್ರೆಗಳನ್ನು ತೆಗೆದುಕೊಳ್ಳಬಾರದು. ಸುಮಾರು ೩೦ವರ್ಷಗಳಿಂದ ಅರೆತಲೆಶೂಲೆಯಿಂದ ಬಳಲಿದ ಚೆನ್ನೈ ವೈದ್ಯ ಡಾ॥ರವಿಕುಮಾರ ಪಾರಸಾ, ಸುಮಾಟ್ರಿಪ್ಟಾನಿನ ಚುಚ್ಚುಮದ್ದು ತೆಗೆದುಕೊಂಡಾಗಲೆಲ್ಲ ಅವನಲ್ಲಿ ನಿಶ್ಶಕ್ತಿಯುಂಟಾಗಿ ಕೆಲನಿಮಿಷಗಳವರೆಗೆ ಮಲಗಿರಬೇಕಾಗುತ್ತಿತ್ತು. ಆದರೆ''ಇದಾದನಂತರ ನಾನು ೧೦ಗಂಟೆಗಳವರೆಗೆ ಸತತವಾಗಿ ಕೆಲಸಮಾಡಬಲ್ಲೆ... ಸುಮಾಟ್ರಿಪ್ಟಾನ್ ನನ್ನ ಜೀವನವನ್ನೇ ಬದಲಿಸಿದೆ'' ಎಂದೆನ್ನುತ್ತಾನೆ.

ಇಂದು ವಿಶ್ವಾದ್ಯಂತ ಅರೆತಲೆಶೂಲೆ ಕುರಿತು ಸಂಶೋಧನೆ ನಡೆಸಲಾಗುತ್ತಿದೆ. ಬ್ರಿಟನ್ನಿನಲ್ಲಿ, ಲಂಡನ್ನಿನಲ್ಲಿನ ಹೆಮರಸ್ಮಿತ್ ಆಸ್ಪತ್ರೆಯಲ್ಲಿ , ವೈದ್ಯರು ಬಿಸಿಲು ಕನ್ನಡಕ ಬಳಸಿ, ಬಣ್ಣದ ಬೆಳಕಿಗೆ ರೋಗಿಗಳ ಕಣ್ಣಲ್ಲಾಗುವ ಸ್ಪಂದನ ಕುರಿತು ಮಾಡಿದ ಅಧ್ಯಯನ ಒಳ್ಳೆಯ ಫಲಿತಾಂಶ ನೀಡಿವೆ. ಒಂದು ಬಟ್ಟೆಯ ಪಟ್ಟಿಯನ್ನು ತಲೆಗೆ ಬಿಗಿಯಾಗಿ ಕಟ್ಟುವುದರಿಂದ ಕಪೋಲಗಳ ಮೇಲೆ ಒತ್ತಡ ಬಿದ್ದು, ಹಿಗ್ಗಿದ ರಕ್ತನಾಳಗಳು ಸಂಕುಚಿತಗೊಂಡು ಬೇನೆ ಕಡಿಮೆಯಾಗುತ್ತದೆಂದು ಅಮೆರಿಕೆಯಲ್ಲಿ ನಡೆಸಲಾದ ಸಂಶೊಧನೆಯಿಂದ ತಿಳಿದು ಬಂದಿದೆ. ''ಈಗ ನಡೆಸಲಾಗುತ್ತಿರುವ ಸಂಶೋಧನೆಯಿಂದ ಅರೆತಲೆಶೂಲೆ ಬಾಧಿಸುವಾಗ ಮೆದುಳಿನಲ್ಲಿ ಏನು ನಡೆಯುತ್ತಿರುತ್ತದೆ ಮತ್ತು ರೋಗಿಗಳಿಗೆ ಹೇಗೆ ಪರಿಣಾಮಕಾರಿಯಾದ ಪರಿಹಾರ ನೀಡಬಹುದೆಂಬುದನ್ನು ಅರಿತುಕೊಳ್ಳುವಲ್ಲಿ ಅನುಕೂಲವಾಗುತ್ತದೆ'' ಎಂದು ಡಾ॥ರವಿಶಂಕರ ಹೇಳುತ್ತಾನೆ.

ಸ್ವಾತಂತ್ರ್ಯವನ್ನು ಪಡೆಯಲು ತೆತ್ತಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕಾಗುವುದು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಸಾಕಿಕೊಂಡು ಹೋಗಬೇಕು.

ನೆಹರೂಜಿ

ಸ್ಕಾಲ್ಪೆಲ್ ಹಿಡಿದ ತೀರ್ಥಯಾತ್ರಿ ಡಾ. ಶರದ್ ಕುಮಾರ್ ದೀಕ್ಷಿತ್

ಟಿ.ಎಸ್. ಲಲಿತ
೭೦೨,೧ನೇ ಮಹಡಿ, ೧೭ನೇ ಮುಖ್ಯರಸ್ತೆ
ಸರಸ್ವತಿಪುರಂ , ಮೈಸೂರು-೫೭೦೦೦೯

ಮೂರು ಹೆಜ್ಜೆ ಮುಂದಿಡಲಾಗದ ನಿಲ್ಲಲಾಗದ, ಸಹಜವಾಗಿ ಉಸಿರಾಡಲಾರದ ಈತ 'ವರ್ಷ ವ್ಯಕ್ತಿ' ಎಂದಾಗ ಅಚ್ಚರಿ ಎನಿಸೀತು. ಆದರೆ ವ್ಯಕ್ತಿಯ ಕಾರ್ಯವ್ಯಾಪ್ತಿಯ ಪರಿಚಯವಾದಾಗ ಗೌರವ ಪೂರಿತ ಮೆಚ್ಚುಗೆ ಅಚ್ಚರಿಯ ಸ್ಥಾನ ತುಂಬುತ್ತದೆ. ಇವರೇ ಡಾ. ಶರದ್ ಕುಮಾರ್ ದೀಕ್ಷಿತ್. ಅಲಾಸ್ಕಾದ ಫೇರ್ ಬ್ಯಾಂಕ್ ನಲ್ಲಿ ಅತ್ಯಂತ ಯಶಸ್ವಿ ಪ್ಲಾಸ್ಟಿಕ್ ಸರ್ಜನ್.

೧೯೭೮ರ ಕಾರ್ ಅಪಘಾತ ದೀಕ್ಷಿತರ ದೇಹದ ಬಲಭಾಗವನ್ನು ನಿಷ್ಕ್ರಿಯಗೊಳಿಸಿತ್ತು. ನಾಲ್ಕು ವರ್ಷಗಳ ಸುಧಾರಣೆಯ ಅನಂತರ ಶ್ವಾಸನಳಿಗೆಯ ಕ್ಯಾನ್ಸರ್ ಆಕ್ರಮಣ. ಬದುಕಿನ ಗಡುವು ಇನ್ನು ಕೇವಲ ಆರು ತಿಂಗಳೆಂದು ವೈದ್ಯರ ಅಭಿಪ್ರಾಯ. ವಿಕಿರಣ ಚಿಕಿತ್ಸೆಯಿಂದ ಜೀವ ಅಂಟಿಕೊಂಡಿತ್ತು. ಶ್ವಾಸನಳಿಗೆ ಅಳಿದಾಗ ೫ ವರ್ಷಗಳ ಮೂಕತನ. ೧೯೮೮ ಹಾಗೂ ೯೪ರಲ್ಲಿ ಎರಡು ಬಾರಿ ತೀವ್ರ ಹೃದಯಾಘಾತ. ಟ್ರಿಪಲ್ ಬೈಪಾಸ್ ಸರ್ಜರಿಗಾಗಿ ನ್ಯೂಯಾರ್ಕ್‌ಗೆ ಪ್ರಯಾಣ. ಆದರೂ ವರ್ಷಕ್ಕೆ ೫ ತಿಂಗಳು ಭಾರತಕ್ಕೆ ಭೇಟಿ ನೀಡಿ ಮುಖದ ವಿಕಲತೆಯುಳ್ಳ ಬಡರೋಗಿಗಳಿಗೊಂದು ಹೊಸ ಮುಖ ಹಾಗೂ ಹೊಸ ಭವಿಷ್ಯ ನೀಡಲು ಗಾಲಿ ಕುರ್ಚಿಯಲ್ಲಿ ಕುಳಿತೇ ಪ್ಲಾಸ್ಟಿಕ್ ಸರ್ಜರಿ ನಡೆಸುತ್ತಾರೆ. ೧೯೬೮ರಲ್ಲಿ ಮುಂಬಯಿಯಲ್ಲಿ ಮೊದಲ ಬಾರಿಗೆ ೩೦೦ ರೋಗಿಗಳಿಗೆ ಚಿಕಿತ್ಸೆ ನೀಡಿದಂದಿನಿಂದಲೂ ಹರಿದ ತುಟಿ, ಬಾಯಿ, ಮುಖದ ಕಲೆಗಳು, ಕಿಳಸರಿದ ಕಣ್ಣೆವೆಗಳು, ಮಾಲ್ಗಣ್ಣುಗಳನ್ನು ಸರಿಪಡಿಸಲು ೪೪೦೦೦ಕ್ಕೂ ಹೆಚ್ಚು ಉಚಿತ ಪ್ಲಾಸ್ಟಿಕ್ ಸರ್ಜರಿಗಳನ್ನು ಮಾಡಿದ್ದಾರೆ ಡಾ. ದೀಕ್ಷಿತ್.

ಕಳೆದ ೮ ವರ್ಷಗಳಿಂದ ಅಮೇರಿಕಾದ ಪ್ಲಾಸ್ಟಿಕ್ ಸರ್ಜನರು ೬೯ ವರ್ಷದ ದೀಕ್ಷಿತರ ಭಾರತಯಾತ್ರೆಯಲ್ಲಿ ಅವರ ಜೊತೆಗೂಡುತ್ತಾರೆ. ಈ ವರ್ಷ ಅವರ ೩೦ ಕ್ಯಾಂಪುಗಳಲ್ಲಿ ಮೊದಲನೆಯದು ನವೆಂಬರ್ ೧೫ರಂದು ಮಹಾರಾಷ್ಟ್ರದ ಪೆಟಾನ್ ನಲ್ಲಿ ಪ್ರಾರಂಭವಾಯ್ತು. ತಮ್ಮ ಹುಟ್ಟುಹಬ್ಬವಾದ ಡಿಸೆಂಬರ್ ೧೨.ರಂದೂ ಶಸ್ತ್ರಚಿಕಿತ್ಸೆ ನಡೆಸಿದ ದೀಕ್ಷಿತರಿಗೆ ವಿರಾಮ ವಿರಳ. ಮಾರ್ಚ್‌ನಲ್ಲಿ ಕ್ಯಾಂಪ್ ಅಂತ್ಯಗೊಳ್ಳುವ ವೇಳೆಗೆ ಬದುಕಿನಲ್ಲಿ ಭರವಸೆ ಕಳೆದ ೫೦೦೦ ಜನಕ್ಕೆ ಹೊಸ ಬದುಕು ನೀಡುವ ಉದ್ದೇಶ ದೀಕ್ಷಿತರದು. ಕಳೆದ ವರ್ಷ ನಡೆಸಿದ್ದು ೩.೫೦೦ ಶಸ್ತ್ರಚಿಕಿತ್ಸೆಗಳು 'ಬಡವನೊಬ್ಬ ಈ ಅಂಗವಿಕಲತೆಗೊಳಗಾದರೆ ಅವನ ಜೀವನ ದುರ್ಭರ. ಶಸ್ತ್ರ ಚಿಕಿತ್ಸೆಗಾಗಿ ಅವನು ೨೫೦೦೦ ರೂ ಖರ್ಚುಮಾಡಲಾರ . ಕೆಲಸ ಸಿಗದೆ ಮದುವೆಯಾಗದೆ ಅಂಥ ವ್ಯಕ್ತಿ ಆತ್ಮ ವಿಶ್ವಾಸ ಕಳೆದುಕೊಳ್ಳುತ್ತಾನೆ'' ಎನ್ನುತ್ತಾರೆ ದೀಕ್ಷಿತ್. ಪ್ರತಿ ವರ್ಷ, ಭಾರತದಲ್ಲಿ ೨ ಮಿಲಿಯನ್ ಮಕ್ಕಳು ಮುಖದ ಈ ವಿಕಲತೆಯೊಂದಿಗೆ ಹುಟ್ಟುತ್ತಾರೆ. ಹಾಗಾಗಿ ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ದೀಕ್ಷಿತರದು ಕಾಲದ ವಿರುದ್ಧ ಹೋರಾಟ.

ಪ್ರತಿಕ್ಷಣವೂ ಅವರಿಗೆ ಅಮೂಲ್ಯ. ಕಾರಣ ತಮ್ಮ ದುರದೃಷ್ಟ ಮುಖದಿಂದ ತಮ್ಮನ್ನು ರಕ್ಷಿಸಲು ಅಚ್ಚರಿಗೊಳಿಸುವಷ್ಟು ತೀವ್ರ ಚುರುಕುತನದ ವೈದ್ಯರಿಗಾಗಿ ರಾತ್ರಿಯಿಂದಲೇ ಕಾದಿರುವ ರೋಗಿಗಳ ಉದ್ದ ಸಾಲು ... ವರು ಊಟಬಟ್ಟೆಯ ಹೊರತು ಮತ್ತೇನೂ

ದಿ ವೀಕ್ ಪತ್ರಿಕೆಯಲ್ಲಿ ಪ್ರಕಟವಾದ ಜಯಂತ್ ಮೆಮನ್ ಮ್ಯಾಥ್ಯೂ ಮತ್ತು ಮರಿಯ ಅಬ್ರಹ್ಯಾಮ್ ರವರ ಪಿಲಿಗ್ರಿಮ್ ವಿಥ್ ದಿ ಸ್ಕಾಲ್ಪೆಲ್ ಲೇಖನದ ಭಾವಾನುವಾದ

ಇಲ್ಲದಷ್ಟು ಕಡು ಬಡವರು. ಮೂಲೆಯ ಹಳ್ಳಿಗಳಿಂದ ದೀರ್ಘಪ್ರಯಾಣ ಮಾಡಿ ಉಚಿತ ಕ್ಯಾಂಪಿಗೆ ಬಂದವರು.

ಶಸ್ತ್ರಚಿಕಿತ್ಸಾ ಕೊಠಡಿಯ ಒಳಗೆ ಚಟುವಟಿಕೆಗಳು ಗಡಿಯಾರದ ಮುಳ್ಳಿನೊಂದಿಗೆ ಸ್ಪರ್ಧಿಸುತ್ತವೆ. ಒಮ್ಮೆಗೆ ಮಕ್ಕಳು ಅರವಳಿಕೆಯ ವಿವಿಧ ಹಂತಗಳಲ್ಲಿರುತ್ತಾರೆ. ಮಧ್ಯಾಹ್ನಕ್ಕೆ ಕೆಲವು ನಿಮಿಷಗಳಿರುವಾಗಲೇ ದೀಕ್ಷಿತರು ರಿಕಾರ್ಡ್ ಪ್ಲೇಯರ್ ಗುಂಡಿಯೊತ್ತಿದಾಗ ಲತಾಮಂಗೇಶ್ಕರಳ ಭಜನೆ ಕೊಠಡಿ ತುಂಬುತ್ತದೆ. ಮಧ್ಯಾಹ್ನ೧೨ಕ್ಕೆ ೨ವರ್ಷದ ಶೀಲಳ ಎಡತೋಳಿಗೆ ಅರವಳಿಕೆ ಹಾಗೂ ನೋವು ನಿವಾರಕ ಚುಚ್ಚಿ ಅವಳ ಹರಿದ ತುಟಿಗೆ ಇಂಜೆಕ್ಷನ್ ನೀಡುತ್ತಾರೆ. ಬೇರೊಂದು ಮಗು ಅವಳ ಸ್ಥಾನ ತುಂಬುತ್ತದೆ. ಅವಳ ಮಾಲ್ಗಣ್ಣಿನೊಳಗೆ ಔಷಧಿಯ ಹನಿ ಹಾಕಿ ಅರವಳಿಕೆ ನೀಡುತ್ತಾರೆ. ದೀಕ್ಷಿತ್ ೧೨.೦೪ಕ್ಕೆ ದೀಕ್ಷಿತ ಸೊನಾಲಿಯ ಮಾಲ್ಗಣ್ಣಿನ ಶಸ್ತ್ರಚಿಕಿತ್ಸೆ ಪ್ರಾರಂಭಿಸುತ್ತಾರೆ. ಚಿಕಿತ್ಸೆಯ ಅವಧಿ ಕೇವಲ ೩ ನಿಮಿಷ . ಅವರ ಕೈಗವಸು ಬದಲಿಸಲು ನರ್ಸ್ ಒಬ್ಬಳು ಸಹಾಯ ನೀಡುತ್ತಾಳೆ.

೧೨.೦೮ಕ್ಕೆ ದೀಕ್ಷಿತ್ ಶೀಲಾಳ ಹರಿದ ತುಟಿಯನ್ನು ಹೆಚ್ಚಿನ ರಕ್ತಸ್ರಾವವಿಲ್ಲದಂತೆ ಕತ್ತರಿಸುತ್ತಾರೆ. ತುಟಿ ಹೊಲಿದು, ಮೂಗು ಬಾಯಿಗಳಲ್ಲಿದ್ದ ಹತ್ತಿ ತೆಗೆದು ಶುಚಿಗೊಳಿಸಿ, ಧ್ವನಿ ಸುರುಳಿ ಬದಲಿಸಿದಾಗ ಆಶಾಭೋಸ್ಲೆಯ ಭಜನೆ ಕೇಳುತ್ತದೆ.

ಸಮಯ ೧೨.೩೨ರ ಅಪರಾಹ್ನ: ೧೨.೩೧ಕ್ಕೆ ದೀಕ್ಷಿತರು ಮೂರನೆಯ ಶಸ್ತ್ರಚಿಕಿತ್ಸೆಗೆ ಸಿದ್ಧ. ಸೆಕೆಂಡ್‌ಗಳ ತಡವೂ ಅವರಲ್ಲಿ ಚಡಪಡಿಕೆಯುಂಟು ಮಾಡುತ್ತದೆ. ಮುಂದಿನ ರೋಗಿಯನ್ನು ಕರೆಯುತ್ತಾರೆ. ೬ ಘಂಟೆಗಳ ಅವಧಿಯಲ್ಲಿ ೪೦ ಶಸ್ತ್ರಚಿಕಿತ್ಸೆಯ ಅನಂತರ ನರ್ಸುಗಳ ಊಟಕ್ಕಾಗಿ ಅಲ್ಪ ವಿರಾಮ. ದೀಕ್ಷಿತರ ಊಟವೆಂದರೆ ೧ಲೋಟ ಹಾಲು ೧ ಬಾಳೆಯ ಹಣ್ಣು.

ಎಲ್ಲ ರೋಗಿಗಳಿಗಾಗಿ ವೇಳೆ ಒದಗಿಸಲು ಹೋರಾಡುವ ದೀಕ್ಷಿತರು ಎರಡು ಘಂಟೆಯಲ್ಲಿ ನೂರಾರು ರೋಗಿಗಳನ್ನು ಸ್ವತಃ ಪರೀಕ್ಷಿಸಿ ಶಸ್ತ್ರಚಿಕಿತ್ಸೆಯ ವಿಧಾನವನ್ನು ಕೇಸ್ ಷೀಟಿನಲ್ಲಿ ಬರೆಯುತ್ತಾರೆ. ಮದುವೆ ವಯಸ್ಸಿನ ಹುಡುಗಿಯರು ಹಾಗೂ ಮಕ್ಕಳ ಚಿಕಿತ್ಸೆಗೆ ಆದ್ಯತೆ. ಬಡವ ಬಲ್ಲಿದರೆಂಬ ಭೇದವಿಲ್ಲದೆ, ಬಂದರೋಗಿಗಳಾರನ್ನೂ ಚಿಕಿತ್ಸೆಯಿಲ್ಲದೆ ಹಿಂದಿರುಗಿಸಿದವರಲ್ಲ ದೀಕ್ಷಿತ್.

ಮೂಗು, ಬಾಯಿ ಒಂದಾದ ಮಕ್ಕಳು ಕುಡಿದ ಹಾಲು ಅವನ್ನು ಉಸಿರುಗಟ್ಟಿಸುತ್ತದೆ. ಪೂನಾದ ಕ್ಯಾಂಪಿನಲ್ಲಿ ಇಂಥ ಮಕ್ಕಳ ಚಿಕಿತ್ಸೆಗೆ ಅನುಕೂಲವಿರುವವರಿಂದ ಅಲ್ಲಿಯವರೆಗೆ ಕಾಯಬೇಕು . ಡಿಸೆಂಬರ್‌ನಲ್ಲಿ ಕ್ಲಿಷ್ಟಕರ ಮೂಗಿನ ಚಿಕಿತ್ಸೆ ಔರಂಗಾಬಾದಿನಲ್ಲಿ ನಡೆಯುತ್ತದೆ. ಮಹಾರಾಷ್ಟ್ರದ ೩೦ಕಡೆ ಕ್ಯಾಂಪುಗಳು ನಡೆಯುತ್ತವೆ. ಅಹಮದಾಬಾದ್, ಜೈಪುರ, ಜುನಾಗಡ್, ಬೆಂಗಳೂರು, ಹುಬ್ಬಳ್ಳಿ, ಹೈದರಾಬಾದುಗಳಲ್ಲೂ ಕ್ಯಾಂಪುಗಳು ನಡೆಯುತ್ತವೆ.

ಇಂಥ ವಿಕಲತೆಯ ಮಕ್ಕಳಿಗೆ ಮದುವೆ ಗಗನ ಕುಸುಮ. ಜೊತೆಯವರ ಕೀಟಲೆಗೆ ತುತ್ತಾಗಿ ಶಾಲೆ ಬಿಡುತ್ತಾರೆ. ತಮ್ಮ ಚಿಕಿತ್ಸೆಯಿಂದಾಗಿ ಈ ಹೆಣ್ಣು ಮಕ್ಕಳಿಗೆ ಹೊಸ ಬಾಳು ಕಲ್ಪಿಸಿದ್ದಾರೆ ದೀಕ್ಷಿತ್. ಚಿಕಿತ್ಸೆಯ ನಂತರ ಹೊಲಿಗೆಯೊಂದಿಗೆ ಅವರ ಮುಖದಲ್ಲಿ ಮಂದಹಾಸ ತುಂಬುತ್ತದೆ. ಕೆಲವು ಹೆಣ್ಣು ಮಕ್ಕಳು ಕ್ಯಾಂಪಿಗೆ ಪ್ರತಿ ವರ್ಷ ಬರುತ್ತಾರೆ- ಚಿಕಿತ್ಸೆಗಾಗಲ್ಲ, ಮದುವೆಯ ಸುಯೋಗ ಹೊಂದಲು ಕಾರಣರಾದ ವೈದ್ಯರನ್ನು ವಂದಿಸಲು ಅವರು ದೇವರೆನ್ನುತ್ತಾರೆ, ಜನ ಅವರನ್ನು ಪೂಜಿಸುತ್ತಾರೆ, ಕಾಲಿಗೆ ನಮಸ್ಕರಿಸುತ್ತಾರೆ. ದೇವರು ಅಪೂರ್ಣಗೊಳಿಸಿದ

ಕಾರ್ಯವನ್ನು ದೀಕ್ಷಿತರು ಪೂರ್ಣಗೊಳಿಸುತ್ತಿದ್ದಾರೆ ಎನ್ನುತ್ತಾರೆ. ಇದೆಲ್ಲದರಿಂದ ಕಸಿವಿಸಿಗೊಳ್ಳುವ ದೀಕ್ಷಿತ್, ಎಲ್ಲವೂ 'ದೇವರ ಕೃಪೆ' ಎನ್ನುತ್ತಾರೆ.

ಇವರ ಕ್ಯಾಂಪುಗಳ ಬಗ್ಗೆ ಗುಜರಾತಿ ಪತ್ರಿಕೆ 'ಚಿತ್ರಲೇಖಾ'ದಲ್ಲಿ ಓದಿದಾಗ, ಸ್ಟೀಲ್ ಸ್ವಾಮಿ ಶರದ್ ಷಾ ಬೆಂಗಳೂರಿನಲ್ಲೂ ಇಂಥ ಕ್ಯಾಂಪುಗಳನ್ನು ನಡೆಸುವಂತೆ ದೀಕ್ಷಿತರನ್ನು ಕೋರಿದರು. ೫ ವರ್ಷಗಳಿಂದ ನಡೆಯುತ್ತಿರುವ ಈ ಕ್ಯಾಂಪಿನಲ್ಲಿ ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರಪ್ರದೇಶಗಳ ೧೫೦೦ ಜನ ಚಿಕಿತ್ಸೆಗಾಗಿ ಬರುತ್ತಾರೆ. ವಾರದಲ್ಲಿ ೪೫೦ ಶಸ್ತ್ರಚಿಕಿತ್ಸೆಗಳಾಗುತ್ತವೆ.

ಕ್ಯಾಂಪಿನ ವ್ಯವಸ್ಥಾಪಕರಿಗೆ ಧನ್ಯತೆಯ ಭಾವ. ದೀಕ್ಷಿತರಂಥವರ ಜೊತೆ ಕೆಲಸ ಮಾಡುವಾಗ, ಮತ್ತಷ್ಟು ಕೆಲಸ ಮಾಡುವಲ್ಲಿ ಪ್ರೇರಣೆ ದೊರೆಯುತ್ತದೆ ಎನ್ನುತ್ತಾರೆ, ಅಜಂತಾ ಫಾರ್ಮಾ ಟ್ರಸ್ಟಿನ ಮಾಲೀಕರು. ೪ ಕ್ಯಾಂಪ್‌ಗಳನ್ನೇರ್ಪಡಿಸುವುದರೊಂದಿಗೆ, ದೇಶದಲ್ಲಿ ದೀಕ್ಷಿತರ ಸಂಚಾರಕ್ಕೆ ಹೆಲಿಕಾಪ್ಟರಿನೊಂದಿಗೆ ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ.

ಬೆಳಿಗ್ಗೆ ೮ ರಿಂದ ರಾತ್ರಿ ೨.೩೦-ರವರೆಗೂ ವಿರಾಮವಿಲ್ಲದೆ ಶಸ್ತ್ರಚಿಕಿತ್ಸೆ ನಡೆಸುವ ದೀಕ್ಷಿತರಿಗೆ ಕೇವಲ ಮನೋಬಲವೇ ಆಧಾರ. ಶಸ್ತ್ರಚಿಕಿತ್ಸಾ ಕೊಠಡಿಯಾಚೆ ಕಪ್ಪು ಕನ್ನಡಕದ ಸೂಟುಧಾರಿ ದೀಕ್ಷಿತ್ ಬಾಗಿದ ತಲೆಯೊಂದಿಗೆ ಕುರ್ಚಿಯಲ್ಲಿ ಕುಸಿದ ವ್ಯಕ್ತಿ. ಸಿಪಿ ಅವರನ್ನು ಉಸಿರುಗಟ್ಟಿಸುತ್ತದೆ. ಆದರೆ ಶಸ್ತ್ರ ಚಿಕಿತ್ಸಾ ಕೊಠಡಿಯೊಳಗೆ ಆತ ಬೇರೆಯೇ ಆದ ವ್ಯಕ್ತಿ. ೩ ಘಂಟೆಗಳು ಬೇಕಾಗುವ ಶಸ್ತ್ರ ಚಿಕಿತ್ಸೆಯನ್ನು ಕೇವಲ ಅರ್ಧಘಂಟೆಯಲ್ಲಿ, ಕೇವಲ ೫ನಿಮಿಷದಲ್ಲಿ ಮಾಲ್ಗಣ್ಣನ ಶಸ್ತ್ರ ಚಿಕಿತ್ಸೆ. ಮುಗಿಸುವ ಮಿಂಚಿನ ವೇಗ "ಇದೇ ನನ್ನ ದೇವಸ್ಥಾನ, ಪ್ರತಿ ರೋಗಿಯಲ್ಲೂ ನಾನು ದೇವರನ್ನು ಕಾಣುತ್ತೇನೆ. ಕ್ಯಾಂಪ್‌ಗಳಿಗಾಗಿ ಪ್ರತಿ ಬಾರಿ ಭಾರತಕ್ಕೆ ಬರುವುದು ನನಗೊಂದು ತೀರ್ಥಯಾತ್ರೆ" ಎನ್ನುತ್ತಾರೆ. ಕುಳಿತು ಶಸ್ತ್ರಚಿಕಿತ್ಸೆ ನಡೆಸುವಾಗ ಕೇಳುವ ಭಜನೆಗಳು ಅವರಿಗೆ ಆಂತರಿಕ ಶಕ್ತಿ ತುಂಬಿದರೆ, ಅಧ್ಯಾತ್ಮ ಅವರ ಕೈಗಳಿಗೆ ಶಕ್ತಿ ನೀಡುತ್ತದೆ. ಏಕಲವ್ಯನ ಚಿತ್ತೈಕಾಗ್ರತೆ, ಅರ್ಜುನನ ಲಕ್ಷ್ಯ. ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ಎಷ್ಟೇ ಗೌಜು ಗದ್ದಲವಿರಲಿ, ದೀಕ್ಷಿತರ ಕಿವಿಗೆ ಕೇಳುವುದು ಧ್ವನಿ ಸುರುಳಿಯ ಭಜನೆ, ಕಣ್ಣಿಗೆ ಕಾಣುವುದು ರೋಗಿಯ ಮುಖ. ಕ್ಷಣವೊಂದರ ತಡೆಯಿಲ್ಲದೆ ಸಾಗುತ್ತದೆ ರೋಗಿಗಳ ಮೆರವಣಿಗೆ. ಅತ್ಯುನ್ನತ ಮಟ್ಟದ ಸಹನಾ ಶಕ್ತಿ.

ದೀಕ್ಷಿತರ ಶಸ್ತ್ರ ಚಿಕಿತ್ಸೆ ಹೆಚ್ಚು ರಕ್ತಸ್ರಾವವಿಲ್ಲದ್ದು. ಚಾಕುಗಳು, ಕರಗಿಹೋಗುವ ಹೊಲಿಗೆಯದಾರ ಎಲ್ಲವನ್ನು ಅಮೇರಿಕಾದಿಂದಲೇ ತರುತ್ತಾರೆ. ಶಸ್ತ್ರಚಿಕಿತ್ಸೆ ಹೊಲಿಗೆ ಹಾಕುವುದು, ಶುದ್ಧಿಮಾಡುವುದು ಎಲ್ಲವನ್ನು ಅವರೇ ಮಾಡುವುದರಿಂದ ತಪ್ಪಿಗೆಲ್ಲೂ ಅವಕಾಶವಿಲ್ಲ. ಆಪರೇಶನ್ ಟೇಬಲ್ ಬಿಟ್ಟು ಹೋಗುವ ಮೊದಲು ರೋಗಿಯ ಉಸಿರಾಟ ಸರಿಯಾಗಿದೆಯೇ ಎಂದು ಪರೀಕ್ಷಿಸುತ್ತಾರೆ.

ಜೊತೆಗಾರರನ್ನು ಕೀಟಲೆ ಮಾಡುತ್ತ, ಚಿತ್ರವಿಚಿತ್ರ ಪ್ರಶ್ನೆಗಳಿಂದ ಅಧ್ಯಾಪಕರನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದ ಅತ್ಯಂತ ಚಟುವಟಿಕೆಯ ಶಾಲಾಬಾಲಕ ದೀಕ್ಷಿತ್‌ರಿಗೆ, ಹಿರಿಯರು, ಜೊತೆಗಾರರಿಗೆ ಸಹಾಯಮಾಡುವ ಪ್ರವೃತ್ತಿ. ತಂದೆ ಸೀತಾರಾಮ ದೀಕ್ಷಿತ್ ಬ್ರಿಟಿಷ್ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದರು. ಎರಡನೇ ವಿಶ್ವ ಸಮರದ ಕಾಲದಲ್ಲಿ ಯೂರೋಪ್, ಆಫ್ರಿಕಾ, ಏಷ್ಯಾಗಳಲ್ಲಿ ಸಂಚರಿಸಿ ಸಂಬಳದ ಹಣದ ಚೀಲಗಳನ್ನು ಸುರಕ್ಷಿತವಾಗಿ ಸಾಗಿಸಿದ್ದಕ್ಕಾಗಿ 'ವಿಕ್ಟೋರಿಯಾ ಕ್ರಾಸ್' ಗಳಿಸಿದವರು. ಪದವೀಧರ ಮಕ್ಕಳೇ ಅವರ ಆಸ್ತಿ. ೩೦-೪೦ರ ದಶಕದಲ್ಲೇ ಹೆಣ್ಣು ಮಕ್ಕಳಿಗೂ ಈಜು, ಚಿತ್ರಕಲೆ, ಸೈಕ್ಲಿಂಗ್‌ಗಳನ್ನು ಕಲಿಸಿದ್ದು ಅವರ ದೂರದೃಷ್ಟಿ. ಜೊತೆ ಜೊತೆಗೆ ಕಲಿಸಿದ್ದು ಸರಳತೆ ಹಾಗೂ ಧಾರ್ಮಿಕತೆ.

ವಾರ್ಧಾದ ಅವರ ಶಾಳೆಗೆ ೧/೨ ಮೈಲಿ ದೂರದಲ್ಲೇ ವಾಸಿಸುತ್ತಿದ್ದ ಧೋತಿಯುಟ್ಟ ಊರುಗೋಲಿನ ಅರೆನಗ್ನ ಫಕೀರನನ್ನು ಜನರೇಕೆ ಅಷ್ಟೊಂದು ಗೌರವಿಸುತ್ತಾರೆನ್ನುವುದು ದೀಕ್ಷಿತರಿಗೆ ಮೊದಲು ಮೊದಲು ಅರಿವಾಗಿರಲಿಲ್ಲ. ಅನಂತರ ನನಗರ್ಥವಾಯಿತೆನ್ನುತ್ತಾರೆ ಗಾಂಧೀಜಿಯ ಬಗ್ಗೆ ದೀಕ್ಷಿತ್, "ಗಾಂಧೀಜಿ ರಾಷ್ಟ್ರಪಿತನಿಗಿಂತಲೂ ಹೆಚ್ಚು. ತುಕಾರಾಮನಂತೆ ನೊಂದ ಜೀವಿಗಳಲ್ಲಿ ದೇವರನ್ನು ಕಂಡು ಅವರಿಗೆ ಸೇವೆ ಮಾಡುವುದೇ ದೇವರಿಗೆ ಸೇವೆಸಲ್ಲಿಸಿದಂತೆ. ಇದೇ ನಿಜವಾದ ಧರ್ಮ" ಎನ್ನುವ ಗಾಂಧೀಜಿಯವರ ತತ್ತ್ವವನ್ನು ಮೈಗೂಡಿಸಿಕೊಂಡವರು ಪಂಡರಪುರದಲ್ಲಿ ಹುಟ್ಟಿದ ದೀಕ್ಷಿತ್.

ಸ್ವಾತಂತ್ರ್ಯದ ವರ್ಷದಲ್ಲಿ ೧೯೪೭ ರೆಡಾರ್ ಹೈಸ್ಕೂಲಿನಿಂದ ಮೆಟ್ರಿಕ್ಯುಲೇಷನ್ ಮುಗಿಸಿ ಸಿವಿಲ್ ಸರ್ವಿಸ್‌ಗೆ ಸೇರುವ ಕನಸು, "ವೈದ್ಯರು ಗೌರವಾನ್ವಿತರು ಹಾಗೂ ಉತ್ತಮ ಉಡುಪು ಧರಿಸುವವರು ಹಣ ಸಂಪಾದನೆಯೂ ಹೆಚ್ಚು" ಎನ್ನುವುದು ಮೊದಲಿಗೆ ಅವರ ಉದ್ದೇಶ. ಅಂತೆಯೇ ೫೬ರಲ್ಲಿ ವೈದ್ಯಪದವಿ ದೊರೆತಾಗ ರೈಲ್ವೆಯಲ್ಲಿ ೬ ತಿಂಗಳ ಕೆಲಸ. ಸೇನಾ ವಿಭಾಗದ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ 'ಅಮೇರಿಕನ್ ಮೆಡಿಕಲ್ ಅಸೋಸಿಯೇಷನ್' ಅಮೇರಿಕಾದ ಆಸ್ಪತ್ರೆಗಳಲ್ಲಿ ಕೆಲಸಮಾಡಲು ಆಯ್ಕೆ ಮಾಡಿದ ೫೦ ಮಂದಿ ಭಾರತೀಯರಲ್ಲಿ ದೀಕ್ಷಿತರೂ ಒಬ್ಬರು.

ಅಮೇರಿಕಾ ಪ್ರಯಾಣಕ್ಕಾಗಿ ೬೦೦೦ರೂ ಕೂಡಿಸಲು ಬೇರೆಡೆ ಕೆಲಸ. ಸಂಪಾದಿಸಿದ ೫೦೦೦ರೂ.ಗಳೊಂದಿಗೆ ೧೦೦೦ ಸಾಲ ತಂದು ೧೯೫೮ರಲ್ಲಿ ವಿಸ್‌ಕಾನ್ಸಿನ್‌ಗೆ ಪ್ರಯಾಣ. ಆಸ್ಪತ್ರೆಯಲ್ಲಿ ದೊರಕುತ್ತಿದ್ದ ೨೫೦ಡಾಲರ್‌ಗಳಲ್ಲಿ ೨೦೦ಡಾಲರ್‌ಗಳನ್ನು ತಂದೆಗೆ ಕಳಿಸುತ್ತಿದ್ದರು. ಡೆಟ್ರಾಯಟ್‌ನ ಗ್ರೇಸ್ ಆಸ್ಪತ್ರೆಯಲ್ಲಿ ವಾರ್ಷಿಕ ೪೦,೦೦೦ ಡಾಲರ್‌ಗಳ ಕೆಲಸ. ೧೯೬೮ರಲ್ಲಿ ಭಾರತದಲ್ಲೇ ನೆಲಸಲು ಬಂದಾಗ "ಇಲ್ಲಿ ಪ್ಲಾಸ್ಟಿಕ್ ಸರ್ಜನ್ನರಿಗೆ ಅವಕಾಶವಿಲ್ಲ. ಆದ್ದರಿಂದ ಅಮೇರಿಕಾಕ್ಕೆ ಹಿಂತಿರುಗಿ, ಆಗಾಗ್ಗೆ ಭಾರತಕ್ಕೆ ಬಂದು ಇಲ್ಲಿ ಕ್ಯಾಂಪ್‌ಗಳನ್ನು ನಡೆಸಬೇಕೆನ್ನುವುದು. ಸ್ನೇಹಿತರ ಸಲಹೆ. ಅದೇ ವರ್ಷ ಮುಂಬಯಿ ವೋರ್ಲಿಯ ಲಯನ್ಸ್ ಕ್ಲಬ್‌ನಿಂದ ಪ್ಲಾಸ್ಟಿಕ್ ಸರ್ಜರಿಯ ಮೊದಲ ಕ್ಯಾಂಪ್ ವ್ಯವಸ್ಥೆ. ಅಲ್ಲಿಂದ ಪ್ರಾರಂಭ ದೀಕ್ಷಿತರ ಭಾರತದ ವಾರ್ಷಿಕ ತೀರ್ಥಯಾತ್ರೆ.

ಆಗಿನ್ನು ಭಾರತದಲ್ಲಿ ಪ್ಲಾಸ್ಟಿಕ್ ಸರ್ಜರಿ ಹೊಸ ವಿಭಾಗ. ಪರಿಣತರು ಬೆರಳೆಣಿಕೆಯಷ್ಟು. ೧೦ ವರ್ಷಗಳವರೆಗೆ, ೩ ವಾರಗಳ ಕಾಲ ದಿನಕ್ಕೆ ೩೦ ಉಚಿತ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದರು. ದೀಕ್ಷಿತ್. ಭೇಟಿಯ ಕಾಲದಲ್ಲಿ ಭಾರತದುದ್ದಕ್ಕೂ ಕಣ್ಣಿನ ಶಸ್ತ್ರ ಚಿಕಿತ್ಸೆಯ ಆವಶ್ಯಕತೆಯನ್ನು ಮನಗಂಡಿದ್ದ ದೀಕ್ಷಿತ್ ೧೯೬೯ರಲ್ಲಿ ಕಣ್ಣಿನ ಚಿಕಿತ್ಸೆಯ ಬಗ್ಗೆ ವಿಶೇಷ ತರಬೇತಿ ಪಡೆದರು. ೧೯೭೧ರಲ್ಲಿ ಕೈಗಾರಿಕೋದ್ಯಮಿಯೊಬ್ಬ ಅಹಮದಾಬಾದಿನ 'ಡೋಲ್ಕ' ಶಸ್ತ್ರಚಿಕಿತ್ಸಾ ಕ್ಯಾಂಪಿಗೆ ದೀಕ್ಷಿತರನ್ನು ಆಹ್ವಾನಿಸಿದ. ಕೇವಲ ನಿರೀಕ್ಷಕರಾಗಿ ಕ್ಯಾಂಪಿಗೆ ಹೋಗಿದ್ದ ದೀಕ್ಷಿತರನ್ನು, ನಿರ್ವಾಹಕರ ಬೇಜವಾಬ್ದಾರಿತನದಿಂದುಂಟಾದ ಎರಡು ಮರಣಗಳು ತಲ್ಲಣಗೊಳಿಸಿದುವು. ನಿಸ್ವಾರ್ಥತೆಯಿಂದ ದುಡಿಯುವ ಉತ್ತಮ ಪರಿಣಿತ ವೈದ್ಯರ ಸಂಘಟನೆಯ ಆವಶ್ಯಕತೆ ದೀಕ್ಷಿತರಿಗೆ ಮನದಟ್ಟಾಯ್ತು. "ದೇವರ ದಯೆಯಿಂದ ಇದುವರೆಗೂ ಕ್ಯಾಂಪುಗಳಲ್ಲಿ ಒಂದೇ ಒಂದು ಸಾವು ಸಂಭವಿಸಿಲ್ಲ" ಎಂದು ತಮ್ಮ ೪೪೦೦೦ ಉಚಿತ ಶಸ್ತ್ರ ಚಿಕಿತ್ಸೆಯ ಬಗ್ಗೆ ಹೇಳುತ್ತಾರೆ ದೀಕ್ಷಿತ್.

೭೦ರ ದಶಕದಲ್ಲಿ [illegible]ನಲ್ಲಿದ್ದ ದೀಕ್ಷಿತ[illegible]ದಲ ಕಸಿ, ಕಣ್ಣಿನ ಚಿಕಿತ್ಸೆಗಳಲ್ಲಿ ಅವಿಶ್ರಾಂತ ದುಡಿಮೆ. ಟೆನ್ನಿಸ್ ಪಾಟರ

ಸ್ಕೀಯಿಂಗ್ ಅವರ ಪ್ರಿಯ ಆಟಗಳು. ವಿನೋದ ಪ್ರಿಯರಾದ ದೀಕ್ಷಿತ್ ತಮ್ಮ ಮನೆಯಲ್ಲಿ ದೀಪಾವಳಿ ಕೂಟಗಳನ್ನೇರ್ಪಡಿಸುತ್ತಿದ್ದರು. ಹಳೆಯ ಹಿಂದಿ ಸಿನಿಮಾ ಕಲರ್ ಹಾಗೂ ಹೇಮಂತಕುಮಾರ್ ಅವರ ಹಾಡುಗಳೆಂದರೆ ಇಷ್ಟ. ಒಳ್ಳೆಯ ಶಾರೀರದೊಂದಿಗೆ ಉತ್ತಮ ಪಿಯಾನೋ ಹಾಗೂ ಹಾರ್ಮೋನಿಯಮ್ ವಾದಕ. ತಮ್ಮ ೬ನೇ ವಯಸ್ಸಿನಿಂದಲೇ ಶಾಸ್ತ್ರೀಯ ಸಂಗೀತ ಕಲಿಯಲಾರಂಭಿಸಿದ ದೀಕ್ಷಿತರು ತಮ್ಮ ೧೩ನೇ ವಯಸ್ಸಿನಲ್ಲಿ ಭೋಪಾಲಿನ ಭಾತಖಂಡೆ ಇನ್‌ಸ್ಟಿಟ್ಯೂಟಿನ ಸಂಗೀತ ವಿಶಾರದ ಪರೀಕ್ಷೆಯಲ್ಲಿ ತೇರ್ಗಡೆಯಾದರು. ೧೯೪೫ರಿಂದ ೧೦ ವರ್ಷ ಕಾಲ ನಾಗಪುರದ ಹಾಗೂ ಹೈದರಾಬಾದ್‌ನ ಆಕಾಶವಾಣಿಯಲ್ಲಿ ಹಾಡಿದ್ದಾರೆ.

ಲ್ಯಾರಿಂಜೆಕ್ಟಮಿಯಿಂದಾಗಿ ಕತ್ತಿನಲ್ಲಿ ಮಾಡಿದ ರಂಧ್ರದಿಂದಾಚೆ ಹೋಗಿತ್ತು, ಸಂಗೀತ. ಕಡಿಮೆ ಮಾತಿನ ಕ್ರಿಯಾಶೀಲ ದೀಕ್ಷಿತರ ಮಾತುಗಳೀಗ ಮತ್ತೂ ಕಡಿಮೆ. ಆದರೂ ಅವರ ವ್ಯಕ್ತಿತ್ವದಲ್ಲಿ ವ್ಯತ್ಯಾಸವಿಲ್ಲ. ಮೊದಲಿಗಿಂತ ದುರ್ಬಲರಾದರೂ ಶಸ್ತ್ರಕ್ರಿಯೆ ಮಾಡುವ ಕೈಗಳು ಅಷ್ಟೇ ಚುರುಕಾಗಿವೆ.

೧೯೭೮ರಲ್ಲಾದ ಕಾರು ಅಪಘಾತ ಅವರ ದೇಹದ ಬಲಭಾಗವನ್ನು ನಿಷ್ಕ್ರಿಯಗೊಳಿಸಿದರೂ ಕುಂಠಿತಗೊಳ್ಳದ ಉತ್ಸಾಹ. ಬಲಗೈ ಉಪಯೋಗಿಸಲಾಗದಿದ್ದಾಗ ಎಡಗೈಲೇ ಅಭ್ಯಾಸ. ಮೂರು ವರ್ಷಗಳನಂತರ ಸಂಪೂರ್ಣ ಚೇತರಿಸಿಕೊಂಡಾಗ ಎರಡು ಕೈಗಳಲ್ಲೂ ಶಸ್ತ್ರಚಿಕಿತ್ಸೆ ಮಾಡುವ ನೈಪುಣ್ಯ ಗಳಿಕೆ. ಆದರೆ ಇದ್ದ ಕೆಲಸ ಹೋಗಿತ್ತು. ಕಾಸ್ಮೆಟಿಕ್ ಸರ್ಜರಿಗಾಗಿ ಸಿಕ್ಕ ಫೆಲೋಶಿಪ್‌ನಿಂದ ವಿದೇಶಿ ಪರಿಣತ ವೈದ್ಯರೊಂದಿಗೆ ಕೆಲಸ ಮಾಡುವ ಅವಕಾಶ. ಅನಂತರ ಬ್ರೂಕ್ಲಿನ್‌ನ ಕಿಂಗ್ಸ್‌ಕೌಂಟಿ ಆಸ್ಪತ್ರೆಯಲ್ಲಿ ಬೋಧನೆಯ ಕೆಲಸ.

ಈ ಹಾಡುಹಕ್ಕಿ ಕ್ಯಾನ್ಸರಿನಿಂದಾಗಿ ತನ್ನ ಧ್ವನಿ ಕಳೆದುಕೊಳ್ಳಬೇಕಾಯ್ತು. ನ್ಯೂಯಾರ್ಕ್‌ನ ಮೌಂಟ್ ಸಿನಾಯ್ ಆಸ್ಪತ್ರೆಯಲ್ಲಾದ ೪ ಸರ್ಜರಿಗಳು ಅವರ ಶ್ವಾಸನಾಳ ಹಾಗೂ ಕುತ್ತಿಗೆಯ ಮಾಂಸಖಂಡಗಳನ್ನು ಕಿತ್ತುಕೊಂಡಿದ್ದವು. ನಾಟಕಕಾರನಂತೆ ಕಾಣುವ ದೀಕ್ಷಿತರ ಉದ್ದಕೂದಲು ಅಶಕ್ತಗೊಂಡ ಅವರ ಕುತ್ತಿಗೆಯನ್ನು ಮುಚ್ಚುವ ಸಾಧನ. ಪ್ರತಿ ಸಂಜೆ ಹಾಡುಲಾಗದಿರುವುದು ತುಂಬಲಾರದ ನಷ್ಟ.

ಅನೇಕ ವರ್ಷಗಳವರೆಗೂ ಮಾತು ನಿಂತಿತ್ತು. ಬ್ಯಾಟರಿಯ ಸಹಾಯದೊಂದಿಗೆ ಅನ್ನನಾಳವನ್ನುಪಯೋಗಿಸಿ ಮಾತಾಡುವ ಪ್ರಯತ್ನ. ಮೂಗಿಗೂ ಶ್ವಾಸನಾಳಕ್ಕೂ ಸಂಬಂಧವಿಲ್ಲದ ಪ್ರಯುಕ್ತ ಕುತ್ತಿಗೆಯ ಮೂಲಕ ಉಸಿರಾಟ. ಕುತ್ತಿಗೆಯ ರಂಧ್ರವನ್ನು ವಿಶೇಷ ಲಟ್ಟಿಯಿಂದ ಮುಚ್ಚಿದ್ದು, ಅದು ಧೂಳನ್ನು ತಡೆಹಿಡಿಯುತ್ತದೆ. ಆದ್ದರಿಂದಲೇ ಬಿಸಿಯಾದ ಧೂಳಿನ ವಾತಾವರಣದಲ್ಲಿ ದೀಕ್ಷಿತರಿಗೆ ಉಸಿರಾಟ ಕಷ್ಟ.

ಧ್ವನಿ ಕೇವಲ ಪಿಸುಗುಡುವಿಕೆಯಾಗಿತ್ತು. ಧೃತಿಗೆಡದ ದೀಕ್ಷಿತರು ೧೯೮೩ರ ಆಪರೇಶನ್ ವೇಳೆ ಉಳಿದಂತೆ, ಒಮ್ಮೆಯೂ ಭಾರತ ಯಾತ್ರೆ ತಪ್ಪಿಸಿಲ್ಲ. ಪ್ರತಿ ಬಾರಿಯೂ ಎಲ್ಲೋರಾದ ಗ್ರಿಷ್ಣೇಶ್ವರ ಶಿವ ದೇವಾಲಯದ ಸ್ವಾಯಂಭು ಜ್ಯೋತಿರ್ಲಿಂಗ ದರ್ಶನ ಮಾಡುತ್ತಾರೆ ದೀಕ್ಷಿತರು. ೧೯೭೬ರಲ್ಲಿ ಈ ಸಂದರ್ಭದಲ್ಲೇ ಲಯನ್ಸ್ ಕ್ಲಬ್ ಸದಸ್ಯರ ಪರಿಚಯವಾಗಿ, ನಡೆಸಿದ ಎರಡು ಸರ್ಜರಿಗಳು ಪ್ರತಿ ವರ್ಷವೂ ಔರಂಗಾಬಾದಿನಲ್ಲಿ ಕ್ಯಾಂಪ್ ನಡೆಸಲು ನಾಂದಿಯಾಯ್ತು.

ಹೃದಯ ಎರಡುಬಾರಿ ಸಾವಿನುಯ್ಯಾಲೆಯಲ್ಲಿ ತೂಗಿತು. ೧೯೮೮ರಲ್ಲಿ ಮೊದಲ ಹೃದಯಾಘಾತವಾದಾಗ ದೀಕ್ಷಿತರಿಗೆ ಆಂಜಿಯೋಪ್ಲಾಸ್ಟಿ ಮಾಡಲಾಯ್ತು. ೧೯೯೪ ರಲ್ಲಿ

ಅಹಮದಾಬಾದಿನ ಪ್ಲಾಸ್ಟಿಕ್ ಸರ್ಜರಿ ಕ್ಯಾಂಪಿನಲ್ಲಿರುವಾಗಲೇ ಎರಡನೇ ಬಾರಿ ತೀವ್ರ ಹೃದಯಾಘಾತ. ನ್ಯೂಯಾರ್ಕಿನ ಮೌಂಟ್ ಸಿನಾಯ್‌ನಲ್ಲಿ ಬೈಪಾಸ್ ಸರ್ಜರಿ. ಮೂರು ನಾಳಗಳು ಸಂಪೂರ್ಣ ಮುಚ್ಚಿದ್ದವು. ಆದರೂ ಕೃತಕ ಹೃದಯ ಜೋಡಣೆಯ ಶಸ್ತ್ರಕ್ರಿಯೆಗೆ ದೀಕ್ಷಿತ್ ಒಪ್ಪಲಿಲ್ಲ. "೧೯೮೨ರಿಂದಲೂ ನಾನು ಬೇಗ ಸಾಯುತ್ತೇನೆಂದು ವೈದ್ಯರು ಹೇಳುತ್ತಿದ್ದಾರೆ. ಆದ್ದರಿಂದ ಸಾಧ್ಯವಾದಷ್ಟು ಪ್ಲಾಸ್ಟಿಕ್ ಸರ್ಜರಿಗಳನ್ನು ಆದಷ್ಟು ಬೇಗ ಮಾಡುವ ಆತುರ ನನಗೆ" ಎನ್ನುತ್ತಾರೆ ದೀಕ್ಷಿತ್.

ದೀಕ್ಷಿತ್ ಒಬ್ಬರೇ ಪ್ಲಾಸ್ಟಿಕ್ ಸರ್ಜನರಾಗಿದ್ದ ಕ್ಯಾಂಪ್‌ಗಳಲ್ಲೀಗ, ಅವರಿಂದ ಸ್ಫೂರ್ತಿ ಪಡೆದ ಅಮೇರಿಕದ ಅನೇಕ ಸರ್ಜನರು ಜೊತೆಗೂಡುತ್ತಾರೆ. ದೀಕ್ಷಿತರೇ ಅವರೆಲ್ಲರ ಖರ್ಚು ಭರಿಸುತ್ತಿದ್ದರು. ಈಗ ಪ್ಲಾಸ್ಟಿಕ್ ಸರ್ಜರಿ ಎಜ್ಯುಕೇಷನಲ್ ಫೌಂಡೇಷನ್‌ವತಿಯಿಂದ ಪ್ರಾರಂಭವಾದ ಇಂಡಿಯಾ ಪ್ರಾಜೆಕ್ಟ್‌ನ ಮೂಲಕ ಖರ್ಚು ಭರಿಸಲಾಗುತ್ತದೆ.

ಅಮೇರಿಕನ್ನರಿಗೆ ಇದೊಂದು ನೂತನ ಅನುಭವ. ಈ ಕ್ಯಾಂಪುಗಳು ಅವರಿಗೆ ಸಾಮೂಹಿಕವಾಗಿ ಕೆಲಸಮಾಡುವ ಅವಕಾಶ ಕಲ್ಪಿಸುವುದರೊಂದಿಗೆ ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಕಾರ್ಯನಿರ್ವಹಣೆಯನ್ನು ಕಲಿಸುತ್ತವೆ. ತಾವು ಕಂಡರಿಯದ ಭಾರತದ ಇಣುಕು ನೋಟವೊಂದನ್ನು ಈ ಕ್ಯಾಂಪುಗಳಲ್ಲಿ ಕಾಣುತ್ತಾರೆ.

೯ ವರ್ಷದ ಹಿಂದೆ ವರ್ಷವೊಂದಕ್ಕೆ ಜೀವ ವಿಮೆಗೆ ತಾವು ನೀಡಿದ ೪೫ಸಾವಿರ ಡಾಲರ್ ಹಣದಿಂದ, ೧.೫ ಮಿಲಿಯನ್ ಡಾಲರ್‌ಗಳ ಟ್ರಸ್ಟ್‌ವೊಂದನ್ನು ದೀಕ್ಷಿತ್ ಸ್ಥಾಪಿಸಿದರು. ಅದರ ಆಧಾಯುವಾದ ಒಂದುಲಕ್ಷ ಡಾಲರ್‌ಗಳಲ್ಲೊಂದು ಭಾಗ ಸಂಶೋಧನೆಗಳಿಗೂ, ಮತ್ತೊಂದು ಭಾಗ ಕ್ಯಾಂಪ್‌ಗಳಿಗೆ ಬರುವ ಸರ್ಜನರ ಖರ್ಚಿಗಾಗಿಯೂ ಮುಡಿಪು. ಇದರೊಂದಿಗೆ ಭಾರತದಲ್ಲಿ ಅವರು ಸ್ಥಾಪಿಸಿರುವ ಇನ್ನೈದು ಟ್ರಸ್ಟ್‌ಗಳು ಈ ಕೆಲಸಗಳನ್ನು ಮುಂದುವರಿಸುತ್ತವೆ. ೨೫ ವರ್ಷಗಳಿಂದಲೂ ಈ ಕ್ಯಾಂಪುಗಳು ಯಶಸ್ವಿಯಾಗಿದ್ದು ಮುಂದೆಯೂ ಆಗುವುದೆಂದು ಆಶಿಸುತ್ತಾರೆ.

ಈ ಕಾರ್ಯಕ್ಕಾಗಿ ದೀಕ್ಷಿತ್ ತಮ್ಮೆಲ್ಲ ಉಳಿತಾಯವನ್ನು ವಿನಿಯೋಗಿಸಿದ್ದಾರೆ. ಪ್ರತಿವರ್ಷ, ತೀವ್ರ ದುಬಾರಿ ವಸ್ತುಗಳಾದ ಸೂಜಿಗಳು, ಸೂಚರ್‌ದಾರ, ಅರೆವಳಿಕೆ ಹಾಗೂ ಸರ್ಜರಿಗೆ ಸಂಬಂಧಿಸಿದ ಇತರ ವಸ್ತುಗಳಿಗಾಗಿ ೫೦,೦೦೦ ಡಾಲರ್‌ಗಳನ್ನು ಖರ್ಚು ಮಾಡುತ್ತಾರೆ. ತೀವ್ರ ಅನುಕಂಪದ ವ್ಯಕ್ತಿ ದೀಕ್ಷಿತ್‌ರಿಗೆ ಈ ವರ್ಷದ ನೋಬಲ್ ಶಾಂತಿ ಪಾರಿತೋಷಕ ಬರಬಹುದೆನ್ನುವ ಊಹಾಪೋಹಗಳಿದ್ದವು. ಆದರೆ ದೇವರಿಗಾಗಿ ಸೇವೆ ಸಲ್ಲಿಸುವ ನಾವು ಪ್ರತಿಫಲ ಬಯಸಬಾರದೆನ್ನುವುದು ದೀಕ್ಷಿತರ ನಿಲವು. "ಹೆಸರುಗಳಿಸುವ ಆಸೆ ನನಗಿಲ್ಲ. ಬಹುಮಾನ ಬಂದರೂ ಮತ್ತಷ್ಟು ಕ್ಯಾಂಪುಗಳನ್ನು ನಡೆಸಲು ಅದು ವಿನಿಯೋಗವಾಗುತ್ತದೆ". ಎನ್ನುತ್ತಾರೆ ೧೯೯೪ರಲ್ಲಿ ನಿವೃತ್ತರಾದ ದೀಕ್ಷಿತ್.

ಎಲ್ಲರ ನೋವು ನಿವಾರಿಸಿ ಹೊಸ ಬಾಳು ಕೊಡಲೆತ್ನಿಸುವ ದೀಕ್ಷಿತರ ಬಾಳೇ ನೋವಿನಿಂದ ಕೂಡಿದ್ದು. ಎರಡು ಮದುವೆಗಳ ನಂತರವೂ ವಿಫಲಗೊಂಡ ವೈವಾಹಿಕ ಜೀವನ. ೧೯೬೧ರಲ್ಲಿ ವಿದ್ಯಾರ್ಥಿನಿಯಾಗಿದ್ದ ಅಮೇರಿಕದ ವಿಲ್ಮಾ ಪೀಟರ್‌ಸನ್‌ನೊಂದಿಗೆ ವಿವಾಹದ ನಾಲ್ಕು ವರ್ಷಾನಂತರ ವಿಚ್ಛೇದ. ಮಗ ಶರದ್ ಉತ್ತಮ ಗಾಯಕನಾಗಿ ತನ್ನದೇ ಸಂಗೀತದ ಬ್ಯಾಂಡ್ ಹೊಂದಿದ್ದಾನೆ. ಎಂಬಿಎ ಮಾಡಿದ್ದ ಮಗಳು ಶಾರಿ ಮಿಚಿಗನ್‌ನಲ್ಲಿ ಕೆಲಸಮಾಡುತ್ತಾಳೆ.

೧೯೭೫ರಲ್ಲಿ ತನ್ನ ಮೂಗಿನ ಸರ್ಜರಿಗಾಗಿ

ದೀಕ್ಷಿತರ ಬಳಿ ಬಂದು ತಮಗಿಂಥ ೨೫ವರ್ಷ ಕಿರಿಯಳಾದ ತನಿ ಬೋಸಳನ್ನು ಮದುವೆಯಾದಾಗ ಹುಟ್ಟಿದ್ದು ಮಗಳು ಸುಪ್ರಿಯ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ದೀಕ್ಷಿತರಿಂದ ೧೯೮೯ರಲ್ಲಿ ತನಿ ವಿಚ್ಛೇದನ ಪಡೆದಳು. ಮಗಳು ಸುಪ್ರಿಯ ಅವಳೊಂದಿಗೆ ನ್ಯೂಯಾರ್ಕ್‌ನಲ್ಲಿದ್ದು ಮೆಡಿಕಲ್ ಓದುತ್ತಿದ್ದಾಳೆ. ಅವಳನ್ನು ಅತ್ಯಂತ ಪ್ರೀತಿಸುತ್ತಿದ್ದ ದೀಕ್ಷಿತರ ಬಳಿ ಅವಳ ನೆನಪಾಗಿ ಉಳಿದಿರುವುದು, ಸದಾ ತಮ್ಮೊಂದಿಗೊಯ್ಯುವ ಅವಳ ಭಾವಚಿತ್ರ ಮಾತ್ರ.

ಹಳೆಯ ನೆನಪುಗಳೊಂದಿಗೆ ಬ್ರೂಕ್ಲಿನ್‌ನ ೧೭ನೇ ಮಹಡಿಯಲ್ಲಿ ದೀಕ್ಷಿತರದು ಒಂಟಿ ಬಾಳು. ಪ್ರತಿನಿತ್ಯ ೧೫ ನಿಮಿಷ ದೇವರ ಪೂಜೆ. ಕುಳಿತೇ ಕೆಲಸ ಮಾಡಬೇಕಾದ ದೀಕ್ಷಿತ್ ತಮ್ಮ ಅಡುಗೆ ತಾವೇ ಮಾಡಿಕೊಂಡು, ಬಟ್ಟೆಗಳನ್ನು ತಾವೇ ಸ್ವಚ್ಛಮಾಡಿಕೊಳ್ಳುತ್ತಾರೆ. ಗೋಡೆಯ ಆಧಾರದೊಂದಿಗೆ ಸ್ವಲ್ಪ ನಡಿಗೆ, ಮೆಡಿಕಲ್ ಜರ್ನಲ್‌ಗಳಿಗೆ ಲೇಖನಗಳನ್ನು ಬರೆದು, ಭಾರತದ ಕ್ಯಾಂಪುಗಳ ಬಗ್ಗೆ ಪತ್ರವ್ಯವಹಾರ ನಡೆಸುತ್ತಾರೆ. ಸಂಗೀತ ಕೇಳುವಾಗ ಮತ್ತೊಮ್ಮೆ ಹಾಡುವ ಬಯಕೆ ಮರುಕಳಿಸುತ್ತದೆ. "ಸಂಗೀತ ಆಪ್ತ ಸ್ನೇಹಿತನಿದ್ದಂತೆ. ಸಂಗೀತ ಕೇಳುವಾಗ ನಾವು ಒಂಟಿ ಎನಿಸುವುದೇ ಇಲ್ಲ" ಎನ್ನುವುದವರ ಅಭಿಪ್ರಾಯ. ಮಲಗುವ ಮೊದಲು ಕಂಠಪಾಠ ಮಾಡಿರುವ ಭಗವದ್ಗೀತೆಯ ೯ನೇ ಅಧ್ಯಾಯ ಪಠಣ. ಭಗವದ್ಗೀತೆ ಅವರ ಎಡೆಬಿಡದ ಸಂಗಾತಿ.

ವಿವೇಕಾನಂದರ ದಂತದ ವಿಗ್ರಹಗಳ ನಡುವೆ ೫೦೦ಕ್ಕೂ ಮೀರಿದ ವೀಡಿಯೋ ಕ್ಯಾಸೆಟ್‌ಗಳು . ರಾಜ್‌ಕಪೂರ್, ದಿಲೀಪ್ ಕುಮಾರ್, ಮಾಧುರಿ ದೀಕ್ಷಿತಳ ಬಗೆಗೂ ಮೆಚ್ಚುಗೆ. ಹಿಂದಿ ಚಿತ್ರ ನೋಡಲು ತಮ್ಮ ಸ್ನೇಹಿತರ ಮನೆಗೆ ಹೋಗುವುದು ಬಿಟ್ಟರೆ ದೀಕ್ಷಿತ್ ಮನೆಯಾಚೆ ಹೊರಡುವುದು ವಿರಳ. ಅಂಚೆ ಹಾಗೂ ಮತ್ತಿತರ ಆವಶ್ಯಕ ಪದಾರ್ಥಗಳು ಮನೆಗೆ ಕಳಿಸಲ್ಪಡುತ್ತವೆ. ಇತ್ತೀಚೆಗೆ ಎಲಿವೇಟರ್ ಇಲ್ಲದ ಕಡೆ ತನ್ನ ವ್ಹೀಲ್ ಚೇರ್‌ನಲ್ಲಿ ಸಾಗುವಾಗ ಬೀಳುವ ಭಯ ಅವರನ್ನು ಕಾಡುತ್ತದೆ. ಅಂಥ ಸಾವು ಅವರಿಗೆ ಬೇಕಿಲ್ಲ. ಸಾವಿನ ನೆರಳಿನಲ್ಲಿರುವ ದೀಕ್ಷಿತರಿಗೆ ಕ್ಯಾಂಪೊಂದರಲ್ಲಿ ಎರಡು ಕೈಗಳಲ್ಲೂ ಸ್ಕಾಲ್ಪೆಲ್ ಹಿಡಿದು ಶಸ್ತ್ರಚಿಕಿತ್ಸೆ ನಡೆಸುತ್ತಲೇ ಇಹದಿಂದ ನಿರ್ಗಮಿಸುವಾಸೆ. ಈತ ಪವಾಡಪುರುಷನೆನ್ನುವುದೇನೋ ಅತಿಶಯೋಕ್ತಿಯಲ್ಲ!

ಮಹಾಪುರುಷರ ಜೀವನದ ಸಂದೇಶವೆಂದರೆ : ನಾವು ನಮ್ಮ ಜೀವನವನ್ನು ಉದಾತ್ತೀಕರಿಸಬಲ್ಲೆವು ಮತ್ತು ಕಾಲ ಎಂಬ ಮರಳ ರಾಶಿಯ ಮೇಲೆ ನಮ್ಮ ಹೆಜ್ಜೆಯ ಗುರುತನ್ನು ಬಿಟ್ಟು ಹೋಗಬಲ್ಲೆವು.

-ಲಾಂಗ್‌ಫೆಲೋ

ಪುಸ್ತಕ ವಿಮರ್ಶೆ

ಶ್ರೀತ್ಯಾಗರಾಜರ ಕೃತಿಗಳಲ್ಲಿ ಸಂಗೀತ ಮತ್ತು ಭಕ್ತಿ : ಒಂದು ಅಧ್ಯಯನ ; ಲೇಖಕರು : ಡಾ|| ಶ್ರೀಮತಿ ಟಿ.ಎನ್.ಪದ್ಮ . ಪ್ರಕಾಶಕರು ; ಸುವಿದ್ಯಾ ಪ್ರಕಾಶನ, ೩. ಒಂದನೆಯ ಅಡ್ಡ ರಸ್ತೆ, ರಾಮಕೃಷ್ಣ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು -೫೬೦೦೧೯. ಡೆಮ್ಮಿ ೧/೮, ಪುಟಗಳು ೪೮೮+ ಆರ್ಟ್‌ಪ್ಲೇಟ್‌ಗಳು ೪ ಪುಟ, ೧೯೯೮, ಬೆಲೆ ರೂ. ೨೦೦.

ಪ್ರಸ್ತುತ ಈ ಮಹಾಪ್ರಬಂಧದಲ್ಲಿ ಟಿ.ಎನ್.ಪದ್ಮ ಅವರು ತ್ಯಾಗರಾಜರ ಕೃತಿಗಳಲ್ಲಿ ಪಲ್ಲವಿಸಿರುವ ಸಾಹಿತ್ಯ, ರಾಗ, ಭಕ್ತಿಭಾವಗಳ ನಿರೂಪಣೆಯನ್ನು ಉದ್ಧರಣ ಪೂರಕದೊಡನೆ ಸಿದ್ಧಪಡಿಸಿದ್ದಾರೆ. ಕೃತಿಗಳ ಅಭಿನ್ನ ಅಂಗವಾಗಿ ಹೊರಹೊಮ್ಮಿರುವ ತ್ಯಾಗರಾಜರ ಆರ್ಜಿತ ಜ್ಞಾನ, ಸ್ವಾನುಭವ, ಅಭಿಮತ ಹಾಗೂ ಭಾವೋಕ್ತಿಗಳ ಅಂತರಾಳವನ್ನು ಆಯ್ದಕೃತಿಗಳ ಯುಕ್ತ ಪಂಕ್ತಿ ಮತ್ತು ಭಾವಾರ್ಥ ಮುಖೇನ ಮಂಡಿಸಿದ್ದಾರೆ.

ಪರಮಾನಂದಕ್ಕೆ ಸಾಧಕವೆನಿಸಿರುವ ನಾದಯೋಗ, ಸಾಧನೆ, ಸಾಧ್ಯ, ಸಾಧಕನ ಭೂಮಿಕೆ, ಸಿದ್ಧಿ ಇತ್ಯಾದಿಗಳು. ಆ ಕೃತಿಕೀರ್ತನೆಗಳು ಸಾರುವ ತ್ಯಾಗರಾಜರ ಸ್ವಾನುಭವಗಳಾಗಿದ್ದು, ಅವುಗಳ ಅವಲೋಕನ ಸಂಗೀತ ಕಲೆಯ, ಸಂಗೀತಯೋಗದ ತತ್ವದರ್ಶಕಗಳಾಗಿವೆ. ಸಹೃದಯರಾಗಿರುವ ಯೋಗಿ ಮತ್ತು ಸಾಧಕರಲ್ಲದೆ ಕೇವಲ ರಾಗಲಯಜ್ಞರು ನಾದಯೋಗಿಗಳಾಗಲಾರರು ಎಂಬುದು ತ್ಯಾಗರಾಜ ಉಕ್ತಿ. ಅವರ ಕೃತಿಗಳ ರಾಗ ಸಂಯೋಜನೆ, ಸಂಚಾರಗಳು ಸಾಹಿತ್ಯಪೋಷಕಗಳಾಗಿರುವುದರೊಂದಿಗೆ ರಾಗಲಕ್ಷಣ ದೀಪಿಕೆಗಳೂ ಆಗಿವೆ.

ಸರಳ, ಮಧ್ಯಮ ಮತ್ತು ಸಂಕೀರ್ಣ ವ್ಯಾಕರಣ ಸಾಧ್ಯತೆಗಳನ್ನು ಮೈಗೂಡಿಸಿರುವ ಆ ಸಾಹಿತ್ಯ ತ್ಯಾಗರಾಜರ ಭಾಷಾಜ್ಞಾನ ಪ್ರತೀಕಗಳೇ ಹಾಗೂ ಅವುಗಳ ಇಣುಕು ನೋಟವೇ ಈ ಮಹಾಪ್ರಬಂಧ.

ತೀರ್ಥಕ್ಷೇತ್ರ ಪರ್ಯಟನೆ ಒಂದು ಪರಂಪರೆ ಮತ್ತು ಅಂತರಂಗಶುದ್ಧಿಯ ಪ್ರಕ್ರಿಯೆ. ತ್ಯಾಗರಾಜರು ಹಲವಾರು ತೀರ್ಥಕ್ಷೇತ್ರಗಳಿಗೆ ಪಾದಯಾತ್ರೆ ನಡೆಸಿ ಪ್ರಸನ್ನತೆಯನ್ನು ಪಡೆದು ಸಮಯಸ್ಫೂರ್ತಿಯಿಂದ ವಿಶಿಷ್ಟವಾದ ಕೃತಿಗಳನ್ನು ರಚಿಸಿದ್ದಾರೆ. ಈ ಪ್ರಬಂಧದಲ್ಲಿ ಅವುಗಳ ರಚನಾ ಹಿನ್ನೆಲೆ ಮತ್ತು ಸಹಸಂದರ್ಭ ವಿವರಣೆ ಇವೆ. ತ್ಯಾಗರಾಜ ವಿರಚಿತ ಸಂಗೀತ ನಾಟಕಗಳ ಸುಂದರ ರೂಪದರ್ಶನವೂ ಇದರಲ್ಲಿ ಸೇರಿದೆ.

ತ್ಯಾಗರಾಜರು ತಾವು ನಂಬಿದ್ದ ಭಕ್ತಿ, ಅದರ ಬಹುಮುಖ, ನಾನಾ ಭಾವಗಳನ್ನು ತಮ್ಮ ಕೃತಿಗಳಲ್ಲಿ ತುಂಬಿ ಆಜೀವಪರ್ಯಂತ ಶ್ರದ್ಧೆಯಿಂದ ಯೋಗಿಯೆನಿಸಿ ಸಾಹಿತ್ಯ ರೂಪದಲ್ಲಿ ನೀಡಿದ ಕೊಡುಗೆಯ ಸವಿಸ್ತಾರ- ಸೋದಾಹರಣ ವಿಶ್ಲೇಷಣೆಗೆ ಈ ಪ್ರಬಂಧದ ಸಿಂಹಪಾಲನ್ನು ನೀಡಲಾಗಿದೆ.

ಉದ್ಧೃತ ಕೃತಿ-ಸಾಹಿತ್ಯಗಳ ಉತ್ತಮ ಸಂಕಲನ, ಅಧ್ಯಯನ ನಡೆಸಿರುವ ಈ ಮಹಾಪ್ರಬಂಧ, ಸಂಗೀತಕ್ಕೆ ಸಂಬಂಧಿಸಿದಂತೆ ಇದರ ಉತ್ಕರ್ಷಿತ ಮಹತ್ವದಿಂದ ರಸಿಕವಾಚಕ ವಿದ್ಯಾರ್ಥಿವೃಂದಕ್ಕೆ ಶ್ರೇಷ್ಠ ಮಾರ್ಗದರ್ಶಿಯಾಗಿದೆ.

ಬಿ.ಸುರೇಶ
ಎಂಐಜಿ ೪೭, ಮೂರನೆಯ ಹಂತ
ಕುವೆಂಪುನಗರ, ಮೈಸೂರು ೫೭೦ ೪೦೭

ಓದುಗರ ಅನಿಸಿಕೆ

ಮಾನ್ಯ ಸಂಪಾದಕರಿಗೆ ನಮಸ್ಕಾರಗಳು.

ಮಾರ್ಚ್‌೨೦೦೦ದ ಪುಸ್ತಕ ಪ್ರಪಂಚ ಸಂಚಿಕೆ ಕೈಸೇರಿತು. ಇದರಲ್ಲಿ ಪ್ರಕಟವಾ ಎಂ.ವಿ. ಚಕ್ರಪಾಣಿ ರವರು ಬರೆದ ಸ್ಥಾನಬೆಲೆ ಲೇಖನ ತುಂಬಾ ಅರ್ಥಪೂರ್ಣವಾಗಿ ಬಂದಿದ ಅದರಲ್ಲಿ ಚುನಾವಣೆಯಲ್ಲಿ ಗೆದ್ದು ಪಂಚಾಯ್ತಿ ಮೆಂಬರು ಆದಮೇಲೆ ಅವರು ಆಡಳಿತವನ ಹೇಗೆ ನಡೆಸುತ್ತಾರೆ ಎಂಬುದು ಈ ಲೇಖನದಿಂದ ನಮಗೆ ತಿಳಿಯುತ್ತದೆ. ಈ ರೀತಿ ಲೇಖನವನ ಪ್ರಕಟಿಸಿರುವುದಕ್ಕೆ ಅಭಿನಂದನೆಗಳು. ಇದೇ ರೀತಿ ಉತ್ತಮ ಬರಹಗಳು ಮುಂದೆ ಪ್ರಕಟವಾಗ ಎಂದು ಆಶಿಸುತ್ತೇನೆ.

ದಿನಾಂಕ ೧೫.೩.೨೦೦೦
ಸ್ಥಳ: ನೆಗಳೂರು

ಎಚ್.ಎಂ. ಪ್ರಕಾಶ
ಸಂತೇಪೇಟೆ, ನೆಗಳೂರು
ಹಾವೇರಿ ತಾಲ್ಲೂಕು

ಮಾನ್ಯ ಸಂಪಾದಕರಿಗೆ ಹೃದಯಪೂರ್ವ ನಮನಗಳು.

ಮಾರ್ಚ್ ಪುಸ್ತಕಪ್ರಪಂಚದಲ್ಲಿ ಶ್ರೀ ಸ.ಜ. ನಾಗಲೋಟಿಮಠ ಅವರು ಬರೆ ಮನೆಗೆಲಸದವಳ ಬಗ್ಗೆ ಎಚ್ಚರವಿರಲಿ ಲೇಖನ ಉತ್ತಮವಾಗಿದ್ದು ಈಗಿನ ಸಮಾಜ ಅರಿತುಕೊಳ್ಳಲೇಬೇಕಾದಂತಹ ಒಂದು ನಿಜ ಲೇಖನ. ಇದಕ್ಕೆ ಪುಸ್ತಕ ಪ್ರಪಂಚ ಸಂಪಾದಕೀಯಮಂಡಳಿಗೆ ಗುರುಗದ್ದಿಗೇಶ್ವರ ಆಶೀರ್ವದಿಸಲಿ.

ದಿನಾಂಕ : ೨೦.೩.೨೦೦೦
ಸ್ಥಳ: ನೆಗಳೂರು

ಇಂತಿ ತಮ್ಮ
ಎಂ.ಜಿ. ದಿಗಂಬರ ಮಠ
ಜಿ.ಎಸ್. ದಿಗಂಬರ ಮಠ, ಎಸ್.ಬಿ. ಶಿರಹಟ್ಟಿ
ಬಸವರಾಜ ಜಿ. ಮಾಲಶೆಟ್ಟಿ
ನೆಗಳೂರು, ಹಾವೇರಿ ತಾಲ್ಲೂಕು

...ರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಜಿ. ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

Reg. No KRNN-29 / WPP 6

Licence No. 21
Licenced to Post with Payment

ಸಮಿತಿಯ ಹೊಸ ಪ್ರಕಟಣೆಗಳು

ಕಾರಂತ ದರ್ಶನ

ಕಾರಂತರ ಬದುಕು, ಬರಹ ಸ್ಮೃತಿಗಳನ್ನೊಳಗೊಂಡ ನಾಡಿನ ಗಣ್ಯರ, ಹೆಸರಾಂತ ಬರಹಗಾರರ, ಅಭಿಮಾನಿಗಳ ಲೇಖನಗಳ ಸಂಗ್ರಹ—**ಕಾರಂತ ದರ್ಶನ**

ಕಾರಂತರ ವಿಶಿಷ್ಟ ಚಿತ್ರಗಳೊಂದಿಗೆ ಡೆಮಿ ೧/೮, ೧೬೪ ಪುಟಗಳ ಅಪೂರ್ವಕೃತಿ.

ಬೆಲೆ : ರೂ. ೫೪–೦೦

ಸಂಪಾದಕೀಯ ಸಂಕಲನ

ಪುಸ್ತಕ ಪ್ರಪಂಚದಲ್ಲಿ ಈ ಹಿಂದೆ ಪ್ರಕಟಗೊಂಡ ಡಾ॥ ದೇಜಗೌ ಅವರ ಸಂಪಾದಕೀಯ ಲೇಖನಗಳ ಸಂಗ್ರಹ—**ಸಂಪಾದಕೀಯ ಸಂಕಲನ** ಬೆಲೆ : ರೂ. ೫೦–೦೦

ನಾಡಿನ ಖ್ಯಾತ ಕಲಾವಿದರಾದ ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖ ಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಡಿ.ಟಿ.ಪಿ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಈ ಕೃತಿಗಳು ಕಡಿಮೆ ದರದಲ್ಲಿ ಲಭ್ಯ. ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ: ೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006